॥ ಶ್ರೀಮೂಲರಾಮೋ ವಿಜಯತೇ ॥

॥ ಶ್ರೀಗುರುರಾಜೋ ವಿಜಯತೇ ॥

॥ ಸ್ತೋತ್ರಮುಕ್ತಾವಲೀ ॥

(ಸಮಗ್ರ ಸ್ತೋತ್ರಗಳ ವಿಶ್ವಕೋಶ)

ಪ್ರಧಾನ ಸಂಪಾದಕರು
ರಾಜಾ. ಎಸ್. ರಾಜಗೋಪಾಲಾಚಾರ್ಯ
ಮಂತ್ರಾಲಯ

ಸಂಪಾದಕರು
ವಿದ್ವಾನ್. ರಾಮಚಂದ್ರಾಚಾರ್ಯ ಪುರೋಹಿತ್
ಉಜಿರೆ, ದಕ್ಷಿಣ ಕನ್ನಡ

ಪ್ರಕಾಶಕರು
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

STOTRAMUKTAVALI

Edited, Introduction and Explanatory Notes by **Vidwan Ramachandracharya Purohit** and Published by Jagadguru Sriman Madhwacharya Moola Mahasamsthanam Sri Raghavendra Swamy Mutt.

First Edition : MAY - 2006 — 3000 Copies

Second Edition : AUGUST - 2006 — 3000 Copies

Third Edition : DECEMBER - 2006 — 3000 Copies

Fourth Edition : SEPTEMBER - 2012 - 3000 Copies

© : Publisher

Pages : xxxii + 1312

Price : **100/-** (ಯಾವುದೇ ಕಾರಣಕ್ಕೂ ಹೆಚ್ಚಿಗೆ ಹಣವನ್ನು ನೀಡಬಾರದು)

Typesetted by :
Sri Gurusarvabhouma Vidyunmana Mudranalaya — Ph: 9342651516

Printed at :
Sree Gururaja Offset Printers, Adoni. A.P.
Ph: 08512-251732, M: 09440334832
E-mail: gururajaoffset@gmail.com

ಗ್ರಂಥ ಸಮರ್ಪಣೆ

ಶ್ರೀಹಂಸನಾಮಕ ಪರಮಾತ್ಮನಿಂದ
ಪ್ರವರ್ತಿತವಾದ ಪರಂಪರೆಯಲ್ಲಿ ಬಂದಿರುವ ಸರ್ವಜ್ಞರಾದ
ಶ್ರೀಹಾವನಪವನಾಂಶಸಂಭೂತರಾದ
ಜಗದ್ಗುರು ಶ್ರೀಮನ್ಮಧ್ವಾಚಾರ್ಯರ
ಮೂಲಮಹಾಸಂಸ್ಥಾನಾಧೀಶ್ವರರಾದ
ವೇದಾಂತ ಸಾಮ್ರಾಜ್ಯ
ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾದ
ಶ್ರೀಮದ್ವಿಜಯೀಂದ್ರತೀರ್ಥಶ್ರೀಪಾದಂಗಳವರ ಕರಕಮಲಸಂಜಾತ
ಶ್ರೀಮತ್ಸುಧೀಂದ್ರತೀರ್ಥಶ್ರೀಪಾದಂಗಳವರ ವರಕುಮಾರಕರಾದ
ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರ
ಚರಣಾರವಿಂದಗಳಲ್ಲಿ
ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ
೮೦ನೇ ವರ್ಧಂತ್ಯುತ್ಸವದ ಸಂಸ್ಮರಣಾರ್ಥ ಈ ಗ್ರಂಥವನ್ನು ಭಕ್ತಿಶ್ರದ್ಧಾದರ
ನಮನಪೂರ್ವಕವಾಗಿ ಸಮರ್ಪಿಸಲಾಗಿದೆ.

ರಾಜಾ. ಎಸ್. ರಾಜಗೋಪಾಲಾಚಾರ್ಯ

ಆಶೀರ್ವಚನ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯಪ್ರಮಾಣಪಾರಾವಾರಪಾರಂಗತ ಸರ್ವತಂತ್ರಸ್ವತಂತ್ರ
ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ
ಶ್ರೀಮನ್ಮೂಲರಘೂಪತಿವೇದವ್ಯಾಸದೇವದಿವ್ಯಶ್ರೀಪಾದಪದ್ಮಾರಾಧಕ ಜಗದ್ಗುರು ಶ್ರೀಮನ್ಮಧ್ವಾಚಾರ್ಯ
ಮೂಲಮಹಾಸಂಸ್ಥಾನಾಧೀಶ್ವರರಾದ ಶ್ರೀರಾಘವೇಂದ್ರಸ್ವಾಮಿಗಳವರ ಮಠದ
ವೇದಾಂತಸಾಮ್ರಾಜ್ಯದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರರಾದ ಶ್ರೀಮತ್ಸುಯಮೀಂದ್ರತೀರ್ಥ
ಶ್ರೀಪಾದಂಗಳವರ ಕರಕಮಲಸಂಜಾತರಾದ ಶ್ರೀಮತ್ಸುಜಯೀಂದ್ರತೀರ್ಥಶ್ರೀಪಾದಂಗಳವರ
ವರಕುಮಾರಕರಾದ

ಶ್ರೀಮತ್ಸುಶಮೀಂದ್ರತೀರ್ಥಶ್ರೀಪಾದಂಗಳವರು

ಮತ್ತು

ಶ್ರೀಮತ್ಸುಯತೀಂದ್ರತೀರ್ಥಶ್ರೀಪಾದಂಗಳವರು

ಮಾಡುವ ನಾರಾಯಣ ಸ್ಮರಣೆಗಳು

ಅನಂತಗುಣಪರಿಪೂರ್ಣನಾದ ಶ್ರೀ-ಭೂಸಹಿತನಾದ ಭಗವಂತನಲ್ಲಿ ಸರ್ವೋತ್ತಮ ಭಕ್ತಿಯನ್ನು, ಬ್ರಹ್ಮ, ವಾಯು, ಗರುಡ, ಶೇಷ, ರುದ್ರ ಮುಂತಾದ ದೇವತೆಗಳಲ್ಲಿ ತಾರತಮ್ಯಾನುಸಾರವಾಗಿ ಭಕ್ತಿಯನ್ನು ಯಾರು ಮಾಡುತ್ತಾರೋ ಅವರನ್ನು ವಾಯುದೇವರು ಕಾಪಾಡುತ್ತಾರೆ. ಶ್ರೀಹರಿವಾಯುಗುರುಗಳಲ್ಲಿ ಭಕ್ತಿಮಾಡಬೇಕು ಎಂದರೆ ಅವರ ಗುಣಗಾನ ಮಾಡಬೇಕು. ಅವರ ಗುಣಗಾನ ಮಾಡಬೇಕಾದರೆ ಸ್ತೋತ್ರಸಾಹಿತ್ಯ ಬೇಕು. ಶ್ರೀಗುರುರಾಜರ ಪ್ರೇರಣೆಯಂತೆ ತಾರತಮ್ಯಾನುಸಾರ ಎಲ್ಲ ಸ್ತೋತ್ರಗಳನ್ನೂ ಸಂಗ್ರಹಿಸಿ, ವಿಸ್ತಾರವಾದ ಸ್ತೋತ್ರಸಂಪುಟವನ್ನು ಶ್ರೀಮಠದ ಮತಿಯಿಂದ ಶ್ರೀಗುರುರಾಜರ ಭಕ್ತವೃಂದಕ್ಕೆ ತಲುಪಿಸಬೇಕೆಂದು ಸಂಕಲ್ಪಿಸಿ, ಅದರ ಸಂಪಾದಕತ್ವ ಜವಾಬ್ದಾರಿಯನ್ನು ನಮ್ಮ ಶಿಷ್ಯರಾದ ವಿದ್ವಾನ್ ರಾಮಚಂದ್ರಾಚಾರ್ಯ ಪುರೋಹಿತರಿಗೆ ಆದೇಶವಿತ್ತು ಅನುಗ್ರಹಿಸಿದೆವು. ರಾಮಚಂದ್ರಾಚಾರ್ಯ ಪುರೋಹಿತರು ಬಹಳ ಶ್ರಮಪಟ್ಟು ಅನೇಕ ಸ್ತೋತ್ರಗಳನ್ನು ಸಂಗ್ರಹಮಾಡಿ **'ಸ್ತೋತ್ರಮುಕ್ತಾವಲೀ'** ಎಂಬ ಈ ಬೃಹತ್ ಸಂಪುಟವನ್ನು ಸಿದ್ಧಪಡಿಸಿದ್ದಾರೆ. ಈ ಗ್ರಂಥ ಹೊರಬರಲು ಇನ್ನೂ ಅನೇಕರು ಸಹಕರಿಸಿದ್ದಾರೆ. ಈಗಾಗಲೇ ಎರಡು ಆವೃತ್ತಿಗಳನ್ನು ಪೂರೈಸಿರುವ ಈ ಗ್ರಂಥವು ಮೂರನೇ ಆವೃತ್ತಿಗೆ ಸಿದ್ಧವಾಗಿರುವುದು ಈ ಪುಸ್ತಕದ ಜನಪ್ರಿಯತೆಯನ್ನು ತೋರಿಸುತ್ತದೆ. ಈ ಮುಕ್ತಾವಲೀಯು ಪ್ರತಿಯೊಬ್ಬ ಭಕ್ತರಿಗೂ ದೊರೆಯುವಂತಾಗಿ ಅನೇಕ ಪುನರ್ಮುದ್ರಣಗೊಳ್ಳುವಂತಾಗಲೆಂದು ಆಶಿಸುತ್ತಾ ಹಾಗೂ ಈ ಗ್ರಂಥದ ಪಠಣ-ಪಾರಾಯಣಕಾದಿಗಳನ್ನು ಮಾಡುವ ಸಕಲ ಭಗವದ್ಭಕ್ತರಿಗೂ ಶ್ರೀರಾಘವೇಂದ್ರತೀರ್ಥಗುರ್ವಂತರ್ಗತ, ಭಾರತೀರಮಣಮುಖ್ಯಪ್ರಾಣಾಂತರ್ಗತ ಅಸ್ಮದುಪಾಸ್ಯಮೂರ್ತಿ ಸೀತಾಪತಿ ಶ್ರೀಮೂಲರಾಮಚಂದ್ರದೇವರು ಸಕಲ ಸನ್ಮಂಗಳವನ್ನುಂಟು ಮಾಡಲೆಂದು ಪ್ರಾರ್ಥಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು.

ಆಶೀರ್ವಚನ

Sri Pejavara Adhokshaja Matha
Jagadguru Sri Madhwacharya Samsthana
Udupi-576101. Karnataka
Phone : 0820-2524198, 2526598
Mobile : 98454-68508

ಶ್ರೀಪೇಜಾವರ ಅಧೋಕ್ಷಜ ಮಠ
ಜಗದ್ಗುರು ಶ್ರೀಮಧ್ವಾಚಾರ್ಯ ಸಂಸ್ಥಾನ
ಉಡುಪಿ-576101. ಕರ್ನಾಟಕ
ದೂರವಾಣಿ : 0820-2524198, 2526598
ಮೊಬೈಲ್ : 98454-68508

ದಿನಾಂಕ : ೨೮.೦೩.೨೦೦೬

ಶ್ರೀರಾಘವೇಂದ್ರಸ್ವಾಮಿಗಳಮಠದಿಂದ ಶ್ರೀರಾಜಗೋಪಾಲಾಚಾರ್ಯರ ಪ್ರಧಾನ ಸಂಪಾದಕತ್ವದಿಂದ ಪ್ರಕಟಗೊಂಡ ಸ್ತೋತ್ರಗಳ ಬೃಹತ್ ಸಂಗ್ರಹವನ್ನು ಕಂಡು ನಮಗೆ ಬಹಳ ಸಂತೋಷವಾಗಿದೆ. ಸ್ತೋತ್ರಗಳ ಪಾರಾಯಣದಿಂದ ಎಲ್ಲರಿಗೂ ಮನಸ್ಸಿಗೆ ಶಾಂತಿ, ಧೈರ್ಯ, ಸಮೃದ್ಧಿ ದೊರೆಯುತ್ತದೆ. ತಮಗೆ ಇಷ್ಟವೆನಿಸುವ ಗುರುದೇವತಾ ಸ್ತೋತ್ರಗಳಲ್ಲಿ ಪಾರಾಯಣ ಮಾಡಲು ಭಕ್ತರಿಗೆ ಅನುಕೂಲವಾಗುವಂತೆ ಸ್ತೋತ್ರಗಳ ಈ ವಿಶ್ವಕೋಶವನ್ನು ಪ್ರಕಟಿಸಿ ರಾಘವೇಂದ್ರಸ್ವಾಮಿ ಮಠದಿಂದ ಧಾರ್ಮಿಕ ಜಗತ್ತಿಗೆ ಮಹೋಪಕಾರವಾಗಿದೆ. ಇಂತಹ ಗ್ರಂಥವನ್ನು ಪ್ರಕಟಿಸುತ್ತಿರುವ ಅನೇಕಾನೇಕ ಮಹಾಕಾರ್ಯಗಳ ಪ್ರವರ್ತಕರಾದ ರಾಜಾ. ಎಸ್. ರಾಜಗೋಪಾಲಾಚಾರ್ಯರನ್ನು, ಇದರ ಸಂಪಾದಕರಾದ ನಮ್ಮ ಪ್ರಿಯಶಿಷ್ಯ ರಾಮಚಂದ್ರ ಪುರೋಹಿತರನ್ನು ಈ ಸಂದರ್ಭದಲ್ಲಿ ಸಾಸು ಅಭಿನಂದಿಸುತ್ತಾ ಇದರ ಧಾರ್ಮಿಕ ಜಗತ್ತಿಗೆ ಪಡೆಯಲೆಂದು ಆಶಿಸುತ್ತೇವೆ.

ಇತಿ ನಾರಾಯಣಸ್ಮರಣೆಗಳು

POORNA PRAJNA VIDYAPEETHA
Katriguppa Main Road, Bangalore-560028, Phone : 080-26791728, Mobile : 9845468508,
E-mail : ppsmb@vsnl.com

ಸಂಪಾದಕರ ನುಡಿ

ಪ್ರತಿತತಿಗಳಭಿಮಾನಿ ಲಕುಮೀ । ಸ್ತುತಿಗಳಿಗೆ ಗೋಚರಿಸದ ಪ್ರತಿ ।
ಹತ ಮಹೈಶ್ವರ್ಯಾದ್ಯಖಿಲಸದ್ಗುಣಗಣಾಂಬೋಧಿ ॥
ಪ್ರತಿದಿವಸ ತನ್ನಂಘ್ರಿಸೇವಾ । ರತ ಮಹಾತ್ಮರು ಮಾಡುತಿಹ ಸಂ ।
ಸ್ತುತಿಗೆ ವಶನಾಗುವನಿವನ ಕಾರುಣ್ಯಕೇನಂಬೆ ॥

ಎಂಬ ಹರಿಕಥಾಮೃತಸಾರದ ಮಾತಿನಂತೆ ಶ್ರೀಹರಿಯು ಶ್ರುತಿತತಿಗಳಭಿಮಾನಿ ಮಹಾಲಕ್ಷ್ಮಿಯು ಸ್ತುತಿಗಳಿಗೆ ಗೋಚರಿಸದ ಅಪ್ರತಿಹತವಾದ ಐಶ್ವರ್ಯಾದಿ ಸದ್ಗುಣ ಸಾಗರನಾದರೂ ತನ್ನ ಭಕ್ತರು ಪ್ರತಿದಿವಸ ಮಾಡುವ ಉತ್ತಮ ಸ್ತುತಿಗೆ ವಶನಾಗುವ ಮಹಾಕರುಣಾಮಯಿ.

ಬಾಲಕನ ಕಲಭಾಷೆ ಜನನಿಯು ।
ಕೇಳಿ ಸುಖಪಡುವಂತೆ ಲಕುಮಿಲೋಲ ।
ಭಕುತರು ಮಾಡುತಿಹ ಸಂಸ್ತುತಿಗೆ ಹಿಗ್ಗುವನು ॥

ಎಂಬ ಮಟನದಂತೆ ಭಗವಂತನ ಕೀರ್ತನೆ, ಸ್ತುತಿ ಪಂಡಿತಪಾಮರರೆಂಬ ಅಂತರವಿಲ್ಲದೆ ಸರ್ವಭಕ್ತಜನರಿಗೆ ನಿತ್ಯೋಪಯೋಗಿ ಸಾಧನವಾಗಿದೆ. ಭಗವಂತನ ನಾಮ, ರೂಪ, ಗುಣ, ಕ್ರಿಯೆ, ಮಹಿಮೆಗಳನ್ನು ಬಿಡಿಯಾಗಿ ಇಡಿಯಾಗಿ ಕೊಂಡಾಡುವ ಸ್ತೋತ್ರಪ್ರಕಾರವು "ಕೀರ್ತನಾದೇವ ಕೃಷ್ಣಸ್ಯ ಮುಕ್ತಸಂಗಃ ಪರಂವ್ರಜೇತ್" ಎಂಬ ಭಾಗವತದ ಮಟನದಂತೆ ಮುಕ್ತಿಮಾರ್ಗದ ಸೋಪಾನವಾಗಿದೆ. "ಪ್ರಾಪ್ತಾನ್ಯನುತಿಪಾಪೌಘರಸಾನಾಂ ಪಾವಯಾಮ್ಯಹಂ" ಎಂಬ ಮಾತಿನಂತೆ ಇತರರನ್ನು ಸ್ತುತಿಸುವ ಮೂಲಕ ಪಾಪಲೇಪಿತವಾದ ನಾಲಿಗೆಯನ್ನು ಹರಿಗುರುಗಳ ಸ್ತುತಿಯು ಪಾವನಗೊಳಿಸುತ್ತದೆ.

"ಪಾತ್ರರ ಸಂಗಡ ಯಾತ್ರೆಯ ಚರಿಸಿ ವಿಧಾತೃಪಿತನ ಗುಣಸ್ತೋತ್ರಗಳ, ಶ್ರೋತ್ರದಿ ಸವಿದು ವಿಚಿತ್ರಾನಂದದಿ ಗಾತ್ರವ ಮೆರೆದು ಪರತ್ರವ ಪಡೆವುದೇ **ಫಲವಿದು ಬಾಳ್ವುದಕೆ**" ಎಂಬ ಹರಿದಾಸರ ಮಾತಿನಂತೆ ಭಗವಂತನ ಸ್ತೋತ್ರಗಳನ್ನು ಕೇಳುತ್ತ ಆನಂದಿಸುವುದೇ ಬಾಳಿನ ಗುರಿಯಾಗಿದೆ.

ಹರಿಯ ಸೇವೆ ಮಾಡದವನ ಹರಿಯಗುಣಗಳಿಸದವನ ।
ಹರಿಯ ಕೊಂಡಾಡದವನ ಹರಿಯ ತಿಳಿಯದವನ ಜನ್ಮ ವ್ಯರ್ಥವಲ್ಲವೇ ॥

ಎಂದು ಪುರಂದರದಾಸರು ನುಡಿದಿದ್ದಾರೆ. "ಸ್ಮರ್ತವ್ಯಃ ಸತತಂ ವಿಷ್ಣುಃ" ಎಂಬ ಧ್ಯೇಯ- ವಾಕ್ಯ ಸ್ತೋತ್ರಸಾಹಿತ್ಯದ ಪ್ರೇರಕಶಕ್ತಿ.

ಸ್ತೋತ್ರಸಾಹಿತ್ಯವು ಪಠಣ ಮಾಡುವವರ ಹಾಗೂ ಕೇಳುವವರ ಹೃದಯದಲ್ಲಿ ಭಕ್ತಿಧಾರೆಯನ್ನು ಚಿಮ್ಮಿಸುವ ಮೂಲಕ ಹರಿಗುರುಗಳಲ್ಲಿ ಚಿತ್ತವು ಏಕಾಗ್ರವಾಗಿ ದ್ರವಿಸು- ವಂತೆ ಮಾಡುತ್ತದೆ. ಸ್ತೋತ್ರಗಳು ಪುಟ್ಟದಾಗಿ ಸೋಡಲು ವಾಮನನಂತೆ ಕಂಡರೂ ಮುನ್ನಡೆದಾಗ ಆಕಾಶವನ್ನೇ ಮುಟ್ಟುವ ತ್ರಿವಿಕ್ರಮನಂತೆ ಭಕ್ತಿಯಿಂದ ನಮ್ಮನ್ನು ಮುಗಿಲಿಗೆ ಮುಟ್ಟಿಸುತ್ತವೆ.

ಸ್ತೋತ್ರಸಾಹಿತ್ಯವು ಅತ್ಯಂತ ಪ್ರಾಚೀನವಾದದ್ದು. ವೇದಗಳಲ್ಲಿ, ಪಂಚರಾತ್ರಾದಿ ಆಗಮಗಳಲ್ಲಿ, ಅಷ್ಟಾದಶ ಪುರಾಣಗಳಲ್ಲಿ, ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಕಂಡುಬರುವ ಈ ಸ್ತೋತ್ರಸಾಹಿತ್ಯವು ಅನಾದಿಯೂ ನಿತ್ಯವೂ ಆಗಿದೆ. ಇಂತಹ ಪ್ರಾಚೀನ ಪದ್ಧತಿಯನ್ನು ಜಗದ್ಗುರು ಆಚಾರ್ಯ ಮಧ್ವರು ದ್ವಾದಶಸ್ತೋತ್ರ, ಶ್ರೀನರಸಿಂಹಸ್ತುತಿಗಳನ್ನು ರಚಿಸುವ ಮೂಲಕ ಸರ್ವಮೂಲಗಳ ಅದ್ಭುತ ಮಂಗಳಶ್ಲೋಕ ರಚನೆಯ ಮೂಲಕ ಈ ಸತ್ಸಂಪ್ರದಾಯವನ್ನು ಸ್ಥಿರಗೊಳಿಸಿದರು. ಅನಂತರ ಶ್ರೀತ್ರಿವಿಕ್ರಮಪಂಡಿತಾಚಾರ್ಯರು, ಶ್ರೀನಾರಾಯಣಪಂಡಿತಾಚಾರ್ಯರು ವಿಷ್ಣುಸ್ತುತಿ, ವಾಯುಸ್ತುತಿ, ನೃಸಿಂಹಸ್ತುತಿ, ಶಿವಸ್ತುತಿ ಮೊದಲಾದವುಗಳನ್ನು ರಚಿಸಿ ಮನೆಮಾತಾಗಿದ್ದಾರೆ. ಶ್ರೀವ್ಯಾಸರಾಜರು, ಶ್ರೀವಾದಿರಾಜ ಗುರುಗಳು ರಚಿಸಿದ ಸಾಕಷ್ಟು ಸ್ತೋತ್ರಗಳೆಂದು ಭಕ್ತಜನ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿವೆ.

ಸ್ತೋತ್ರಸಾಹಿತ್ಯಕ್ಕೆ ಶ್ರೀಮಧ್ವಾಚಾರ್ಯರ ಮೂಲಮಹಾಸಂಸ್ಥಾನವೆಂದೇ ಪ್ರಸಿದ್ಧವಾದ ವಿದ್ಯಾಮಠವನ್ನಿಸಿದ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಕೊಡುಗೆಯಂತೂ ಮಹತ್ತರ- ವಾದುದು. ಶ್ರೀವಿಜಯೀಂದ್ರತೀರ್ಥರು ರಚಿಸಿದ ಶ್ರೀನರಸಿಂಹನ ವಿರಾಡ್ರೂಪವನ್ನು ಧ್ಯಾನಿಸುವ ಮಂತ್ರತುಲ್ಯವಾದ ಶ್ರೀನೃಸಿಂಹಾಷ್ಟಕ, ಭಗವಂತನಲ್ಲಿ ಶರಣಾಗತನಾಗ- ಬೇಕಾದ ವಿಧಾನವನ್ನು ಅರುಹುವ ದುರಿತಾಪಹಾರಸ್ತೋತ್ರ ಹಾಗೂ ಶ್ರೀವ್ಯಾಸರಾಜರ ಮತ್ತು ಶ್ರೀಪಾದರಾಜರ ಮೇಲೆ ರಚಿಸಿದ ಸ್ತೋತ್ರಗಳು, ವಿಷ್ಣುಸ್ತುತಿವ್ಯಾಖ್ಯಾನ ಪ್ರಸಿದ್ಧವಾಗಿವೆ. ಶ್ರೀಸುಧೀಂದ್ರತೀರ್ಥರ ಅಲಂಕಾರಮಂಜರೀ, ಶ್ರೀವಿಜಯೀಂದ್ರಸ್ತುತಿ, ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ರಚಿಸಿದ ಶ್ರೀರಾಮಚಾರಿತ್ರ್ಯಮಂಜರೀ, ಶ್ರೀಕೃಷ್ಣಚಾರಿತ್ರ್ಯಮಂಜರೀ, ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಭಾಷ್ಯಸಂಗ್ರಹ, ಪ್ರಾತಃಸಂಕಲ್ಪಗದ್ಯ, ನದೀತಾರತಮ್ಯಸ್ತೋತ್ರ, ಅದ್ಭುತಶ್ಲೋಕಗಳು, ಶ್ರೀಸುಮತೀಂದ್ರರು ರಚಿಸಿರುವ ಶ್ರೀರಾಮದಂಡಕ, ಕೇಶವಾದಿಚತುರ್ವಿಂಶತಿಲಕ್ಷಣಮೂರ್ತಿಸ್ತುತಿ, ಶ್ರೀರಾಮ- ತಾರಾವಲೀ, ಶ್ರೀಯೋಗೀಂದ್ರತಾರಾವಲೀ, ಶ್ರೀರಾಘವೇಂದ್ರರ ಅಮೋಘ ಕೃತಿಗಳನ್ನು ಕೊಂಡಾಡುವ ಶ್ರೀವಾದೀಂದ್ರರ ಗುರುಗುಣಸ್ತವನ, ಶ್ರೀಸುಧೇಂದ್ರರು ರಚಿಸಿದ ಗುರುಸ್ತೋತ್ರದಂಡಕ, ಶ್ರೀಸುಜ್ಞಾನೇಂದ್ರರು ಬರೆದ ಶ್ರೀರಾಮಪ್ರಭಾತಪಂಚಕ, ಶ್ರೀಸುಜನೇಂದ್ರರು ರಚಿಸಿದ ಶ್ರೀಸುಬೋಧೇಂದ್ರಸ್ತುತಿ, ಶ್ರೀಸುಪ್ರಜ್ಞೇಂದ್ರರು ರಚಿಸಿದ ಶ್ರೀಸುಗುಣೇಂದ್ರಪಂಚರತ್ನ- ಮಾಲಿಕಾಸ್ತೋತ್ರ, ಶ್ರೀಸುವಿದ್ಯೇಂದ್ರರ ಗುರುಸ್ತೋತ್ರದಂಡಕ, ಶ್ರೀಕೃಷ್ಣಾವಧೂತರು ರಚಿಸಿದ ಶ್ರೀರಾಘವೇಂದ್ರತಂತ್ರಾಂತರ್ಗತ ಹಲವಾರು ಸ್ತೋತ್ರಗಳು, ಅಷ್ಟಕೃಷ್ಣಾಚಾರ್ಯರ ಶ್ರೀರಾಘವೇಂದ್ರ- ಸ್ತೋತ್ರ, ಶ್ರೀರಾಘವೇಂದ್ರಾಷ್ಟಕ, ಶ್ರೀಗುರುಜಗನ್ನಾಥದಾಸರು ರಾಯರನ್ನು ಕುರಿತು ರಚಿಸಿದ ಅನೇಕ ಸ್ತೋತ್ರಗಳು, ಶ್ರೀಲಕ್ಷ್ಮೀನಾರಾಯಣಾಚಾರ್ಯರ ದಶಾವತಾರಮಾಲಿಕಾ ಸ್ತೋತ್ರ, ಶ್ರೀಮಠದ ಪರಂಪರೆಯಲ್ಲಿ ಬಂದ ರಾಯರ ಭಕ್ತರಾದ, ಶ್ರೀಮಠದ ಶಿಷ್ಯರುಗಳೂ ಆದ ಶ್ರೀಪಂಚಮುಖಿ ರಾಘವೇಂದ್ರಾಚಾರ್ಯರು, ಶ್ರೀ ರಿತ್ತಿ ವೆಂಕಣ್ಣಾಚಾರ್ಯರು, ಶ್ರೀ ರಾಜಾ. ಎಸ್. ಗುರುರಾಜಾಚಾರ್ಯರು, ಮೊದಲಾದವರು ರಚಿಸಿದ ಅನೇಕ

ಸ್ತೋತ್ರಗಳು ಹೀಗೆ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರ ಮಠದಿಂದ ಸ್ತೋತ್ರ-ಸಾಹಿತ್ಯಕ್ಕೆ ಸಲ್ಲಿಸಿದ ಅಮೋಘ ಕೊಡುಗೆ ಹಾಗೂ ಹರಿಗುರುಗಳ ಸೇವೆಯನ್ನು ಕಂಡಾಗ ಇಂತಹ ಸ್ತೋತ್ರರಾಶಿಯನ್ನು ಒಂದೆಡೆ ಸಂಗ್ರಹಿಸಿ, ವಿಸ್ತಾರವಾದ ಸ್ತೋತ್ರಸಂಪುಟವನ್ನು ಶ್ರೀರಾಘವೇಂದ್ರಗುರುಸಾರ್ವಭೌಮರ ಭಕ್ತಸಮುದಾಯಕ್ಕೆ ತಲುಪಿಸಬೇಕೆಂಬ ಮಹದಾಸೆ ರಾಜಗೋಪಾಲಾಚಾರ್ಯರಲ್ಲಿತ್ತು. ಶ್ರೀಗುರುರಾಜರ ಪ್ರೇರಣೆ ಹಾಗೂ ಅನುಗ್ರಹದಿಂದ ಈ ಒಂದು ಅಪೂರ್ವ ಸೇವೆಯನ್ನು ಸಲ್ಲಿಸುವ ಆಕ್ಷೆಯನ್ನು ಮಾಡುವ ಮೂಲಕ ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು ಅನುಗ್ರಹಿಸಿದರು. ಅದರ ಪ್ರತಿಫಲವೇ ಈ **'ಸ್ತೋತ್ರಮುಕ್ತಾವಲೀ'**.

ಶ್ರೀಮಠದ ಶಿಷ್ಯರಿಗೆ ಪಂಚಾಂಗದೊಂದಿಗೆ ಈ ಸ್ತೋತ್ರಮುಕ್ತಾವಲಿಯನ್ನು ನೀಡ-ಬೇಕೆಂಬ ಮಹದಾಸೆಯಿಂದ ೩,೦೦೦ ಪ್ರತಿಗಳನ್ನು ಮುದ್ರಿಸಬೇಕೆಂದು ಶ್ರೀಮಠವು ಸಂಕಲ್ಪ ಮಾಡಿತ್ತು. ದಯಾಘನ ಭಗವಂತನ ಕರುಣೆ ಹಾಗೂ ಶ್ರೀರಾಯರ ಅನುಗ್ರಹ-ದಿಂದಾಗಿ ಶ್ರೀರಾಯರ ಭಕ್ತರ ಅಪಾರ ಮೆಚ್ಚುಗೆ ಗಳಿಸಿ, ಈಗ ನಾಲ್ಕು ಹಂತಗಳಲ್ಲಿ ೧೨,೦೦೦ ಪ್ರತಿಗಳನ್ನು ಮುದ್ರಿಸುವ ಕಾರ್ಯಕ್ಕೆ ಕೈಹಾಕಿ ಯಶಸ್ವಿಯಾಗಿದೆ.

ಈ ಸಂಪುಟದಲ್ಲಿ ಐನೂರಕ್ಕೂ ಹೆಚ್ಚು ಸ್ತೋತ್ರಗಳನ್ನು ಸಂಗ್ರಹಿಸಲಾಗಿದ್ದು, ಹೆಚ್ಚಿನ ಸ್ತೋತ್ರಗಳಿಗೆಲ್ಲಾ ಕರ್ತೃಪರಿಚಯ, ಸ್ತೋತ್ರಸಾರಾಂಶ ಹಾಗೂ ಫಲಶ್ರುತಿ ಇವುಗಳಿಂ-ದೊಡಗೂಡಿದ ಟಿಪ್ಪಣಿಯನ್ನು ನೀಡಿರುವುದು ಒಂದು ವೈಶಿಷ್ಟ್ಯ. ಶ್ರೀರಾಘವೇಂದ್ರ-ಗುರುಗಳ ಕುರಿತು ೧೦೩ ಸ್ತೋತ್ರಗಳ ಸಂಗ್ರಹವಂತೂ ಬೇರೆಲ್ಲಿಯೂ ಕಾಣಸಿಗದು. ಈ ಸಂಪುಟದಲ್ಲಿ ಐದು ಅಧ್ಯಾಯಗಳಿದ್ದು, ಹರಿಗುರುಗಳ ಭಕ್ತರು ನಿತ್ಯವೂ ಸ್ತೋತ್ರವಾಗಿ ಪಠಿಸುವ ವಿಜಯಕಾವ್ಯಗಳನ್ನು ಏಕತ್ರ ತಂದಿರುವುದು ಇನ್ನೊಂದು ವೈಶಿಷ್ಟ್ಯ.

'ಸ್ತವ್ಯಃ ಸ್ತವಪ್ರಿಯಃ' ಎಂಬ ವಿಷ್ಣುಸಹಸ್ರನಾಮದ ಮಾತಿನಂತೆ ಸರ್ವತಂತ್ರ, ಸರ್ವನಿಯಾಮಕನಾದ, ಜಗದೀಶ್ವರನಾದ ಶ್ರೀಮನ್ನಾರಾಯಣನೇ ಸ್ತೋತ್ರಮಾಡಿಸಿ-ಕೊಳ್ಳಲು ಅರ್ಹನಾದುದರಿಂದ ಅವನ ೧೨೦ ಸ್ತೋತ್ರಗಳನ್ನು ಆರಂಭದ ಅಧ್ಯಾಯದಲ್ಲಿ ಸಂಗ್ರಹಿಸಿ, ತಾರತಮ್ಯಾನುಸಾರ ಅವನ ಪರಿವಾರ ದೇವತೆಗಳ ಸ್ತುತಿಗಳನ್ನೂ ಸಂಗ್ರಹಿಸ-ಲಾಗಿದೆ. ಎರಡನೇ ಅಧ್ಯಾಯದಲ್ಲಿ ತ್ರೈಲೋಕ್ಯ ಗುರುಗಳಾದ ಶ್ರೀಮಧ್ವಾಚಾರ್ಯರ ಹಾಗೂ ಆ ಪರಂಪರೆಯಲ್ಲಿ ಬಂದ ಯತಿಗಳ ಸ್ತೋತ್ರಗಳನ್ನು ಸಂಗ್ರಹಿಸಲಾಗಿದೆ. ಸುಮಧ್ವವಿಜಯ ಮೊದಲಾದವು ಮಹಾಕಾವ್ಯಗಳಾಗಿದ್ದರೂ ಅವುಗಳು ಸ್ತೋತ್ರರೂಪ-ವಾದ ಕಾವ್ಯಗಳಾದುದರಿಂದ ಅವುಗಳನ್ನು ಇಲ್ಲಿ ಸಂಗ್ರಹಿಸಿದ್ದೇವೆ. ಮೂರನೆಯ ಅಧ್ಯಾಯವು ಅತ್ಯಂತ ಗಮನಾರ್ಹವಾದುದು. ಇಲ್ಲಿರುವ ಸ್ತೋತ್ರಸಂಕಲನವು ಶ್ರೀರಾಘವೇಂದ್ರ ಗುರುಸಾರ್ವಭೌಮರ ಜನಪ್ರಿಯತೆ, ಅವರ ಅಪಾರ ಭಕ್ತಸ್ತೋಮ, ಅವರ ಅಪಾರ ಮಹಿಮೆಗಳಿಗೆ ಸಾಕ್ಷಿಯಾಗಿದೆ. **ಶ್ರೀಹರಿವಾಯುಗಳನ್ನು ಹೊರತುಪಡಿಸಿ, ಒಬ್ಬ ವ್ಯಕ್ತಿಯ (ಪೀಠಾಧಿಪತಿಯ) ಬಗ್ಗೆ ಇಷ್ಟೊಂದು ಸ್ತೋತ್ರಗಳ ರಚನೆಯನ್ನು ಇತಿಹಾಸವೇ ಕಂಡಿರದ**

ಆಶ್ಚರ್ಯಕರ ಸಂಗತಿಯಿದು. ಇದರಲ್ಲಿ ರಾಯರ ೧೦೦ ಕ್ಕೂ ಹೆಚ್ಚು ಸ್ತೋತ್ರಗಳನ್ನು ಸಂಗ್ರಹಿಸಿದ್ದೇವೆ. ಈವರೆಗೆ ಪ್ರಕಟಿಗೊಂಡ ಯಾವ ಒಂದು ಸ್ತೋತ್ರಸಂಪುಟವೂ ಮಾಡಿರದ ಸಾಧನೆಯನ್ನು ಸ್ತೋತ್ರಮುಕ್ತಾವಲೀಯು ಮಾಡಿದೆ ಎಂದರೆ ತಪ್ಪಾಗಲಾರದು. ಈ ಎಲ್ಲ ಸ್ತೋತ್ರಗಳಿಗೆ ಮುಕುಟಪ್ರಾಯವಾಗಿ ಶ್ರೀಬನ್ನಂಜೆ ಆಚಾರ್ಯರ 'ಗುರುಪಂಚಕಸ್ತುತಿ'ಯನ್ನು ಆರಂಭದಲ್ಲಿ ಅಳವಡಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ರಾಯರ ನಂತರ ವಿದ್ಯಾಮಠವನ್ನಾಳಿದ ಯತಿಪುಂಗವರ, ಶ್ರೀವಿಷ್ಣುತೀರ್ಥರಂತಹ ಅವಧೂತರ ಹಾಗೂ ಕೊನೆಯಲ್ಲಿ ಹರಿ- ದಾಸರುಗಳ ಮೇಲಿನ ಸ್ತೋತ್ರಗಳನ್ನು ಸಂಗ್ರಹಿಸಲಾಗಿದೆ. ಇಷ್ಟಾದರೂ ಇನ್ನು ಕೆಲವು ಸ್ತೋತ್ರಗಳನ್ನು ಅಳವಡಿಸಬೇಕೆಂಬ ಕೊರತೆ ನಮಗೆ ಕಂಡಿದ್ದರಿಂದ ಹಾಗೂ ಶ್ರೀಗುರುರಾಜರ ಭಕ್ತರ ಕೇಳಿಕೆಯ ಮೇರೆಗೆ ಜಿತಂತೇಸ್ತೋತ್ರ, ಶ್ರೀಕೃಷ್ಣಸ್ತೋತ್ರ, ಭದ್ರಲಕ್ಷ್ಮೀಸ್ತುತಿ, ಶ್ರೀವಿಜಯೀಂದ್ರಸ್ತುತಿ, ಶ್ರೀಸುಧೀಂದ್ರಸ್ತೋತ್ರ, ಶೇಷಚಂದ್ರಿಕಾಸ್ತೋತ್ರ, ಮೊದಲಾದವುಗಳೊಂದಿಗೆ ಪ್ರಾತಃಸಂಕಲ್ಪಗದ್ಯ ಹಾಗೂ ಸರ್ವಸಮರ್ಪಣಗದ್ಯಗಳನ್ನು ಸೇರಿಸಿ ನವ್ಯರೂಪವನ್ನು ಕೊಟ್ಟಿದ್ದೇವೆ. ಈ ಒಂದು ಅಲ್ಪಕಾರ್ಯದಲ್ಲಿ ಶುದ್ಧಪಾಠದ ಹುಡುಕಾಟದಲ್ಲಿ, ಸ್ತೋತ್ರಸಂಗ್ರಹ ಕಾರ್ಯದಲ್ಲಿ ಯಾವ ಶ್ರಮವನ್ನೂ ಲೆಕ್ಕಿಸದೆ ಶ್ರೀಹರಿಗುರುಗಳ ಸೇವಾಭಾವದಿಂದ ಈ ಅಲ್ಪಕೃತಿಯನ್ನು ಭಕ್ತರ ಮುಂದಿಟ್ಟಿದ್ದೇನೆ. **'ಗಚ್ಛತಃ ಸ್ಖಲನಂ ಕ್ವಾಪಿ'** ಎಂಬಂತೆ ಈ ಕೃತಿಯಲ್ಲಿ ಮುದ್ರಣದೋಷಗಳು ನುಸುಳಿರಬಹುದಾದರೂ ಅವುಗಳನ್ನು ಸರಿಪಡಿಸಿ ಶುದ್ಧಪಾಠವನ್ನು ತೃತೀಯ ಮುದ್ರಣದಲ್ಲಿ ಸಂಪಾದಿಸಿದ್ದೇವೆ.

ಈ ಒಂದು ಕೃತಿಗೆ ನಾಲ್ಕು ಹಂತಗಳಲ್ಲಿ ಪುನರ್ಮುದ್ರಣ ಮಾಡಿ ಅಂದವಾದ ಹೊಸ ಹೊಸ ರೂಪವನ್ನು ಕೊಟ್ಟ ಶ್ರೀರಾಘವೇಂದ್ರಸ್ವಾಮಿಗಳವರ ಮಠಕ್ಕೆ ನಾನು ಕೃತಜ್ಞನಾಗಿದ್ದೇನೆ. ಈ ಸಂಪಾದಕತ್ವವನ್ನು ಮನ್ನಿಸಿಕೊಟ್ಟು, ಅನುಗ್ರಹಿಸಿದ ಶ್ರೀಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರಿಗೂ ಮತ್ತು ದ್ವಿತೀಯ ಮುದ್ರಣದ ಹೊತ್ತಿಗೆ ಭವ್ಯಪೀಠವನ್ನಲಂಕರಿಸಿದ ಶ್ರೀಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರಿಗೂ ಪ್ರೀತಿ-ವಾತ್ಸಲ್ಯಗಳಿಂದ ಆಶೀರ್ವಚನ ನೀಡಿ ಅನುಗ್ರಹಿಸಿದ ಶ್ರೀವಿಶ್ವೇಶತೀರ್ಥಶ್ರೀಪಾದಂಗಳವರಿಗೂ ನನ್ನ ಭಕ್ತಿಪೂರ್ವಕವಾದ ಅನಂತಾನಂತ ಪ್ರಣಾಮಗಳು. ನನ್ನ ಜನ್ಮದಾತೃಗಳಾದ ಮಾತಾಪಿತೃಗಳಿಗೂ ಪ್ರಣಾಮಗಳು. ಈ ಪರಮಪುಣ್ಯಕಾಲದಲ್ಲಿ ನನ್ನ ಸೇವೆಗೆ ಅವಕಾಶವನ್ನು ಕಲ್ಪಿಸಿಕೊಟ್ಟ ಪರಮಪ್ರೀತಿ-ಪಾತ್ರರಾದ ಶ್ರೀ ರಾಜಾ. ಎಸ್. ರಾಜಗೋಪಾಲಾಚಾರ್ಯರು ನನ್ನ ಈ ಅಲ್ಪ ಸಾಧನೆಯನ್ನು ಮಹತ್ಸಾಧನೆಯೆಂದು ಭಾವಿಸಿರುವುದು ಅವರ ಹೃದಯವೈಶಾಲ್ಯತೆಗೆ ದ್ಯೋತಕವಾಗಿದೆ. ಈ ಅಮೂಲ್ಯ ಸ್ತೋತ್ರಸಂಪುಟವನ್ನು ಓದುಗ ಪ್ರಭುಗಳಿಗೆ ಸುಲಭ ಬೆಲೆಯಲ್ಲಿ ದೊರಕುವಂತೆ ಮಾಡಿರುವುದು ಅವರ ಉದಾರತೆಯನ್ನು ವ್ಯಕ್ತಪಡಿಸುತ್ತದೆ. ಈ ಸಂಪುಟ ರಚನೆಗೆ ಪೂರಕವಾಗಿ ನನಗೆ ಅನೇಕ ಗ್ರಂಥಗಳನ್ನು ಒದಗಿಸಿ, ನನಗೆ ಉತ್ತೇಜನವನ್ನು ನೀಡಿರುವುದು ಅವರ ಕಾರ್ಯಕ್ಷಮತೆಯನ್ನು ತೋರಿಸುತ್ತದೆ. ಈಗಾಗಲೇ ಈ ಕೃತಿಯು ಪ್ರಥಮ ಹಂತದಲ್ಲಿ ಮೂರು ಸಾವಿರ ಕೃತಿಗಳೊಂದಿಗೆ ಪ್ರಕಟ-

ಗೊಂಡು, ಮತ್ತೆ ದ್ವಿತೀಯ ಮುದ್ರಣದಲ್ಲಿ ೩೦೦೦ ಪ್ರತಿಗಳೊಂದಿಗೆ ಪ್ರಕಟಗೊಂಡು, ತೃತೀಯ ಹಾಗೂ ಚತುರ್ಥ ಮುದ್ರಣಕ್ಕೆ ಅಣಿಯಾಗುತ್ತಿರುವ ಈ ಸಂತೋಷಕರವಾದ ಸಂದರ್ಭವು ಇದರ ಜನಪ್ರಿಯತೆಯನ್ನು ಪ್ರತಿಬಿಂಬಿಸುತ್ತದೆ. ಇಂತಹ ಅವಕಾಶವನ್ನು ಕಲ್ಪಿಸಿಕೊಟ್ಟ ಆಚಾರ್ಯರನ್ನು ಮರೆಯುವಂತಿಲ್ಲ, ಅವರು ತೋರಿದ ಸ್ನೇಹ, ವಿಶ್ವಾಸ, ಅಭಿಮಾನಗಳಿಗೆ ನಾನು ಚಿರಋಣಿ. ಈ ಸಂದರ್ಭದಲ್ಲಿ ವಿದ್ವಾನ್ ವ್ಯಾಸಕೆರೆ ಪ್ರಭಂಜನಾಚಾರ್ಯರು, ವಿದ್ವಾನ್ ಒನ್ನಂಜೆ ಗೋವಿಂದಾಚಾರ್ಯರು, ವಿದ್ವಾನ್ ಪಂಢರೀನಾಥಾಚಾರ್ಯರು ಹಾಗೂ ಕೀರ್ತಿಶೇಷರಾದ ವಿದ್ವಾನ್ ಪಂಚಮುಖಿ ರಾಘವೇಂದ್ರಾಚಾರ್ಯರು, ವಿದ್ವಾನ್ ರಾಜಾ. ಎಸ್. ಗುರುರಾಜಾಚಾರ್ಯರು, ವಿದ್ವಾನ್ ಪಿ.ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು ಇವರುಗಳನ್ನು ಸ್ಮರಿಸುವುದು ಅವಶ್ಯವಾಗಿದೆ. ಶ್ರೀರಾಘವೇಂದ್ರಪರ್ವದಲ್ಲಿ ರಾಜಾ. ಎಸ್. ಗುರುರಾಜಾಚಾರ್ಯರ ಕೊಡುಗೆಯಂತೂ ಅಪಾರವಾಗಿದೆ. ಈ ಹಿನ್ನೆಲೆಯಲ್ಲಿ ಅವರನ್ನು ವಿಶೇಷವಾಗಿ ಸ್ಮರಿಸುತ್ತ, ಆ ಸ್ತೋತ್ರಗಳನ್ನು ಒದಗಿಸಿಕೊಟ್ಟ ಅವರ ಪುತ್ರ ಶ್ರೀಸುಧೀಂದ್ರಾಚಾರ್ಯರಿಗೂ ನಾನು ಕೃತಜ್ಞನಾಗಿದ್ದೇನೆ. ಅಲ್ಲದೆ ಶ್ರೀಗುರು ಸಾರ್ವಭೌಮಮಾಸಪತ್ರಿಕೆಯ ಸಂಪಾದಕವರ್ಗ, ಡಿ. ಟಿ. ಪಿ. ವಿಜಯಲಕ್ಷ್ಮೀಯವರನ್ನು ಹಾಗೂ ನನ್ನ ಅತ್ಮೀಯ ಶ್ರೀ ಡಿ. ಮಾಧವಾಚಾರ್ಯರನ್ನು ಈ ಕಾರ್ಯದಲ್ಲಿ ಸಹಕರಿಸಿದ್ದಕ್ಕಾಗಿ ವಂದಿಸುತ್ತೇನೆ. ಈ ಯೋಜನೆಯಲ್ಲಿ ವಿಶೇಷವಾಗಿ ತಮ್ಮನ್ನು ತೊಡಗಿಸಿಕೊಂಡ ಪ್ರೀತಿಯ ಶ್ರೀ ರಾಜಾ. ಸೂರೀಂದ್ರಾಚಾರ್ಯರಿಗೂ ನನ್ನ ಅನಂತಾನಂತ ಧನ್ಯವಾದಗಳು. ಈ ಕಾರ್ಯದಲ್ಲಿ ನನ್ನೊಂದಿಗೆ ಸಹಕರಿಸಿದ ನನ್ನ ಶ್ರೀಮತಿ ದೀಪಿಕಾಗೆ ಶ್ರೀಹರಿವಾಯು-ಗುರುಗಳು ಅನುಗ್ರಹಿಸಲೆಂದು ಪ್ರಾರ್ಥಿಸುವೆ. ಅಂದವಾಗಿ ಮುದ್ರಿಸಿದ ಶ್ರೀಗುರುರಾಜ ಪ್ರಿಂಟರ್ಸ್ ಸಿಬ್ಬಂದಿಗೂ ನನ್ನ ವಂದನೆಗಳು.

ಕೊನೆಯದಾಗಿ ಇದನ್ನು ಸೌಹಾರ್ದವಾಗಿ ಸ್ವೀಕರಿಸುವ, ಈ ಕಾರ್ಯವನ್ನು ಪ್ರೋತ್ಸಾಹಿಸುವ ಸಕಲ ಗುರುರಾಜರ ಭಕ್ತವೃಂದಕ್ಕೆ ಅನಂತಾನಂತ ನಮನಗಳನ್ನು ಅರ್ಪಿಸುತ್ತಾ ಇದರ ಸದುಪಯೋಗಪಡಿಸಿಕೊಳ್ಳುವ ಮೂಲಕ ಶ್ರೀಹರಿಗುರುಗಳ ಅನುಗ್ರಹವನ್ನು ಪಡೆಯಲೆಂದು ಪ್ರಾರ್ಥಿಸುತ್ತಾ, ಶ್ರೀಗುರುರಾಜರ ಅನುಗ್ರಹಮಾತ್ರದಿಂದಲೇ ಗ್ರಂಥಿತವಾದ ಈ **ಸ್ತೋತ್ರಮುಕ್ತಾವಲೀ** ಎಂಬ ಮುತ್ತಿನಹಾರವನ್ನು **'ಧ್ರಿಯತಾಂ ಹೃದಯೇ ಸದಯೇ ಕಮಲಾಮಹಿಲೇನ ಪೂರುಷೇಣ'** ಎಂಬ ಶ್ರೀಜಯತೀರ್ಥಶ್ರೀಮಚ್ಚರಣರ ಮಹಿಳೆಯಂತೆ ಶ್ರೀರಾಘವೇಂದ್ರಗುರುಸಾರ್ವಭೌಮರ ಅಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಮೂಲರಾಮಚಂದ್ರದೇವರಿಗೆ ಸಮರ್ಪಿಸುತ್ತಿದ್ದೇನೆ.

ಇತಿ ಸಜ್ಜನ ವಿಧೇಯ

ರಾಮಚಂದ್ರಾಚಾರ್ಯ ಪುರೋಹಿತ, ಎಂ.ಎ.

ಸಂಸ್ಕೃತ ಪ್ರಾಧ್ಯಾಪಕರು

ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ, ದಕ್ಷಿಣ ಕನ್ನಡ

ಪ್ರಕಾಶಕರ ಲೇಖನಿಯಿಂದ.....

ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋಃ
ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್ ।
ನಾರಾಯಣೋಽಸೌ ಪರಮೋ ವಿಚಿಂತ್ಯಃ
ಮುಮುಕ್ಷುಭಿಃ ಕರ್ಮಪಾಶಾದಮುಷ್ಮಾತ್ ॥

ಭಗವಂತನ ಗುಣೋತ್ಕರ್ಷದಲ್ಲಿ ಅದರವುಳ್ಳಂತಹ ಜ್ಞಾನಿಗಳಲ್ಲಿ ಯಾವ ಪ್ರೀತಿ ಭಗವಂತನಿಗಿರುತ್ತದೋ, ಆ ಪ್ರೀತಿ ಇತರರಲ್ಲಿರುವುದಿಲ್ಲ, ಭವಬಂಧನದಿಂದ ಮುಕ್ತರಾಗಲು ಸರ್ವೋತ್ತಮನಾದ ಭಗವಂತನನ್ನು ಸದಾ ಸ್ಮರಿಸಬೇಕು. ಅದಕ್ಕೇ ಶ್ರೀಮದಾನಂದತೀರ್ಥಭಗವತ್ಪಾದರು **'ಸಂತತಂ ಚಿಂತಯೇನಂ ತಮಂತಕಾಲೇ ವಿಶೇಷತಃ'** ಭಗವಂತನನ್ನು ಯಾವಾಗಲೂ ಸ್ಮರಿಸು, ಅಂತ್ಯಕಾಲದಲ್ಲಿ ವಿಶೇಷವಾಗಿ ಸ್ಮರಿಸು ಎಂಬ ಸಂದೇಶವನ್ನಿತ್ತಿದ್ದಾರೆ. **'ಸ್ಮರ್ತವ್ಯಃ ಸತತಂ ವಿಷ್ಣುಃ ವಿಸ್ಮರ್ತವ್ಯೋ ನ ಜಾತುಚಿತ್'** ಭಗವಂತನನ್ನು ಯಾವಾಗಲೂ ಸ್ಮರಿಸಬೇಕು. ಅವನನ್ನು ಒಂದು ಕ್ಷಣವೂ ವಿಸ್ಮರಿಸಬಾರದು. ಅವನ ನಾಮಸ್ಮರಣೆಗೆ ಪಾಪಪರಿಹಾರ ಮಾಡುವ ಶಕ್ತಿ ಎಷ್ಟು ಇದೆ ಎಂದರೆ ಅಷ್ಟು ಪಾಪಗಳನ್ನು ನಮ್ಮಿಂದ ಮಾಡಲು ಸಾಧ್ಯವಿಲ್ಲ. ಶ್ರೀಹರಿವಾಯುಗುರುಗಳ ಸ್ಮರಣೆಯನ್ನು ತಾರತಮ್ಯಾನುಸಾರವಾಗಿ ಸದಾ ಮಾಡಬೇಕು. ಹರಿಸ್ಮರಣೆ ಮಾಡಲು ಇರುವ ಅನೇಕ ಆಕರಗಳಲ್ಲಿ ಸ್ತೋತ್ರಸಾಹಿತ್ಯವೂ ಒಂದು. ಸ್ತೋತ್ರಸಾಹಿತ್ಯ ಪಠಣ-ಪಾರಾಯಣಾದಿಗಳಿಂದ ದೋಷ ಪರಿಹಾರವಾಗಿ ಪ್ರತಿಯೊಬ್ಬರ ಮನಸ್ಸೂ ನಿರ್ಮಲವಾಗಿ ಶಾಂತವಾಗುವ ಮೂಲಕ ತೇಜಸ್ಸು ವೃದ್ಧಿಸಿ, ಶ್ರೇಯಸ್ಸು ವೃದ್ಧಿಸುತ್ತದೆ. ಸಕಲ ಭಗವದ್ಭಕ್ತರಿಗೂ ಮಂಗಳವಾಗಬೇಕೆಂಬ ಸದುದ್ದೇಶದಿಂದ ಪರಮಪೂಜ್ಯರಾದ ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು ಹಾಗೂ ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು ಪ್ರತಿವರ್ಷ ಶ್ರೀಮಠದ ಪಂಚಾಂಗವನ್ನು ನೀಡುವುದರ ಜೊತೆಯಲ್ಲಿ ಒಂದು ಗ್ರಂಥವನ್ನೂ ಮುದ್ರಿಸಿ ನೀಡುವ ಪರಿಪಾಠವನ್ನು ಪ್ರಾರಂಭಿಸಿದ್ದಾರೆ. ಅದರಂತೆ ಈ ವರ್ಷ ನಿತ್ಯಾನುಷ್ಠಾನಕ್ಕೆ ಉಪಯೋಗವಾಗುವ ಪ್ರಕಟಿತ, ಅಪ್ರಕಟಿತವಾದ ಮತ್ತು ಅನುಪಲಬ್ಧವಾಗಿದ್ದ ಸ್ತೋತ್ರಗಳನ್ನು ಸಂಗ್ರಹಿಸಿ, ಬೃಹತ್ ಸಂಪುಟವೊಂದನ್ನು ನೀಡಬೇಕೆಂದು ಸಂಕಲ್ಪಿಸಿದುದರ ಫಲವಾಗಿ **'ಸ್ತೋತ್ರಮುಕ್ತಾವಲೀ'** ಎಂಬ ವಿಶ್ವಕೋಶವು ಪ್ರಕಾಶನಗೊಂಡಿದೆ.

ಶ್ರೀಗಳವರ ಆದೇಶವನ್ನು ಶಿರಸಾ ಮಾನ್ಯಮಾಡಿ ಗ್ರಂಥದ ಸಂಪಾದಕತ್ವವನ್ನು ವಹಿಸಿಕೊಂಡ ವಿದ್ವಾನ್ ಶ್ರೀ ರಾಮಚಂದ್ರಾಚಾರ್ಯ ಪುರೋಹಿತ್‌ರವರ ಕಾರ್ಯ-ವೈಖರಿಯ ಬಗ್ಗೆ ಸ್ಮರಿಸದಿದ್ದರೆ ತಪ್ಪಾದೀತು. ಶ್ರೀರಾಮಚಂದ್ರಾಚಾರ್ಯರು ಉಜಿರೆಯ ಧರ್ಮಸ್ಥಳದ ಮಂಜುನಾಥ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದು, ಪರೀಕ್ಷಾಸಮಯದ ತಮ್ಮ ಬಿಡುವಿಲ್ಲದ ಕಾರ್ಯದ ಒತ್ತಡ ಮತ್ತು ತಮ್ಮ ದೈನಂದಿನ ವಿದ್ಯಾರ್ಥಿಗಳಿಗೆ ಶಾಸ್ತ್ರಪಾಠ ಹೇಳುವುದಿದ್ದಾಗ್ಯೂ ಸಹ ಗ್ರಂಥದ ಶೀಘ್ರ ಬಿಡುಗಡೆಗಾಗಿ ಅನೇಕ ಬಾರಿ ಉಜಿರೆಯಿಂದ ಬೆಂಗಳೂರಿಗೆ ಬಂದು ಪ್ರಸ್ತುತದಲ್ಲಿ ಪ್ರಕಟಿಗೊಂಡಿರುವ ಸ್ತೋತ್ರಸಾಹಿತ್ಯಕ್ಕೆ ಸೇರಿದ ಅನೇಕ ಪುಸ್ತಕಗಳನ್ನು ತರಿಸಿ, ಪ್ರಕಟಿವಾಗದ ಹಸ್ತಪ್ರತಿ, ತಾಳೆಯೋಲೆಯಲ್ಲಿರುವ ನೂರಾರು ಸ್ತೋತ್ರಗಳ ಸಂಗ್ರಹ ಮಾಡಿ, ಪರಿಷ್ಕರಿಸಿ, ಪ್ರತಿಯೊಂದು ಸ್ತೋತ್ರಗಳಿಗೂ ಕರ್ತೃಗಳ ಪರಿಚಯ, ಸ್ತೋತ್ರಗಳ ಸಾರಾಂಶ ಮತ್ತು ಸ್ತೋತ್ರಗಳ ಫಲವನ್ನು ಟಿಪ್ಪಣಿಗಳ ಮೂಲಕ ಸೂಚಿಸಿ, ತಾರತಮ್ಯಾನುಸಾರ ಕ್ರಮಬದ್ಧವಾಗಿ ಸ್ತೋತ್ರಗಳ ಶುದ್ಧಪ್ರತಿಯನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಇವರ ಕಾರ್ಯಕೌಶಲ್ಯತೆಯು ಶ್ಲಾಘನೀಯ, ಸ್ತುತ್ಯರ್ಹ. ಇವರು ಉಜಿರೆಯಲ್ಲಿದ್ದಾಗಲೂ ಸಹ ಗ್ರಂಥವು ಯಾವ ಹಂತದಲ್ಲಿದೆ ಎಂಬ ವಿಷಯದ ಬಗ್ಗೆ ಪ್ರತಿನಿತ್ಯ ದೂರವಾಣಿಯ ಮೂಲಕ ವಿಚಾರಿಸುತ್ತಾ ಅಗತ್ಯವಾದ ಸಲಹೆಗಳನ್ನು ನೀಡುತ್ತಿದ್ದರೀತಿಯನ್ನು ನೋಡಿದರೆ ಇವರಿಗೆ ಈ ಒಂದು ಜ್ಞಾನಕಾರ್ಯದ ಬಗ್ಗೆ ಇರುವ ಕಾಳಜಿ ಹಾಗೂ ಕಾತುರದ ಬಗ್ಗೆ ಅರಿವುಂಟಾಗುವುದು. ಸ್ವಲ್ಪ ಸಮಯದಲ್ಲಿ ಕಲ್ಪಸಾಧನೆಯನ್ನು ತೋರಿ ಸಮಯಕ್ಕೆ ಸರಿಯಾಗಿ ಗ್ರಂಥ ಹೊರಬರುವುದರಲ್ಲಿ ಶ್ರೀಪುರೋಹಿತರದು ಸಿಂಹಪಾಲು. ಇಂತಹ ಅಮೋಘ ಸಾಧನೆಯನ್ನು ತೋರಿದ ಶ್ರೀರಾಮಚಂದ್ರಾಚಾರ್ಯ ಪುರೋಹಿತರಿಗೆ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ತಿಳಿಸುವುದು ನನ್ನ ಅದ್ಯ ಕರ್ತವ್ಯವಾಗಿದೆ.

ಶ್ರೀಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರದಲ್ಲಿ ದಿವಂಗತ ರಾಜಾ. ಎಸ್. ಗುರುರಾಜಾಚಾರ್ಯರು ಸಂಪಾದಿಸಿದ ಅಪೂರ್ವ ಅಪ್ರಕಟಿತ ತಾಳೆವೋಲೆ ಮತ್ತು ಹಸ್ತಲಿಖಿತ ಪ್ರತಿಗಳಲ್ಲಿದ್ದ ಅನೇಕ ಸ್ತೋತ್ರಗಳನ್ನು ಹಾಗೂ ಸ್ವತಃ ರಾಜಾ. ಎಸ್. ಗುರುರಾಜಾಚಾರ್ಯರು ರಚಿಸಿದ ಅನೇಕ ಸ್ತೋತ್ರಗಳನ್ನು ಅವರ ಸತ್ಪುತ್ರರಾದ ರಾಜಾ. ಸುಧೀಂದ್ರಾಚಾರ್ಯರು ಸ್ತೋತ್ರಮುಕ್ತಾವಲೀಗಾಗಿ ಕೊಟ್ಟು ಉಪಕರಿಸಿದ್ದಾರೆ. ದಿವಂಗತ ರಾಜಾ. ಎಸ್. ಗುರುರಾಜಾಚಾರ್ಯರ ಅಮೂಲ್ಯ ಸೇವೆಯನ್ನು ಸ್ಮರಿಸುತ್ತಾ ಅವರ ಮಕ್ಕಳಾದ ರಾಜಾ ಸುಧೀಂದ್ರಾಚಾರ್ಯರಿಗೆ ನನ್ನ ಅನಂತಾನಂತ ಧನ್ಯವಾದಗಳು.

ಈ ಸ್ತೋತ್ರಮುಕ್ತಾವಲೀ ಎನ್ನುವ ವಿಶ್ವಕೋಶದಲ್ಲಿ ಉಡುಪಿಯ ಮಧ್ವಸಿದ್ಧಾಂತದ ಗ್ರಂಥಾಲಯ, ವ್ಯಾಸ-ಮಧ್ವ ಸಂಶೋಧನಾ ಕೇಂದ್ರದ ಶ್ರೀವ್ಯಾಸನಕೆರೆ ಪ್ರಭಂಜನಾಚಾರ್ಯ ಇವರುಗಳು ಪ್ರಕಟಿಸಿದ ಸ್ತೋತ್ರಗಳನ್ನು ಈ ಸಂಪುಟದಲ್ಲಿ ಉಪಯೋಗಿಸಿಕೊಂಡಿದ್ದೇವೆ. ಅದಕ್ಕಾಗಿ ಈ ಎಲ್ಲ ಮಹನೀಯರನ್ನೂ ಇಲ್ಲಿ ಸ್ಮರಿಸುವುದು ಅವಶ್ಯವಾಗಿದೆ.

ಸ್ತೋತ್ರಗಳನ್ನು ಸಂಗ್ರಹಿಸಿ ಮುದ್ರಣಕ್ಕೆ ಸಿದ್ಧಪಡಿಸುವುದು ಒಂದು ಮಹಾಯಜ್ಞವೇ ಸರಿ. ಈ ಮಹಾಯಜ್ಞಕ್ಕೆ ಹವಿಸ್ಸನ್ನು ಹಾಕಿ ಯಜ್ಞದ ಪೂರ್ಣಾಹುತಿಯವರೆಗೆ ತಂದವರೇ ನಮ್ಮ 'ಶ್ರೀಗುರುಸಾರ್ವಭೌಮ' ಮಾಸಪತ್ರಿಕೆಯ ಸಂಪಾದಕರಾದ ವಿದ್ವಾನ್ ಕಡಪ.

ರಾಘವೇಂದ್ರಾಚಾರ್ಯರು. ಇವರೊಂದಿಗೆ ಸಹಕರಿಸಿದ ಶ್ರೀಗುರುಸಾರ್ವಭೌಮ ಪ್ರಾಚ್ಯ ಸಂಶೋಧನಾ ಸಂಸತ್ತಿನ ಸದಸ್ಯರಾದ ವಿದ್ವಾನ್ ಡಿ. ಮಾಧವಾಚಾರ್ಯರಿಗೂ ನನ್ನ ಅನಂತಾನಂತ ಧನ್ಯವಾದಗಳು. ಅನೇಕ ಮಹನೀಯರ, ವಿದ್ವಾಂಸರ ಸ್ತೋತ್ರಗಳು ಸಂಕಲಿತವಾಗಿವೆ. ಆ ಎಲ್ಲ ರಚನೆಕಾರರ ಪಟ್ಟಿ ದೊಡ್ಡದಿರುವುದರಿಂದ ಆ ಎಲ್ಲ ಕವಿಗಳನ್ನು ಕೃತಜ್ಞತೆಯಿಂದ ಇಲ್ಲಿ ಸ್ಮರಿಸುತ್ತಿದ್ದೇವೆ.

ಗ್ರಂಥವನ್ನು ಮುದ್ರಣಕ್ಕೆ ಸಿದ್ಧಪಡಿಸುವುದು ಒಂದು ಸಾಹಸವೇ ಸರಿ. ಈ ಗ್ರಂಥಕ್ಕೆ ಪ್ರಧಾನವಾಗಿ ಅವಶ್ಯಕವಾದುದು ಪರಿವಿಡಿ. ಈ ಹಿಂದಿನ ಎರಡು ಮುದ್ರಣಗಳಲ್ಲಿಯೂ ಪರಿವಿಡಿಯನ್ನು ನೀಡಲಾಗಿದ್ದರೂ, ಮೂರನೆಯ ಮುದ್ರಣದಲ್ಲಿ ಅಕಾರಾದಿ ಪರಿವಿಡಿಯನ್ನು ನೀಡಬೇಕೆಂದು ಯೋಚಿಸಿದಾಗ ಈ ಯೋಜನೆಗೆ ನಮ್ಮೊಂದಿಗೆ ನಿಂತವರೇ ಶ್ರೀಗುರುಸಾರ್ವಭೌಮ ಮಾಸಪತ್ರಿಕೆಯ ಉಪಸಂಪಾದಕರಾದ ವಿದ್ವಾನ್ ಪಿ.ವಿ. ಹರಿನಾಥ್ ಹಾಗೂ ಅಧ್ಯಾಪಕರಾದ ವಿದ್ವಾನ್. ನರಹರಿ ಆಚಾರ್ಯರು. ಇಡೀ ಗ್ರಂಥವನ್ನು ಅವಲೋಕಿಸಿ ಪರಿವಿಡಿಯನ್ನು ಸಿದ್ಧಪಡಿಸಿಕೊಟ್ಟ ಇವರಿಗೆ ನನ್ನ ಧನ್ಯವಾದಗಳು.

ಅತಿಮುಖ್ಯವಾಗಿ ಗ್ರಂಥವು ಸಮಯಕ್ಕೆ ಹೊರಬರಲು ಸಮಯ ನಿಯಮವನ್ನು ಉಲ್ಲಂಘಿಸಿ, ಸಂಯಮದಿಂದ ವಿಶೇಷ ಕಾಳಜಿ - ಮುತುವರ್ಜಿ ವಹಿಸಿ ಎರಡು ತಿಂಗಳಿಗೂ ಮೇಲ್ಪಟ್ಟು ಹಗಲಿರುಳು ಶ್ರಮಪಟ್ಟು ಡಿ.ಟಿ.ಪಿ.ಯನ್ನು ಮಾಡಿಕೊಟ್ಟ ಕು. ವಿ. ವಿಜಯಲಕ್ಷ್ಮಿಯವರಿಗೂ ಮತ್ತು ಸ್ತೋತ್ರಮುಕ್ತಾವಲೀಯ ಸಂಪೂರ್ಣ ಮೇಲ್ವಿಚಾರಣೆಯನ್ನು ಹೊತ್ತು ಅಸಾಧ್ಯ ಕಾರ್ಯಗಳನ್ನು ಸಾಧಿಸುವ ಸಮಾಲನ್ನು ಸ್ವೀಕರಿಸಿ ಯಶಸ್ವಿಯಾಗಿ ಗುರಿಮುಟ್ಟುವ 'ಸೂರಿ' ಎಂದೇ ಪರಿಚಿತರಾಗಿರುವ, ಚೈತನ್ಯದ ಚಿಲುಮೆಯೆಂದೇ ಖ್ಯಾತರಾಗಿರುವ ರಾಜಾ. ಸೂರೀಂದ್ರಾಚಾರ್ಯರಿಗೂ ನನ್ನ ಧನ್ಯವಾದವನ್ನು ತಿಳಿಸುತ್ತೇನೆ. ಅಂದವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಪಿಂಟರ್ಸ್‌ನ ಸಿಬ್ಬಂದಿವರ್ಗದವರಿಗೂ ನನ್ನ ಅನಂತ ಧನ್ಯವಾದಗಳು.

ಶ್ರೀಅಕ್ಷೋಭ್ಯತೀರ್ಥರ ಪೀಳಿಗೆಗೆ ಸೇರಿದ ಶ್ರೀರಘುದಾಂತತೀರ್ಥರು ರಚಿಸಿದ 'ಶ್ರೀಜಯತೀರ್ಥವಿಜಯ'ವನ್ನು ಈ ಗ್ರಂಥದಲ್ಲಿ ಅಳವಡಿಸಿಕೊಳ್ಳಲಾಗಿದೆ. ಅದರಲ್ಲಿ ಬರುವ ಶ್ರೀಜಯತೀರ್ಥರ ಬೃಂದಾವನವು ಮಳಖೇಡದಲ್ಲಿದೆ ಎನ್ನುವುದು ಶ್ರೀರಘುದಾಂತಸ್ವಾಮಿಗಳ ಸ್ವಂತ ಅಭಿಪ್ರಾಯ. ಭಾವೀಸಮೀರರಾದ ಶ್ರೀವಾದಿರಾಜಯತಿಚರಣರು 'ತೀರ್ಥಪ್ರಬಂಧ'-ದಲ್ಲಿ ಶ್ರೀಜಯತೀರ್ಥರ ಬೃಂದಾವನವು ಗಜಗಣ್ಣರದಲ್ಲಿದೆ ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಇದನ್ನು ದೊಡ್ಡ ದೊಡ್ಡ ಸಂಶೋಧಕರು ಅನುಮೋದಿಸಿರುತ್ತಾರೆ. ಮೇಲೆ ತಿಳಿಸಿದ ವಿಜಯದಲ್ಲಿಯೇ ಮೂಲಸೀತಾದೇವಿಯರ ಅಭಿಪ್ರಾಯವು ನಮಗೆ ಗ್ರಾಹ್ಯವಲ್ಲ.

ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ ವಿಜೇತರಾದ ವಿದ್ಯಾಮಾಚಸ್ಪತಿ ಶ್ರೀಬನ್ನಂಜೆ ಗೋವಿಂದಾಚಾರ್ಯರು ಶ್ರೀಗುರುಪಂಚಕಸ್ತೋತ್ರವನ್ನು ರಚಿಸಿ ಅಭಿಮಾನಪೂರ್ವಕವಾಗಿ ನೀಡಿರುತ್ತಾರೆ. ಇಂತಹ ರಚನೆ ಆಚಾರ್ಯರಿಗೆ ಕರತಲಾಮಲಕ. ಅವರಿಗೆ ನಮ್ಮ ಅನಂತ ಧನ್ಯವಾದಗಳು.

ಸ್ತೋತ್ರಸಾಹಿತ್ಯದಲ್ಲಿ ಈವರೆವಿಗೂ ಶ್ರೀರಾಘವೇಂದ್ರಸ್ವಾಮಿಗಳವರ ಮೇಲೆ ಕೇವಲ ೨೦-೩೦ ಸ್ತೋತ್ರಗಳು ಪ್ರಕಟಗೊಂಡು ಲಭ್ಯವಿದ್ದವು. ಶ್ರೀಮಠದಿಂದ ಪ್ರಕಟಿಸು- ತ್ತಿರುವ ಸ್ತೋತ್ರಮುಕ್ತಾವಲೀಯಲ್ಲಿ ಶ್ರೀಗುರುರಾಜರ ಮೇಲೆ ೧೦೩ ಸ್ತೋತ್ರಗಳನ್ನು ಸಂಗ್ರಹಿಸಿದ್ದೇವೆ. ಇದೊಂದು ಅಪೂರ್ವ ಸಾಧನೆಯೆಂದು ಹೆಮ್ಮೆಯಿಂದ ಹೇಳಿಕೊಳ್ಳಲು ಇಚ್ಛಿಸುತ್ತೇವೆ ಮತ್ತು ೧೨೫೦ ಕ್ಕೂ ಅಧಿಕವಾದ ಪುಟಗಳುಳ್ಳ ವಿರಾಟ ಸ್ವರೂಪದ ಈ ಸ್ತೋತ್ರಮುಕ್ತಾವಲೀಯು ಪ್ರತಿಯೊಬ್ಬ ಭಕ್ತರಿಗೂ ಸುಲಭವಾಗಿ ದೊರಕಬೇಕೆಂಬ ಸದುದ್ದೇಶ, ಸದಾಶಯದಿಂದ ಗ್ರಂಥದ ಬೆಲೆಯನ್ನು ಕೇವಲ ೧೦೦ ರೂ.ಗಳಿಗೆ ನಿಗದಿಪಡಿಸಿದ್ದೇವೆ.

ಶ್ರೀಮಠವು ಮಾಡುವ ಪ್ರತಿಯೊಂದು ಯೋಜನೆಗಳು ಯಶಸ್ಸಿನ ಉತ್ತುಂಗಕ್ಕೇರಲು ಮೆಟ್ಟಿಲಾದವರೇ ನೀವು. ಪ್ರಥಮ ಮುದ್ರಣದಲ್ಲಿ ಮುದ್ರಿಸಿದ ಮೂರು ಸಾವಿರ ಪುಸ್ತಕಗಳು ಕೇವಲ ಮೂರು ವಾರಗಳಲ್ಲಿ ಬಿಕರಿಯಾಗಿ ಮರುಮುದ್ರಣಗೊಂಡಿದೆಯೆಂದಾದರೆ ಈ ಪುಸ್ತಕದ ಯಶಸ್ಸು ಮತ್ತು ಅವಶ್ಯಕತೆಯ ಅರಿವಾಗುತ್ತದೆ. ಓದುಗರ ಉತ್ಸಾಹ ಇದೇ ರೀತಿ ಮುಂದುವರಿದಲ್ಲಿ ಈ ಬೃಹತ್ ಸಂಪುಟವು ಹತ್ತಾರು ಮರುಮುದ್ರಣಗಳನ್ನು ಕಾಣಲಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಭಕ್ತರ ಒತ್ತಾಯದ ಮೇರೆಗೆ ಮರುಮುದ್ರಣ- ದಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಲಾಗಿದೆ. ಗ್ರಂಥದ ಪ್ರಾರಂಭಕ್ಕೆ ರಾಯರ 'ಪ್ರಾತಃಸಂಕಲ್ಪಗದ್ಯ'ವನ್ನು, ಅಂತ್ಯಕ್ಕೆ 'ಸಮಸಮರ್ಪಣಗದ್ಯ'ವನ್ನು ಸೇರಿಸಲಾಗಿದೆ. ಇನ್ನೂ ಅನೇಕ ಸ್ತೋತ್ರಗಳನ್ನು ಸೇರಿಸಬೇಕೆಂಬ ಬೇಡಿಕೆ ಭಕ್ತಸಮೂಹದಿಂದ ಬಂದಿದ್ದರೂ, ಗ್ರಂಥ ವಿಸ್ತಾರದ ಭಯದಿಂದ ಅವುಗಳನ್ನು ಕೈಬಿಡಲಾಗಿದೆ. ಮೂರನೇ ಮುದ್ರಣದಲ್ಲಿ ಮುಖ್ಯ- ವಾದ ಮಾರ್ಪಾಟುಗಳೊಂದಿಗೆ ಸ್ತೋತ್ರಮುಕ್ತಾವಲೀಯು ಅನಾವರಣಗೊಂಡಿದೆ.

ಪರಮಪೂಜ್ಯ ಉಭಯ ಶ್ರೀಪಾದಂಗಳವರ ಔದಾರ್ಯ ಹಾಗೂ ವೈಶಾಲ್ಯತೆಯನ್ನು ಪಡೆದ ಪ್ರತಿಯೊಬ್ಬ ಭಕ್ತನೂ ಈ ಸ್ತೋತ್ರ ವಿಶ್ವಕೋಶವನ್ನು ಸಂಗ್ರಹಿಸಿ ಸದುಪಯೋಗ- ಪಡಿಸಿಕೊಂಡು ತನ್ಮೂಲಕ ಶ್ರೀರಾಘವೇಂದ್ರತೀರ್ಥಗುರ್ವಂತರ್ಗತರಾದ, ಶ್ರೀಮುಖ್ಯ- ಪ್ರಾಣದೇವರ ಅಂತರ್ಗತರಾದ ಶ್ರೀಮೂಲರಾಮಚಂದ್ರದೇವರ ವಿಶೇಷ ಅನುಗ್ರಹವನ್ನು ಗಳಿಸಿ ಮಂಗಳವನ್ನು ಪಡೆಯಲಿ ಎಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಇತಿ ಸಜ್ಜನ ವಿಧೇಯ

ರಾಜಾ. ಎಸ್. ರಾಜಗೋಪಾಲಾಚಾರ್ಯ

ಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳು

ಶ್ರೀರಾಘವೇಂದ್ರಸ್ವಾಮಿಗಳವರ ಮಠ,

ಮಂತ್ರಾಲಯ



'ಶ್ರೀರಾಘವೇಂದ್ರಾನುಗ್ರಹ' ಪ್ರಶಸ್ತಿ ವಿಜೇತರಾದ
ಶ್ರೀ ಬನ್ನಂಜೆ ಗೋವಿಂದಾಚಾರ್ಯ ರಿಂದ ರಚಿತವಾದ

ಗುರುಪಂಚಕಸ್ತುತಿಃ

ಅಗಣಿತಗುಣಾಭಿರಾಮಂ
ಮುಖಚಿತಸೋಮಂ ಸುರಾರಿಕುಲಭೀಮಮ್ ।
ಪೂರಿತನತಜನಕಾಮಂ
ಮೇಘಶ್ಯಾಮಂ ನಮಾಮಿ ರಘುರಾಮಮ್ ॥ ೧ ॥

ದರ್ಶಿತನಿಗಮಾಧ್ವಾನಂ
ಶ್ರೀಮಧ್ವಂ ನೌಮಿ ನಾಶಿತಧ್ವಾಂತಮ್ ।
ಹೃದಯಿತಮೋಽಧ್ವಂಸಂ
ಕಂಸಾರಾತಿಪ್ರಿಯಾಚರಿತಮ್ ॥ ೨ ॥

ಶ್ರೀರಾಘವೇಂದ್ರಂ ಶ್ರಿತರಾಮಚಂದ್ರಂ
ಸುಜ್ಞಾನಸಾಂದ್ರಂ ವಚನೇಷ್ವಹೀಂದ್ರಮ್ ।
ಸ್ಮರಾಮಿ ಯತ್ಪಾದಸರೋಜರೇಣು-
ರ್ವಿದ್ಯಾಸಮುದ್ರಂ ತನುತೇಽಪಿ ತಂದ್ರಮ್ ॥ ೩ ॥

ವಿಧವತಿ ಸುರಸಿಂಧವತಿ ಚ
ಶಾಂತಾನಾಂ ಪಾಪಪಂಕಕಲಿತಾನಾಮ್ ।
ಮಧುವತಿ ಸುರತರವತಿ
ಸುಜನಾನಾಂ ಪಾದಪದ್ಮಪತಿತಾನಾಮ್ ॥ ೪ ॥

ವಿಭವತಿ ಶರಣಮಿತಾನಾಂ
ತಮಸಾಂಧಾನಾಂ ಚ ಭಾನವತಿ ।
ಕ್ಷರವತಿ ಹರಿವಿಮುಖಾನಾಂ
ಭಕ್ತಾನಾಮಮೃತಸಿಂಧವತಿ ॥ ೫ ॥

ಇದಮಾಚಾರ್ಯಗೋವಿಂದಃ ಪ್ರಮೃಷ್ಟಂ ಶಬ್ದತೋಽರ್ಥತಃ ।
ವಿಮಲಂ ಭಕ್ತಿಜನನಂ ವಿತೇನೇ ಗುರುಪಂಚಕಮ್ ॥

◆ ◆ ◆

ಚತುರ್ಥ ಮುದ್ರಣ

ಜಗದ್ಗುರು ಶ್ರೀಮನ್ಮಧ್ವಾಚಾರ್ಯ
ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠದ
ಪ್ರಸ್ತುತಪೀಠಾಧಿಪತಿಗಳಾದ
ಪರಮಪೂಜ್ಯ ಶ್ರೀಶ್ರೀ 1008 ಶ್ರೀಸುಯತೀಂದ್ರತೀರ್ಥ
ಶ್ರೀಪಾದಂಗಳವರ
7 ನೇ ಚಾತುರ್ಮಾಸ್ಯ ದೀಕ್ಷಾ
ಸಂದರ್ಭದಲ್ಲಿ
ಸ್ತೋತ್ರಮುಕ್ತಾವಳಿಯ
ಈ 4 ನೇ ಮುದ್ರಣವನ್ನು
ಶ್ರೀಮತ್ಸುಶಮೀಂದ್ರತೀರ್ಥಾಂತರ್ಗತರಾದ
ಶ್ರೀಗುರುರಾಜರ ಅಂತರ್ಯಾಮಿ
ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ
ಶ್ರೀಮನ್ಮೂಲರಘುಪತಿವೇದವ್ಯಾಸ ದೇವರಿಗೆ
ಸಮರ್ಪಿಸಲಾಗಿದೆ

- ರಾಜಾ. ಎಸ್. ರಾಜಗೋಪಾಲಾಚಾರ್ಯ

ಸ್ತೋತ್ರಸೂಚೀ

ದೇವತಾಪರ್ವ

ಪ್ರಾತಃಸಂಕಲ್ಪಗದ್ಯಮ್	ಶ್ರೀರಾಘವೇಂದ್ರತೀರ್ಥರು	೩
ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್	ಶ್ರೀಮನ್ಮಹಾಭಾರತ	೮
ಶ್ರೀವಿಷ್ಣುಸ್ತುತಿಃ	ಶ್ರೀವಾದಿರಾಜತೀರ್ಥರು	೨೦
ಶ್ರೀವಿಷ್ಣುಸ್ತುತಿಃ	ಶ್ರೀತ್ರಿವಿಕ್ರಮಪಂಡಿತಾಚಾರ್ಯರು	೨೨
ವಿಷ್ಣುಕವಚಮ್	ಶ್ರೀಗರುಡಪುರಾಣ	೨೮
ನಾರಾಯಣವರ್ಮ	ಶ್ರೀಮದ್ಭಾಗವತ	೩೦
ಶ್ರೀಜಿತಂತೇ ಸ್ತೋತ್ರಮ್	.....	೩೬
ಶ್ರೀರಘುನಾಥಕವಚಮ್	ಶ್ರೀವಾದಿರಾಜತೀರ್ಥರು	೪೬
ಶ್ರೀಹಯಗ್ರೀವಕವಚಮ್	ಶ್ರೀಅಥರ್ವವೇದ	೪೮
ಶ್ರೀಹಯಗ್ರೀವಾಷ್ಟಕಮ್	ಶ್ರೀವ್ಯಾಘ್ರಪುರೀ ನರಸಿಂಹ	೫೧
ಶ್ರೀಹಯಗ್ರೀವಸಂಪದಾಸ್ತೋತ್ರಮ್	ಶ್ರೀವಾದಿರಾಜತೀರ್ಥರು	೫೨
ಶ್ರೀಹಯಗ್ರೀವಪ್ರಾರ್ಥನಾದಶಕಸ್ತೋತ್ರಮ್	ಶ್ರೀವಾದಿರಾಜತೀರ್ಥರು	೫೩
ಶ್ರೀಹಯವದನಾಷ್ಟಕಮ್	ಶ್ರೀವಾದಿರಾಜತೀರ್ಥರು	೫೫
ಶ್ರೀಹಯವದನಸ್ತೋತ್ರಮ್	ಗೂಢಕರ್ತೃಕ	೫೭
ಶ್ರೀಕೇಶವಾದಿಸ್ತುತಿಃ	ಶ್ರೀವಾದಿರಾಜತೀರ್ಥರು	೫೭
ರಮೇಶಸ್ತುತಿಃ	ಶ್ರೀವಾದಿರಾಜತೀರ್ಥರು	೬೦
ಶ್ರೀರಾಮಪಂಚಕಮ್	ಶ್ರೀದಾದಿರಾಜತೀರ್ಥರು	೬೧
ಶ್ರೀರಾಮಪ್ರಭಾತಪಂಚಕಮ್	ಶ್ರೀಸುಜ್ಞಾನೇಂದ್ರತೀರ್ಥರು	೬೨
ಶ್ರೀರಾಮಚಾರಿತ್ರ್ಯಮಂಜರೀ	ಶ್ರೀರಾಘವೇಂದ್ರತೀರ್ಥರು	೬೪
ಶ್ರೀರಾಮತಾರಾವಲಿಃ	ಶ್ರೀಸುಮತೀಂದ್ರತೀರ್ಥರು	೬೬
ಶ್ರೀರಾಮಕವಚಮ್	ಶ್ರೀವಾದಿರಾಜರು	೭೨
ಶ್ರೀರಾಮರಕ್ಷಾಸ್ತೋತ್ರಮ್	ಪದ್ಮಪುರಾಣೋಕ್ತ	೭೫
ಶ್ರೀರಾಮರಕ್ಷಾಸ್ತೋತ್ರಮ್	ಬುಧಕೌಶಿಕಸಂಗ್ರಹಿತ	೭೬
ಸಪ್ತರ್ಷಿರಾಮಾಯಣಮ್	ಸಪ್ತರ್ಷಿಗಳು	೮೦
ಶ್ರೀರಾಮದಶಕಮ್	ಶ್ರೀವಾದಿರಾಜತೀರ್ಥರು	೮೩
ಏಕಶ್ಲೋಕೀ ರಾಮಾಯಣ	ಶ್ರೀಜಯರಾಮಾಚಾರ್ಯರು	೮೫
ಶ್ರೀಶ್ರೀನಿವಾಸಸ್ತೋತ್ರಮ್	ಶ್ರೀವ್ಯಾಸರಾಜರು	೮೫
ಶ್ರೀವೇಂಕಟೇಶಮಂಗಲಾಷ್ಟಕಮ್	ಶ್ರೀವಾದಿರಾಜತೀರ್ಥರು	೮೬
ಶ್ರೀವೇಂಕಟೇಶ ಉಷಃಕಾಲಸ್ತೋತ್ರಮ್	ಶ್ರೀಸ್ಕಂದಪುರಾಣ	೮೮
ಶ್ರೀವೇಂಕಟೇಶದ್ವಾದಶನಾಮಸ್ತೋತ್ರಮ್	ಶ್ರೀಬ್ರಹ್ಮಾಂಡಪುರಾಣ	೯೦
ಶ್ರೀವೇಂಕಟೇಶಸ್ತೋತ್ರಮ್	ಶ್ರೀಬ್ರಹ್ಮಾಂಡಪುರಾಣ	೯೧

ಶ್ರೀವೆಂಕಟೇಶಸ್ತುತಿಃ	ಶ್ರೀವಾದಿರಾಜತೀರ್ಥರು	೯೩
ಶ್ರೀವೆಂಕಟೇಶಸ್ತವರಾಜಃ	ಶ್ರೀಗುರುಜಗನ್ನಾಥದಾಸರು	೯೫
ಅಭೀಷ್ಟಪ್ರದ ಶ್ರೀವೇಂಕಟೇಶಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೯೮
ಶ್ರೀವೇಂಕಟೇಶಸ್ತೋತ್ರಮ್	ಮಾರ್ಕಂಡೇಯಪುರಾಣ	೧೦೦
ಶ್ರೀವೇಂಕಟೇಶಮಂಗಳಾಷ್ಟಕಮ್	ಶ್ರೀವಾದಿರಾಜತೀರ್ಥರು	೧೦೩
ಗಜೇಂದ್ರಮೋಕ್ಷ	ಶ್ರೀಮದ್ಭಾಗವತ	೧೦೪
ದಶಾವತಾರಮಾಲಿಕಾಸ್ತೋತ್ರಮ್	ಶ್ರೀಲಕ್ಷ್ಮೀನಾರಾಯಣಾಚಾರ್ಯರು	೧೧೪
ದಶಾವತಾರಸ್ತೋತ್ರಮ್	ಶ್ರೀವಾದಿರಾಜತೀರ್ಥರು	೧೧೭
ದಶಾವತಾರಸ್ತುತಿಃ	ಶ್ರೀರಾಘವೇಂದ್ರತೀರ್ಥರು	೧೧೮
ದಶಾವತಾರಸ್ತುತಿಃ	ಶ್ರೀವಾದಿರಾಜತೀರ್ಥರು	೧೨೦
ದಶಾವತಾರಹರಿಗಾಥಾ	ಶ್ರೀವಿಜಯಧ್ವಜತೀರ್ಥರು	೧೨೮
ಶ್ರೀವ್ಯಾಸವರ್ಣನಮ್	ಶ್ರೀವಾದಿರಾಜತೀರ್ಥರು	೧೩೯
ಶ್ರೀಕೃಷ್ಣರಾಮಾವತಾರಚರಿತರತ್ನಸಂಗ್ರಹಃ	ಶ್ರೀವಾದಿರಾಜತೀರ್ಥರು	೧೪೦
ಶ್ರೀಕೃಷ್ಣಪದ್ಮಮ್ (ಕಂದುಕಸ್ತುತಿಃ)	ಶ್ರೀಮದಾನಂದತೀರ್ಥರು	೧೪೩
ಶ್ರೀಕೃಷ್ಣದ್ವಾದಶನಾಮಸ್ತೋತ್ರಮ್	ಶ್ರೀಮನ್ಮಹಾಭಾರತಾರಣ್ಯಪರ್ವ	೧೪೪
ಶ್ರೀಕೃಷ್ಣಮಾಲಾ	ಶ್ರೀನಾರಾಯಣಪಂಡಿತಾಚಾರ್ಯರು	೧೪೬
ಶ್ರೀಕೃಷ್ಣಚಾರಿತ್ರ್ಯಮಂಜರೀ	ಶ್ರೀರಾಘವೇಂದ್ರತೀರ್ಥರು	೧೪೯
ಶ್ರೀಕೃಷ್ಣೋತ್ತರಶತನಾಮಸ್ತೋತ್ರಮ್	ಬ್ರಹ್ಮಾಂಡಪುರಾಣ	೧೪೯
ಶ್ರೀಕೃಷ್ಣಸ್ತುತಿಃ	ಶ್ರೀದಾದಿರಾಜತೀರ್ಥರು	೧೪೮
ಶ್ರೀಕೃಷ್ಣಸ್ತುತಿಃ	ಶ್ರೀವಿಜಯಧ್ವಜತೀರ್ಥರು	೧೪೯
ಶ್ರೀಕೃಷ್ಣಮಂಗಳಾಷ್ಟಕಮ್	ಶ್ರೀವ್ಯಾಸರಾಜರು	೧೪೮
ಶ್ರೀಕೃಷ್ಣಸ್ತುತಿಃ	ಶ್ರೀವಾದಿರಾಜತೀರ್ಥರು	೧೪೧
ಶ್ರೀಕೃಷ್ಣಾಷ್ಟಕಮ್	ಶ್ರೀವಿಷ್ಣುತೀರ್ಥರು	೧೪೩
ಶ್ರೀಕೃಷ್ಣಾಷ್ಟಕಮ್	ಶ್ರೀವಾದಿವಂದ್ಯತೀರ್ಥರು	೧೪೪
ಶ್ರೀಕೃಷ್ಣಸ್ತವಃ	ಶ್ರೀಮುದ್ಗಲಾಚಾರ್ಯರು	೧೪೭
ಶ್ರೀಕೃಷ್ಣಾಷ್ಟಕಮ್	ಶ್ರೀವಾದಿರಾಜತೀರ್ಥರು	೧೪೮
ಶ್ರೀಕೃಷ್ಣಸ್ತೋತ್ರಮ್	ಗೂಢಕರ್ತೃಕ	೧೬೦
ಗೋಪಿಗೀತಮ್	ಶ್ರೀಮದ್ಭಾಗವತ	೧೬೧
ಮಹಾಭಾರತತಾತ್ಪರ್ಯನಿರ್ಣಯಭಾವಸಂಗ್ರಹಃ	ಶ್ರೀರಾಘವೇಂದ್ರತೀರ್ಥರು	೧೬೩
ಕುರುಸ್ತೋತ್ರಮ್	ಶ್ರೀವಾದಿರಾಜತೀರ್ಥರು	೧೬೯
ವೇದಸಾರಮ್	ಶ್ರೀಅಕ್ಷೋಭ್ಯತೀರ್ಥರು	೧೭೧
ತವ್ಯಸ್ತೋತ್ರಮ್	ಶ್ರೀವಾದಿರಾಜತೀರ್ಥರು	೧೭೩
ದ್ವಾದಶಸ್ತೋತ್ರಮ್	ಶ್ರೀಮದಾನಂದತೀರ್ಥರು	೧೭೪
ಧ್ಯಾನಮಾಲಾ	.....	೧೮೯
ಚಿಂತಾಖಂಡನಸ್ತೋತ್ರಮ್	ಶ್ರೀವಾದಿರಾಜತೀರ್ಥರು	೧೯೩
ಧೀಶುದ್ಧಿಸ್ತೋತ್ರಮ್	ಶ್ರೀವಾದಿರಾಜತೀರ್ಥರು	೧೯೫

ಆಳ್ವಾರ್‌ಸ್ತುತಿ	ಶ್ರೀವಾದಿರಾಜತೀರ್ಥರು	೧೯೬
ಉಡುಪಿಕೃಷ್ಣವರಪ್ರದಸ್ತೋತ್ರಮ್	ಶ್ರೀವಾದಿರಾಜತೀರ್ಥರು	೧೯೯
ಶ್ರೀರಂಗನಾಥಸ್ತುತಿಃ	ಶ್ರೀವಾದಿರಾಜತೀರ್ಥರು	೨೦೦
ಶ್ರೀಬದರೀನಾರಾಯಣಸ್ತುತಿಃ	ಶ್ರೀವಾದಿರಾಜತೀರ್ಥರು	೨೦೧
ಶ್ರೀಅನಂತೇಶ್ವರಸ್ತುತಿಃ	ಶ್ರೀವಾದಿರಾಜತೀರ್ಥರು	೨೦೩
ಶ್ರೀಅನಂತಪದ್ಮನಾಭಸ್ತುತಿಃ	ಶ್ರೀವಾದಿರಾಜತೀರ್ಥರು	೨೦೪
ಶ್ರೀಅನಂತಪದ್ಮನಾಭಸ್ತುತಿಃ	ಶ್ರೀವಾದಿರಾಜತೀರ್ಥರು	೨೦೫
ಶ್ರೀಪದ್ಮನಾಭಸ್ತುತಿಃ	ಶ್ರೀಮದಾನಂದತೀರ್ಥರು	೨೦೬
ಶ್ರೀನಾರಾಯಣಹೃದಯಸ್ತೋತ್ರಮ್	ಶ್ರೀಅಥರ್ವಣರಹಸ್ಯ	೨೦೬
ಶ್ರೀನೃಸಿಂಹಕವಚಮ್	ಶ್ರೀಪ್ರಹ್ಲಾದಪ್ರೋಕ್ತಂ	೨೧೧
ಶ್ರೀನೃಸಿಂಹಸ್ತುತಿಃ	ಶ್ರೀನಾರಾಯಣಪಂಡಿತಾಚಾರ್ಯರು	೨೧೪
ಶ್ರೀನೃಸಿಂಹಸ್ತುತಿಃ (ಶ್ರೀನೃಸಿಂಹಾಷ್ಟಕಮ್)	ಶ್ರೀವಿಜಯೀಂದ್ರತೀರ್ಥರು	೨೧೯
ಶ್ರೀನೃಸಿಂಹಸ್ತುತಿಃ	ಶ್ರೀಮದ್ಭಾಗವತಮಹಾಪುರಾಣ	೨೨೧
ಶ್ರೀನರಸಿಂಹಸ್ತುತಿಃ	ಶ್ರೀಪ್ರಹ್ಲಾದಕೃತ	೨೨೪
ಶ್ರೀನೃಸಿಂಹಕ್ಷಮಾವಲೋಕನಪ್ರಾರ್ಥನಾಸ್ತುತಿಃ	ಶ್ರೀಶಸ್ಕೃತಕೃತ	೨೨೫
ಶ್ರೀನರಸಿಂಹಸ್ತೋತ್ರಮ್	ಶ್ರೀಪ್ರಹ್ಲಾದಕೃತ	೨೨೮
ಶ್ರೀನೃಹರ್ಯಷ್ಟಕಮ್	ಶ್ರೀವಾದಿರಾಜತೀರ್ಥರು	೨೩೭
ಶ್ರೀಲಕ್ಷ್ಮೀನೃಸಿಂಹಸ್ತೋತ್ರಸಂಗ್ರಹಃ	ಸಂಗ್ರಹ	೨೩೮
ಶ್ರೀಅಹೋಬಲನೃಸಿಂಹಸ್ತುತಿಃ	ಶ್ರೀವಾದಿರಾಜತೀರ್ಥರು	೨೪೧
ಶ್ರೀವಾಮನನಮಂಗಲಾಷ್ಟಕಮ್	ಶ್ರೀವ್ಯಾಸಾಚಾರ್ಯರು	೨೪೧
ಶ್ರೀವಾಮನಸ್ತೋತ್ರಮ್	ಶ್ರೀಬೃಹನ್ನಾರದೀಯಪುರಾಣ	೨೪೩
ಶ್ರೀದಧಿವಾಮನಸ್ತೋತ್ರಮ್	ಶ್ರೀವಾಮನಪುರಾಣ	೨೪೫
ಶ್ರೀತ್ರಿವಿಕ್ರಮಸ್ತೋತ್ರಮ್	ಶ್ರೀವಾದಿರಾಜತೀರ್ಥರು	೨೪೬
ಶ್ರೀತ್ರಿವಿಕ್ರಮಸಪ್ತರಾತ್ರೋತ್ಸವಪ್ರಕಾರಃ	ಶ್ರೀವಾದಿರಾಜತೀರ್ಥರು	೨೪೯
ಶ್ರೀತ್ರಿವಿಕ್ರಮಸ್ತುತಿಃ	ಶ್ರೀವಾದಿರಾಜತೀರ್ಥರು	೨೫೧
ಶ್ರೀಪರಶುರಾಮಧ್ಯಾನಮ್ (ತಂತ್ರಸಾರ)	ಶ್ರೀಮದಾನಂದತೀರ್ಥರು	೨೫೨
ಶ್ರೀಪರಶುರಾಮಸ್ತುತಿಃ	ಶ್ರೀಮದ್ಭಾಗವತ	೨೫೩
ಷಾಷ್ಟಿಕಮಂಗಲಾಷ್ಟಕಮ್	ಶ್ರೀವ್ಯಾಸರಾಜರು	೨೫೩
ಶ್ರೀನಂದಸೂನುಸ್ತೋತ್ರಮ್	ಶ್ರೀಮನ್ನಾರಾಯಣಪಂಡಿತಾಚಾರ್ಯರು	೨೫೫
ಬಾಲರಕ್ಷಾಸ್ತೋತ್ರಮ್	ಶ್ರೀಮದ್ಭಾಗವತ	೨೫೬
ಶ್ರೀಹರಿಪರವಾದ ಸ್ತೋತ್ರಗಳು	ಶ್ರೀವಾದಿರಾಜತೀರ್ಥರು	೨೫೮
ಶ್ರೀಕೇಶವಾದಿಚತುರ್ವಿಂಶತಿಮೂರ್ತಿಲಕ್ಷಣಸ್ತುತಿಃ	ಶ್ರೀಸುಮತೀಂದ್ರತೀರ್ಥರು	೨೬೦
ಶ್ರೀದಾಮೋದರಸ್ತೋತ್ರಮ್	ಶ್ರೀಪಂಚರಾತ್ರಾಗಮ	೨೬೩
ಶ್ರೀಪಾಂಡುರಂಗವಿಠ್ಠಲಸ್ತೋತ್ರಮ್	ಶ್ರೀಸ್ಕಂದಪುರಾಣ	೨೬೪
ಶ್ರೀಪ್ರತ್ಯಕ್ಷಪಾಂಡುರಂಗದ್ವಾದಶಸ್ತೋತ್ರಮ್		೨೬೭
ಶ್ರೀಪ್ರತ್ಯಕ್ಷಪಾಂಡುರಂಗಪಂಚರತ್ನಾನಿ		೨೬೮

ಶ್ರೀಪ್ರತ್ಯಕ್ಷಪಾಂಡುರಂಗಾಷ್ಟಕಮ್		೨೬೯
ಮೃತ್ಯ್ವಷ್ಟಕಸ್ತೋತ್ರಮ್	ಶ್ರೀಮಾರ್ಕಂಡೇಯಪುರಾಣ	೨೭೦
ಶಾಲಗ್ರಾಮಸ್ತೋತ್ರಮ್	ಶ್ರೀಭವಿಷ್ಯೋತ್ತರಪುರಾಣ	೨೭೨
ಮುಕ್ತಮಾಲಾ	ಶ್ರೀವಿಷ್ಣುತೀರ್ಥರು	೨೭೫
ಏಕಶ್ಲೋಕೀ ಮಹಾಭಾರತ		೨೭೭
ಏಕಶ್ಲೋಕೀ ಭಾಗವತ		೨೭೭
ಬ್ರಹ್ಮಸೂತ್ರಾಣುಭಾಷ್ಯಮ್	ಶ್ರೀಮದಾನಂದತೀರ್ಥರು	೨೭೭
ಶ್ರೀವಾಸುಷ್ಕೃಷ್ಣಾಷ್ಟಕಮ್	ಶ್ರೀವಾದಿರಾಜತೀರ್ಥರು	೨೮೧
ಋಣಮೋಚನಸ್ತೋತ್ರಮ್	ಶ್ರೀವಾದಿರಾಜತೀರ್ಥರು	೨೮೩
ಪಾಪವಿಮೋಚನಸ್ತೋತ್ರಮ್	ಶ್ರೀವಿಜಯೀಂದ್ರತೀರ್ಥರು	೨೮೫
ದ್ವಾತ್ರಿಂಶದಪರಾಧಸ್ತೋತ್ರಮ್	ಶ್ರೀವರಾಹಪುರಾಣ	೨೮೮
ಶತಾಪರಾಧಸ್ತೋತ್ರಮ್	ಶ್ರೀಗರುಡಪುರಾಣ	೨೯೦
ಹರಿಸ್ತುತಿಃ	ಶ್ರೀಜಗನ್ನಾಥದಾಸರು	೨೯೪
ಮಂಗಲಾಷ್ಟಕಮ್	ಶ್ರೀರಾಜರಾಜೇಶ್ವರತೀರ್ಥರು	೨೯೫
ಶ್ರೀಲಕ್ಷ್ಮೀಹೃದಯಮ್	ಶ್ರೀಅಥರ್ವಣರಹಸ್ಯ	೨೯೭
ಶ್ರೀಲಕ್ಷ್ಮೀಸ್ತವರಾಜಃ	ಶ್ರೀಗುರುಜಗನ್ನಾಥದಾಸರು	೩೧೦
ಶ್ರೀಲಕ್ಷ್ಮ್ಯಷ್ಟಕಮ್	ಶ್ರೀಗುರುಜಗನ್ನಾಥದಾಸರು	೩೧೬
ಶ್ರೀಮಹಾಲಕ್ಷ್ಮೀಕವಚಮ್	ಶ್ರೀಅಥರ್ವಣರಹಸ್ಯ	೩೨೦
ಕೊಲ್ಲಾಪುರ ಶ್ರೀಲಕ್ಷ್ಮೀಸ್ತುತಿಃ	ಶ್ರೀವಾದಿರಾಜತೀರ್ಥರು	೩೨೩
(ಕನ್ಯಾಕುಮಾರಿಕ್ಷೇತ್ರಸ್ಥ) ಶ್ರೀಲಕ್ಷ್ಮೀಸ್ತುತಿಃ	ಶ್ರೀವಾದಿರಾಜತೀರ್ಥರು	೩೨೪
ಸಂಕ್ಷಿಪ್ತ ಶ್ರೀಲಕ್ಷ್ಮೀಹೃದಯಸ್ತೋತ್ರಮ್		೩೨೫
ಶ್ರೀಲಕ್ಷ್ಮೀದ್ವಾದಶನಾಮಸ್ತೋತ್ರಮ್		೩೨೬
ಶ್ರೀಭದ್ರಲಕ್ಷ್ಮೀಸ್ತೋತ್ರಮ್		೩೨೬
ಶ್ರೀರಮಾಸ್ತೋತ್ರಮ್	ಶ್ರೀ(ಆಡಮೀ)ವಿಷ್ಣುತೀರ್ಥರು	೩೨೮
ಶ್ರೀರಮಾಸ್ತೋತ್ರಮ್	ಶ್ರೀಹುಲಿಗೀ ಶ್ರೀಯಜ್ಞಾಚಾರ್ಯರು	೩೩೧
ಶ್ರೀಶ್ರೀಶಗುಣದರ್ಪಣಮ್	ಶ್ರೀವಾದಿರಾಜತೀರ್ಥರು	೩೩೨
(ವಿಮಾನಗಿರಿಸ್ಥ) ಶ್ರೀದುರ್ಗಾಸ್ತುತಿಃ	ಶ್ರೀವಾದಿರಾಜತೀರ್ಥರು	೩೩೫
ಶ್ರೀಹರಿವಾಯುಸ್ತುತಿಃ	ಶ್ರೀತ್ರಿವಿಕ್ರಮಪಂಡಿತಾಚಾರ್ಯರು	೩೩೬
ಖಿಲವಾಯುಸ್ತುತಿಃ	ಶ್ರೀತ್ರಿವಿಕ್ರಮಪಂಡಿತಾಚಾರ್ಯರು	೩೪೩
ಲಘುವಾಯುಸ್ತುತಿಃ	ಶ್ರೀಕಲ್ಯಾಣೀದೇವಿ	೩೪೬
ಅಣುವಾಯುಸ್ತುತಿಃ	ಶ್ರೀಕಲ್ಯಾಣೀದೇವಿ	೩೪೭
ಶ್ರೀಪ್ರಾಣಾಷ್ಟಕಮ್	ಶ್ರೀವಾದಿರಾಜತೀರ್ಥರು	೩೪೭
ಸುಂದರಕಾಂಡರಾಮಾಯಣನಿರ್ಣಯಃ	ಶ್ರೀಮದಾನಂದತೀರ್ಥರು	೩೫೦
ಪಂಚಮುಖೀಮಾರುತಿಕವಾವಲಂಬನಸ್ತೋತ್ರಮ್	ಶ್ರೀಭುಜಕವೆಂಕಟಾಚಾರ್ಯರು	೩೫೫

ಪಂಚಮುಖೀಮಾರುತಿಸ್ತೋತ್ರಮ್		೩೫೬
ಯಂತ್ರೋದ್ಧಾರಕ ಹನೂಮತ್‌ಸ್ತೋತ್ರಮ್	ಶ್ರೀವ್ಯಾಸರಾಜತೀರ್ಥರು	೩೫೭
ಶ್ರೀವಾಯೋರವತಾರತ್ರಯಸ್ತೋತ್ರಮ್		೩೫೮
ಶ್ರೀಭಾರತೀಸ್ತೋತ್ರಮ್	ಶ್ರೀಜಯತೀರ್ಥರು	೩೫೯
ಶ್ರೀಸರಸ್ವತೀದ್ವಾದಶನಾಮಸ್ತೋತ್ರಮ್		೩೫೯
ಶ್ರೀಗರುಡದ್ವಾದಶನಾಮಸ್ತೋತ್ರಮ್		೩೬೦
ಗರುಡಸ್ತೋತ್ರಮಾಲಿಕಾ	ಸಂಗ್ರಹ	೩೬೧
ಶೇಷಸ್ತುತಿಮಾಲಿಕಾ	ಸಂಗ್ರಹ	೩೬೧
ರುದ್ರಸ್ತುತಿಮಾಲಿಕಾ		೩೬೨
ಭಾವೀಸಮೀರರಾದ ಶ್ರೀವಾದಿರಾಜರ ತೀರ್ಥ-ಪ್ರಬಂಧದಿಂದ ಆಯ್ದ ರುದ್ರದೇವರ ಸ್ತೋತ್ರಗಳು	ಶ್ರೀವಾದಿರಾಜತೀರ್ಥರು	೩೬೩
ಲಘುಶಿವಸ್ತುತಿಃ	ಶ್ರೀವ್ಯಾಸರಾಜತೀರ್ಥರು	೩೬೫
ಶ್ರೀಶಿವಸ್ತುತಿಃ	ಶ್ರೀನಾರಾಯಣಪಂಡಿತಾಚಾರ್ಯರು	೩೬೫
ಶ್ರೀರುದ್ರದ್ವಾದಶನಾಮಸ್ತೋತ್ರಮ್		೩೬೭
ಕಾಮಾಕ್ಷಿಸ್ತೋತ್ರಮ್ (ಕಂಚಿ)	ಸಂಗ್ರಹ	೩೬೮
ಶ್ರೀತುಲಸೀಸ್ತೋತ್ರಮ್	ಶ್ರೀಬ್ರಹ್ಮಾಂಡಪುರಾಣ	೩೬೯
ಶ್ರೀಗಣೇಶಸ್ತುತಿವಲ್ಲೀ	ಸಂಗ್ರಹ	೩೭೨
ಶ್ರೀವಿಘ್ನೇಶ್ವರ (ಗೋಕರ್ಣಕ್ಷೇತ್ರ)	ಸಂಗ್ರಹ	೩೭೩
ಗಣೇಶದ್ವಾದಶನಾಮಸ್ತೋತ್ರಮ್		೩೭೩
ಶ್ರೀಸುಬ್ರಹ್ಮಣ್ಯಸ್ತೋತ್ರಮ್	ಶ್ರೀವಾದಿರಾಜತೀರ್ಥರು	೩೭೪
ಗೋಸಾವಿತ್ರೀಸ್ತೋತ್ರಮ್	ಶ್ರೀಮನ್ಮಹಾಭಾರತ	೩೭೫
ನದೀತಾರತಮ್ಯಸ್ತೋತ್ರಮ್	ಶ್ರೀರಾಘವೇಂದ್ರತೀರ್ಥರು	೩೭೭
ಗಂಗಾಸ್ತೋತ್ರಮ್	ಶ್ರೀವಾದಿರಾಜತೀರ್ಥರು	೩೭೯
ನದೀಸ್ತೋತ್ರಗಳು		೩೮೧
ಶ್ರೀಸೂರ್ಯದ್ವಾದಶನಾಮಸ್ತೋತ್ರಮ್	ಶ್ರೀಬ್ರಹ್ಮಾಂಡಪುರಾಣ	೩೮೭
ಶ್ರೀಶನಿಸ್ತೋತ್ರಮ್	ಶ್ರೀವಾದಿರಾಜತೀರ್ಥರು	೩೮೮
ಶ್ರೀಶನಿಸ್ತೋತ್ರಮ್	ಶ್ರೀದಶರಥ ಮಹಾರಾಜರು	೩೮೮
ನವಗ್ರಹಸ್ತೋತ್ರಮ್	ಶ್ರೀವ್ಯಾಸರಾಜತೀರ್ಥರು	೩೮೯
ನವಗ್ರಹಸ್ತೋತ್ರಮ್	ಶ್ರೀವಾದಿರಾಜತೀರ್ಥರು	೩೯೦
ನವಗ್ರಹಸ್ತೋತ್ರಮ್	ಶ್ರೀಸತ್ಯಧರ್ಮತೀರ್ಥರು	೩೯೧

ಗುರುಪರ್ವ

ಶ್ರೀಸುಮಧ್ವವಿಜಯಃ	ಶ್ರೀನಾರಾಯಣಪಂಡಿತಾಚಾರ್ಯರು	೩೯೫
ಪ್ರಮೇಯನವಮಾಲಿಕಾ (ಅಣುಮಧ್ವವಿಜಯ)	ಶ್ರೀನಾರಾಯಣಪಂಡಿತಾಚಾರ್ಯರು	೫೩೭

ಏಕಶ್ಲೋಕೀ ಶ್ರೀಸುಮಧ್ವವಿಜಯ	ಶ್ರೀಆಯಾಚಿತ ಧೀರೇಂದ್ರಾಚಾರ್ಯ	೫೪೩
ಶ್ರೀಸುಮಧ್ವವಿಜಯಪ್ರಮೇಯಫಲಮಾಲಿಕಾ	ಶ್ರೀವಿಷ್ಣುತೀರ್ಥರು	೫೪೩
ಶ್ರೀಮಧ್ವಾಷ್ಟಕಮ್	ಶ್ರೀತ್ರಿವಿಕ್ರಮಪಂಡಿತಾಚಾರ್ಯರು	೫೪೫
ಶ್ರೀಗ್ರಂಥಮಾಲಿಕಾಸ್ತೋತ್ರಮ್	ಶ್ರೀವ್ಯಾಸರಾಜತೀರ್ಥರು	೫೪೮
ಶ್ರೀಮಧ್ವಕವಚಮ್	ಶ್ರೀತ್ರಿವಿಕ್ರಮಪಂಡಿತಾಚಾರ್ಯರು	೫೪೯
ಶ್ರೀಮಧ್ವಮುನಿಪ್ರತಾಪಾಷ್ಟಕಮ್	ಶ್ರೀವಾದಿರಾಜತೀರ್ಥರು	೫೫೧
ಶ್ರೀಪೂರ್ಣಬೋಧಸ್ತೋತ್ರಮ್	ಶ್ರೀಲಿಕುಚಾನ್ವಯ	೫೫೩
ಶ್ರೀಮಧ್ವಸ್ತುತಿಮಾಲಿಕಾ	ಶ್ರೀವಿಜಯೀಂದ್ರತೀರ್ಥರು	೫೫೬
ಶ್ರೀಪದ್ಮನಾಭತೀರ್ಥಸ್ತೋತ್ರಸಂಗ್ರಹ	ಸಂಗ್ರಹ	೫೫೭
ಶ್ರೀನರಹರಿತೀರ್ಥಸ್ತೋತ್ರಮ್	ಸಂಗ್ರಹ	೫೬೦
ಶ್ರೀಮಾಧವತೀರ್ಥಸ್ತೋತ್ರಮ್	ಸಂಗ್ರಹ	೫೬೩
ಶ್ರೀಅಕ್ಷೋಭ್ಯತೀರ್ಥರು	ಸಂಗ್ರಹ	೫೬೪
ಶ್ರೀಜಯತೀರ್ಥಸ್ತುತಿಮುಕ್ತಾವಲೀ	ಸಂಗ್ರಹ	೫೬೫
ಶ್ರೀಜಯತೀರ್ಥಮಂಗಲಾಷ್ಟಕಮ್	ಶ್ರೀವೈಷ್ಣನಾಥಿನಾರಾಯಣಪಂಡಿತಾಚಾರ್ಯರು	೫೬೮
ಶ್ರೀಅಣುಜಯತೀರ್ಥವಿಜಯಃ	ಶ್ರೀವ್ಯಾಸರಾಜತೀರ್ಥರು	೫೭೦
ಶ್ರೀಜಯತೀರ್ಥವಿಜಯಃ	ಶ್ರೀರಘುದಾಂತತೀರ್ಥರು	೫೭೬
ಶ್ರೀಜಯತೀರ್ಥಾಷ್ಟಕಮ್	ಶ್ರೀವಿಷ್ಣುತೀರ್ಥರು	೫೮೧
ಶ್ರೀಜಯತೀರ್ಥದ್ವಾದಶನಾಮಸ್ತೋತ್ರಮ್		೫೮೩
ಶ್ರೀಜಯತೀರ್ಥಸ್ತೋತ್ರಮ್	ಶ್ರೀವಿಷ್ಣುತೀರ್ಥರು	೫೮೩
ಶ್ರೀನ್ಯಾಯಸುಧಾಸ್ತೋತ್ರಮ್	ಶ್ರೀವಿಷ್ಣುತೀರ್ಥರು	೫೮೪
ಶ್ರೀಜಯತೀರ್ಥಗ್ರಂಥವರ್ಣನಮ್	ಶ್ರೀ ಛಲಾರಿ ಸಂಕರ್ಷಣಾಚಾರ್ಯ	೫೮೫
ಶ್ರೀವಿದ್ಯಾಧಿರಾಜತೀರ್ಥಸ್ತೋತ್ರಮ್		೫೮೮
ಶ್ರೀಕವೀಂದ್ರತೀರ್ಥಸ್ತೋತ್ರಮ್		೫೮೮
ಶ್ರೀವಾಗೀಶತೀರ್ಥಸ್ತೋತ್ರಮ್		೫೮೮
ಶ್ರೀರಾಮಚಂದ್ರತೀರ್ಥಸ್ತೋತ್ರಮ್		೫೮೮
ಶ್ರೀವಿಬುಧೇಂದ್ರಸ್ತೋತ್ರಮ್		೫೮೮
ಶ್ರೀಜಿತಾಮಿತ್ರರಾಯರ ಸ್ತೋತ್ರ	ಪಂಡಿತ ಗಿರಾಚಾರ್ಯ ಕವಿಗಳು	೫೮೯
ಶ್ರೀಜಿತಾಮಿತ್ರಸ್ತೋತ್ರಮ್		೫೯೦
ಶ್ರೀರಘುನಂದನತೀರ್ಥಸ್ತುತಿಃ		೫೯೪
ಶ್ರೀಬ್ರಹ್ಮಣ್ಯತೀರ್ಥವಿಜಯಃ	ಶ್ರೀಶ್ರೀನಿವಾಸತೀರ್ಥರು	೫೯೪
ಶ್ರೀಬ್ರಹ್ಮಣ್ಯತೀರ್ಥಮಂಗಳಾಷ್ಟಕಮ್	ಶ್ರೀಶ್ರೀನಿವಾಸತೀರ್ಥರು	೬೦೧
ಪಂಚರತ್ನಮಾಲಿಕಾಸ್ತೋತ್ರ		೬೦೩
ಶ್ರೀಬ್ರಹ್ಮಣ್ಯತೀರ್ಥಚರಿತ್ರಸಂಗ್ರಹಃ		೬೦೫
ಶ್ರೀಬ್ರಹ್ಮಣ್ಯತೀರ್ಥಸ್ತುತಿಃ	ಶ್ರೀನರಸಿಂಹ	೬೦೬
ಶ್ರೀಬ್ರಹ್ಮಣ್ಯತೀರ್ಥಗುರುರಾಜಸ್ತೋತ್ರಮ್	ಶ್ರೀಶ್ರೀನಿವಾಸತೀರ್ಥರು	೬೦೮
ಶ್ರೀಪಾದರಾಜಸ್ತುತಿಃ	ಶ್ರೀವಾದಿರಾಜತೀರ್ಥರು	೬೧೨

ಶ್ರೀಪಾದರಾಜಪಂಚರತ್ನಮಾಲಿಕಾ	ಶ್ರೀವ್ಯಾಸರಾಜತೀರ್ಥರು	೬೧೪
ಶ್ರೀಪಾದರಾಜಾಷ್ಟಕಮ್	ಶ್ರೀವಿಜಯೀಂದ್ರತೀರ್ಥರು	೬೧೫
ಸರ್ವಪದ್ಯಸುರತ್ನಮಾಲಾ	ಶ್ರೀನಿಧಿತೀರ್ಥರು	೬೧೭
ಶ್ರೀಶ್ರೀಪಾದರಾಜಾಷ್ಟಕಮ್	ಶ್ರೀನಿಧಿತೀರ್ಥರು	೬೧೯
ಶ್ರೀವ್ಯಾಸತೀರ್ಥಸುಪ್ರಭಾತಮ್	ಶ್ರೀರಘೋತ್ತಮಾಚಾರ್ಯರು	೬೨೧
ಶ್ರೀವ್ಯಾಸರಾಜಸ್ತೋತ್ರಮ್	ಶ್ರೀವಿಜಯೀಂದ್ರತೀರ್ಥರು	೬೨೪
ಶ್ರೀವ್ಯಾಸರಾಜಗುರುಸಾರ್ವಭೌಮಚರಿತಮ್	ಶ್ರೀವಿದ್ಯಾರತ್ನಾಕರತೀರ್ಥರು	೬೨೭
ಶ್ರೀವ್ಯಾಸರಾಜಸ್ತುತಿಮಲ್ಲಿಕಾ	ಸಂಗ್ರಹ	೬೨೯
ಶ್ರೀವಾದಿರಾಜಸುಪ್ರಭಾತ	ಶ್ರೀಲಕ್ಷ್ಮೀನಾರಾಯಣ ಉಪಾಧ್ಯಾಯರು	೬೩೧
ಶ್ರೀವಾದಿರಾಜಾಷ್ಟಕಮ್	ಶ್ರೀವಾದಿವಂದ್ಯರು	೬೩೪
ಶ್ರೀವಾದಿರಾಜಸ್ತುತಿಃ	ಶ್ರೀವೇದವೇದ್ಯರು	೬೩೯
ಶ್ರೀವಾದಿರಾಜಕವಚಮ್		೬೪೧
ಶ್ರೀವಾದಿರಾಜಮಂಗಲಾಷ್ಟಕಮ್	ಶ್ರೀವಿಶ್ವೇಂದ್ರಯತಿಗಳು	೬೪೫
ಶ್ರೀವಾದಿರಾಜಪ್ರಶಂಸನಮ್	ಶ್ರೀಸುಧೀಂದ್ರತೀರ್ಥರು	೬೪೬
ಶ್ರೀವಾದಿರಾಜಸ್ತೋತ್ರಮ್	ಶ್ರೀವಾಸುದೇವ	೬೪೭
ಶ್ರೀವಾದಿರಾಜಸ್ತೋತ್ರಮ್	ಶ್ರೀಸತ್ಯಧರ್ಮತೀರ್ಥರು	೬೪೮
ಶ್ರೀವಾದೀಭಸಿಂಹಸ್ತೋತ್ರಮ್		೬೪೯
ಶ್ರೀವಾದಿರಾಜಸ್ತೋತ್ರಮ್	ಸೂರ್ಯಶಿಷ್ಯಕೃಷ್ಣ	೬೫೧
ಶ್ರೀಈಣುವ್ಯಂದಾವನಾಖ್ಯಾನಮ್		೬೫೮
ಶ್ರೀವಿಜಯೀಂದ್ರಸಂಸ್ಮೃತಿ	ಸಂಗ್ರಹ	೬೬೦
ಶ್ರೀವಿಜಯೀಂದ್ರಸ್ತೋತ್ರಮ್	ಶ್ರೀಲಕ್ಷ್ಮೀನರಸಿಂಹಸೇತುಮಾಧವಾಚಾರ್ಯ	೬೬೨
ಶ್ರೀವಿಜಯೀಂದ್ರಸ್ತೋತ್ರಮ್		೬೬೪
ಶ್ರೀವಿಜಯೀಂದ್ರವಿಜಯ	ಶ್ರೀಮದ್ಭಕವಿಗಳು	೬೬೭
ಶ್ರೀವಿಜಯೀಂದ್ರಸ್ತವನಮ್	ಶ್ರೀಸುಧೀಂದ್ರತೀರ್ಥರು	೬೯೮
ಶ್ರೀವಿಜಯೀಂದ್ರಮಂಗಳಾಷ್ಟಕಮ್	ನವೀನ ಅಪ್ಪಣ್ಣಾಚಾರ್ಯರು	೭೦೧
ಶ್ರೀಸುಧೀಂದ್ರತೀರ್ಥಸ್ತುತಿ		೭೦೩
ಶ್ರೀಸುಧೀಂದ್ರತೀರ್ಥಸುಪ್ರಭಾತಮ್	ಶ್ರೀಕವಿಕಮಲೇಶ	೭೦೪
ಶ್ರೀಸುಧೀಂದ್ರಗುರುಸ್ತೋತ್ರಮ್	ಶ್ರೀಶ್ರೀನಿವಾಸಾಚಾರ್ಯ	೭೦೫

ಶ್ರೀರಾಘವೇಂದ್ರಪರ್ವ

ಶ್ರೀರಾಘವೇಂದ್ರಸುಪ್ರಭಾತಮ್	ಶ್ರೀಲಕ್ಷ್ಮೀನಾರಾಯಣ ಉಪಾಧ್ಯಾಯರು	೭೦೯
ಶ್ರೀರಾಘವೇಂದ್ರಪ್ರಭಾತಗೀತಾನಿ	ಶ್ರೀ ಪಿ. ರಾಘವೇಂದ್ರಾಚಾರ್ಯರು	೭೧೫
ಶ್ರೀಹರಿಗುರುರಾಘವೇಂದ್ರಸುಪ್ರಭಾತಮ್	ಶ್ರೀ ರಾಜಾ. ಎಸ್. ಗುರುರಾಜಾಚಾರ್ಯರು	೭೧೬
ಶ್ರೀರಾಘವೇಂದ್ರಪ್ರಾತಃಪ್ರಾರ್ಥನಾಸ್ತೋತ್ರಮ್	ಶ್ರೀ ಪಿ. ರಾಘವೇಂದ್ರಾಚಾರ್ಯರು	೭೨೧
ಶ್ರೀರಾಘವೇಂದ್ರಮಂಗಲಾಷ್ಟಕಮ್	ಶ್ರೀಅಪ್ಪಣ್ಣಾಚಾರ್ಯರು	೭೨೩
ಶ್ರೀರಾಘವೇಂದ್ರತಂತ್ರ - ಪೂರ್ವಪೀಠಿಕಾಪಟಲ	ಶ್ರೀಕೃಷ್ಣಾವಧೂತರು	೭೨೫

ಮಂತ್ರಾಸಮರ್ಪಣಪಟಲ	ಶ್ರೀಕೃಷ್ಣಾವಧೂತರು	೭೨೯
ಶ್ರೀರಾಘವೇಂದ್ರಹೃದಯಪಟಲ	ಶ್ರೀಕೃಷ್ಣಾವಧೂತರು	೭೩೪
ಶ್ರೀಗುರುಪೂಜಾವಿಧಾನಪಟಲ	ಶ್ರೀಕೃಷ್ಣಾವಧೂತರು	೭೩೮
ರಕ್ಷಾಕವಚಪಟಲ	ಶ್ರೀಕೃಷ್ಣಾವಧೂತರು	೭೪೫
ಬಂಧಮೋಚನಕವಚಪಟಲ	ಶ್ರೀಕೃಷ್ಣಾವಧೂತರು	೭೪೯
ಅಷ್ಟೋತ್ತರಶತನಾಮಪಟಲ	ಶ್ರೀಕೃಷ್ಣಾವಧೂತರು	೭೫೩
ಸಹಸ್ರನಾಮಸ್ತೋತ್ರಪಟಲ	ಶ್ರೀಕೃಷ್ಣಾವಧೂತರು	೭೫೬
ಅಭಯಪ್ರದಾನಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೭೦
ಆಪತ್ಪರಿಹರಣಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೭೨
ದುಃಖವಿಹರಣಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೭೪
ಕರಾವಲಂಬನಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೭೬
ಸಂಸಾರೋದ್ಧರಣಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೭೮
ಹೃದ್ರೋಗಹರಣಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೭೯
ಪ್ರತಿಕೂಲಸ್ಥಾನುಕೂಲೀಕರಣಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೮೦
ಸಂತೋಷಪ್ರದಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೮೨
ದಾರಿದ್ರ್ಯವಿಮೋಚನಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೮೪
ಗುರುಕರುಣಾಸಂಪಾದನಾಸ್ತೋತ್ರಮ್	ಶ್ರೀಕೃಷ್ಣಾವಧೂತರು	೭೮೬
ಪ್ರದಕ್ಷಿಣಾಪಟಲ	ಶ್ರೀಕೃಷ್ಣಾವಧೂತರು	೭೮೮
ಗಾಥಾಸ್ತುತಿಪಟಲ	ಶ್ರೀಕೃಷ್ಣಾವಧೂತರು	೭೯೦
ಋಣಮೋಚನಪಟಲ	ಶ್ರೀಕೃಷ್ಣಾವಧೂತರು	೭೯೪
ಪಾದುಕಾಪೂಜಾವಿಧಾನಪಟಲ	ಶ್ರೀಕೃಷ್ಣಾವಧೂತರು	೮೦೦
ಉತ್ತರಪೀಠಿಕಾಪಟಲ	ಶ್ರೀಕೃಷ್ಣಾವಧೂತರು	೮೦೩
ಗುರುಸ್ತವರಾಜಪಟಲ	ಶ್ರೀಕೃಷ್ಣಾವಧೂತರು	೮೦೬
ಶ್ರೀರಾಘವೇಂದ್ರಮಾಹಾತ್ಮ್ಯಮ್	ಶ್ರೀಗುರುಜಗನ್ನಾಥದಾಸರು	೮೧೦
ಶ್ರೀರಾಘವೇಂದ್ರಪ್ರಾರ್ಥನಾ	ಶ್ರೀಗುರುಜಗನ್ನಾಥದಾಸರು	೮೨೩
ಶ್ರೀರಾಘವೇಂದ್ರಾಷ್ಟಾಕ್ಷರಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೮೨೫
ಶ್ರೀರಾಘವೇಂದ್ರಾಷ್ಟಕಮ್	ಶ್ರೀಗುರುಜಗನ್ನಾಥದಾಸರು	೮೨೬
ಶ್ರೀರಾಘವೇಂದ್ರಆಪಾದಮೌಲಿಪರ್ಯಂತಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೮೨೮
ಸರ್ವಕರ್ಮಸಮರ್ಪಣಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೮೨೯
ಶ್ರೀರಾಘವೇಂದ್ರರಕ್ಷಾಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೮೩೦
ಶ್ರೀರಾಘವೇಂದ್ರವೈಭವಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೮೩೨
ಶ್ರೀರಾಘವೇಂದ್ರಕರಾವಲಂಬನಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೮೩೫
ಶ್ರೀರಾಘವೇಂದ್ರಸ್ತೋತ್ರಮ್	ಶ್ರೀ ಚಿಕ್ಕೋಡಿ ಭಗವಂತರಾಯರು	೮೩೮
ಶ್ರೀಗುರುಗುಣಸ್ತವನಮ್	ಶ್ರೀವಾದೀಂದ್ರತೀರ್ಥರು	೮೩೯
ಅಷ್ಟಧಾಟೀಗುರುಕೃತಕೃತಿಸ್ತವನಮ್	ಶ್ರೀ ಪಿ. ರಾಘವೇಂದ್ರಾಚಾರ್ಯರು	೮೪೭
ಶ್ರೀರಾಘವೇಂದ್ರಸ್ತೋತ್ರಮ್	ಶ್ರೀಅಪ್ಪಣ್ಣಾಚಾರ್ಯರು	೮೫೨

ಶ್ರೀರಾಘವೇಂದ್ರಕವಚಮ್	ಶ್ರೀಅಪ್ಪಣ್ಣಾಚಾರ್ಯರು	೪೫೬
ಶ್ರೀರಾಘವೇಂದ್ರಾಷ್ಟಕಮ್	ಶ್ರೀಪೀಠಾಪುರವಾಸಿ ಶ್ರೀಮಧ್ವಾಚಾರ್ಯರು	೪೬೨
ಶ್ರೀರಾಘವೇಂದ್ರಾಷ್ಟಕಮ್	ಶ್ರೀವಾಯೇ ಅಣ್ಣಯ್ಯಾಚಾರ್ಯರು	೪೬೪
ಶ್ರೀರಾಘವೇಂದ್ರಪ್ರಾರ್ಥನಾಷ್ಟಕಮ್	ಶ್ರೀ ರಾಜಾ. ಎಸ್. ಗುರುರಾಜಾಚಾರ್ಯರು	೪೬೬
ಶ್ರೀರಾಘವೇಂದ್ರಪಾದುಕಾಷ್ಟಕಮ್	ಶ್ರೀ ಏರಿ ವಾಸುದೇವಾಚಾರ್ಯರು	೪೬೮
ಶ್ರೀರಾಘವೇಂದ್ರಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೪೬೯
ಶ್ರೀರಾಘವೇಂದ್ರಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೪೭೧
ಶ್ರೀಗುರುರಾಜಸ್ತೋತ್ರಮಾಲಾ	ಶ್ರೀ ಮೈಸೂರು ವಾಸುದೇವಾಚಾರ್ಯರು	೪೭೨
ಶ್ರೀರಾಘವೇಂದ್ರಸ್ತುತಿನವರತ್ನಮಾಲಾ	ಶ್ರೀ ಮಾನವಿ ಕೃಷ್ಣಮೂರ್ತ್ಯಾಚಾರ್ಯರು	೪೭೪
ಶ್ರೀರಾಘವೇಂದ್ರಪಂಚರತ್ನಮಾಲಾ	ಶ್ರೀಜಯರಾಮಾಚಾರ್ಯರು	೪೭೫
ಶ್ರೀರಾಘವೇಂದ್ರಕರಾವಲಂಬನಸ್ತೋತ್ರಮ್	ಶ್ರೀ ಆಚಾರ್ಯ ವೆಂಕೋಬಾಚಾರ್ಯರು	೪೭೬
ಶ್ರೀರಾಘವೇಂದ್ರಗುರುಸಾರ್ವಭೌಮಸ್ತವನಮ್	ಶ್ರೀ ಗಲಗಲಿ ರಾಮಾಚಾರ್ಯರು	೪೮೦
ಶ್ರೀಆಣುರಾಘವೇಂದ್ರಸ್ತೋತ್ರಮ್		೪೮೨
ಶ್ರೀಆಣುರಾಘವೇಂದ್ರಸ್ತೋತ್ರಮ್	ಪೂಜಾರ್ ರಾಘವೇಂದ್ರಾಚಾರ್ಯರು	೪೮೩
ಶ್ರೀರಾಘವೇಂದ್ರಸ್ತುತಿಮಾಲಿಕೆ	ಸಂಗ್ರಹ	೪೮೫
ಶ್ರೀಗುರುರಾಘವೇಂದ್ರಯತಿವರ್ಯಾಷ್ಟಕಮ್	ಶ್ರೀಬಾಲಸರಸ್ವತಿಗಳು	೪೮೬
ಶ್ರೀಗುರುರಾಘವೇಂದ್ರಗುಣರತ್ನಮಾಲಿಕಾ	ಶ್ರೀಬಾಲಸರಸ್ವತಿಗಳು	೪೮೮
ಶ್ರೀರಾಘವೇಂದ್ರವಿಜಯಃ	ಶ್ರೀನಾರಾಯಣಾಚಾರ್ಯರು	೪೯೧
ಶ್ರೀರಾಘವೇಂದ್ರಾಷ್ಟೋತ್ತರಶತನಾಮಾವಳಿಃ	ಶ್ರೀಅಪ್ಪಣ್ಣಾಚಾರ್ಯರು	೪೯೪
ಶ್ರೀರಾಘವೇಂದ್ರಾಷ್ಟಾಕ್ಷರಜಪಕ್ರಮಃ	ಶ್ರೀಅಪ್ಪಣ್ಣಾಚಾರ್ಯರು	೪೯೫
ಶ್ರೀಗುರುರಾಘವೇಂದ್ರಸ್ತೋತ್ರಮ್	ಶ್ರೀವ್ಯಾಸತತ್ತ್ವಜ್ಞತೀರ್ಥರು	೪೯೦
ಶ್ರೀರಾಘವೇಂದ್ರಸ್ತುತಿಃ	ಶ್ರೀಜಗನ್ನಾಥದಾಸರು	೪೯೧
ಶ್ರೀರಾಘವೇಂದ್ರಗುರುಸ್ತವಾಷ್ಟಕಮ್	ಶ್ರೀ ಕಲ್ಲಾಪುರ ಅಣ್ಣಯ್ಯಾಚಾರ್ಯರು	೪೯೨
ಶ್ರೀರಾಘವೇಂದ್ರಾಷ್ಟಕಮ್	ಶ್ರೀ ಮಹಾಭಾಷ್ಯ ನಾರಾಯಣಾಚಾರ್ಯರು	೪೯೪
ಶ್ರೀರಾಘವೇಂದ್ರಸ್ತವನಮ್	ಶ್ರೀ ಉಡುಪಿ ರಾಜಾಚಾರ್ಯರು	೪೯೬
ಶ್ರೀಮದ್ರಾಘವೇಂದ್ರಕೃತಿರತ್ನಮಾಲಿಕಾಸ್ತುತಿಃ	ಶ್ರೀ ಪಿ. ಪಾರ್ಥಸಾರಥಿ ಆಚಾರ್ಯರು	೪೯೨
ಶ್ರೀರಾಘವೇಂದ್ರಪ್ರಾತಃಸ್ತುತಿಃ	ರಾಜಾ. ಎಸ್. ಗುರುರಾಜಾಚಾರ್ಯರು	೪೯೪
ಶ್ರೀರಾಘವೇಂದ್ರಪ್ರಶಂಸಾ	ಗೂಢಕರ್ತೃಕ	೪೯೪
ಶ್ರೀರಾಘವೇಂದ್ರಗುರ್ವಷ್ಟಕಮ್	ಗೂಢಕರ್ತೃಕ	೪೯೫
ಶ್ರೀರಾಘವೇಂದ್ರಸುವೃತ್ತಮೌಕ್ತಿಕಮಾಲಾ	ಶ್ರೀಬಾಲಸರಸ್ವತೀಗಳು	೪೯೬
ಶ್ರೀರಾಘವೇಂದ್ರಸ್ತೋತ್ರಮ್	ಶ್ರೀಗಂಗಾವೇಡ್ಯ ಪ್ರಹ್ಲಾದಾಚಾರ್ಯರು	೪೯೩
ಶ್ರೀರಾಘವೇಂದ್ರಾಷ್ಟಕಮ್	ಶ್ರೀಗಂಗಾವೇಡ್ಯ ಪ್ರಹ್ಲಾದಾಚಾರ್ಯರು	೪೯೫
ಶ್ರೀರಾಘವೇಂದ್ರಪ್ರಶ್ನೋತ್ತರಮಾಲಿಕಾಸ್ತೋತ್ರಮ್	ಶ್ರೀಬಾಲಸರಸ್ವತೀಗಳು	೪೯೭
ಶ್ರೀರಾಘವೇಂದ್ರಕರುಣಾಲಹರೀ	ಶ್ರೀಪಂಡರಿನಾಥಾಚಾರ್ಯ ಗಲಗಲಿ	೪೯೯
ಶ್ರೀರಾಘವೇಂದ್ರ ಅಕ್ಷರಾಟೀ ಸ್ತೋತ್ರಮ್	ಶ್ರೀಪಂಡರಿನಾಥಾಚಾರ್ಯ ಗಲಗಲಿ	೫೯೫

ಶ್ರೀರಾಘವೇಂದ್ರಾಷ್ಟಕಮ್	ಶ್ರೀಪಂಡರಿನಾಥಾಚಾರ್ಯ ಗಲಗಲಿ	೫೯೯
ಶ್ರೀರಾಘವೇಂದ್ರಕರಾವಲಂಬನಸ್ತೋತ್ರಮ್	ಶ್ರೀಪಂಡರಿನಾಥಾಚಾರ್ಯ ಗಲಗಲಿ	೧೦೦೧
ಶ್ರೀರಾಘವೇಂದ್ರಸ್ತುತಿನಕ್ಷತ್ರಮಾಲಾ	ಶ್ರೀಪಂಡರಿನಾಥಾಚಾರ್ಯ ಗಲಗಲಿ	೧೦೦೬
ಶ್ರೀರಾಘವೇಂದ್ರ ಪಾಲಯ ಮಾಮ್	ಶ್ರೀಪ್ರಸನ್ನ ಶ್ರೀನಿವಾಸದಾಸರು	೧೦೧೧
ಗ್ರಂಥಪ್ರಸೂತನಾಮಸಂಗ್ರಹಮಾಲಿಕಾ	ಶ್ರೀ ಪೂಜಾರ್ ರಾಘವೇಂದ್ರಾಚಾರ್ಯರು	೧೦೧೨
ಶ್ರೀರಾಘವೇಂದ್ರಾಷ್ಟೋತ್ತರಶತನಾಮಸ್ತೋತ್ರಮ್	ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್	೧೦೧೫
ಶ್ರೀರಾಘವೇಂದ್ರಸ್ತುತಿಃ	ಶ್ರೀಲಕ್ಷ್ಮೀನಾರಾಯಣರು	೧೦೧೬
ಶ್ರೀರಾಘವೇಂದ್ರಮೃತ್ತಿಕಾಪ್ರಾಶನಸ್ತೋತ್ರ	ಗೂಢಕರ್ತೃಕ	೧೦೧೭
ಶ್ರೀರಾಘವೇಂದ್ರಮಹಿಮಾರತ್ನಮಂಜರೀ	ಶ್ರೀಗುರುರಾಜಸೂರಿಗಳು	೧೦೧೭
ಶ್ರೀರಾಘವೇಂದ್ರಕರಾವಲಂಬನಸ್ತೋತ್ರಮ್	ಶ್ರೀವಿಜಿಗಾ ರಾಮಾಚಾರ್ಯರು	೧೦೨೦
ಶ್ರೀರಾಘವೇಂದ್ರಶರಣಾಗತಿಮಾಲಿಕಾ	ಶ್ರೀಮಹಾಮನಿ ವೇಣುಗೋಪಾಲಾಚಾರ್ಯ	೧೦೨೨
ಭಯಪರಿಹಾರಸ್ತೋತ್ರಮ್	ಕವಿಕಮಲೇಶ	೧೦೨೪
ಪಾಪಪರಿಹಾರಸ್ತೋತ್ರಮ್	ಶ್ರೀಗುರುರಾಜಾಚಾರ್ಯರು	೧೦೨೫
ಶ್ರೀರಾಘವೇಂದ್ರನಕ್ಷತ್ರಮಾಲಿಕಾ	ಪಂಚಮುಖಿ ರಾ. ಆಚಾರ್ಯರು	೧೦೨೬
ಶ್ರೀರಾಘವೇಂದ್ರಗುರುಸಾರ್ವಭೌಮ		
ರಥೋತ್ಸವಮಹಾವೈಭವವರ್ಣನಮ್	ಶ್ರೀ ಚಿಕ್ಕೇರೂರು ಗೋವಿಂದಾಚಾರ್ಯರು	೧೦೩೦
ಶ್ರೀಗುರುರಾಘವೇಂದ್ರಸುಪ್ರಭಾತಮ್	ಶ್ರೀಬಾಲಗಣಪತಿಭಟ್ಟರು	೧೦೩೧
ರಜತರಥಸ್ಥ ಶ್ರೀರಾಘವೇಂದ್ರಸ್ತುತಿಃ	ಪಂಚಮುಖಿ ರಾ. ಆಚಾರ್ಯರು	೧೦೩೬
ಶ್ರೀರಾಘವೇಂದ್ರಕರಾವಲಂಬನಸ್ತೋತ್ರಮ್	ಶ್ರೀವಾಲ್ಮಿಕಿ ಗೋಪಾಲಕೃಷ್ಣಾಚಾರ್ಯರು	೧೦೩೭
ಶ್ರೀರಾಘವೇಂದ್ರಸುಪ್ರಭಾತಮ್	ಶ್ರೀರಾಘವೇಂದ್ರಾಚಾರ್ಯರು	೧೦೪೨
ದಶಾವತಾರಪರಿಬೋಧಕರಾಘವೇಂದ್ರಸ್ತುತಿಃ	ಶ್ರೀಮೂಲರಘುಪತಿಪ್ರಿಯರು	೧೦೪೪
ಶ್ರೀಗುರುರಾಘವೇಂದ್ರತಾರಾಹಾರಃ	ಶ್ರೀ ಧಡೇಸೂಗೂರು ವೆಂಕೋಬಾಚಾರ್ಯರು	೧೦೪೬
ಶ್ರೀರಾಘವೇಂದ್ರದೋಲೋತ್ಸವಸ್ತುತಿಃ	ಪಂಚಮುಖಿ ರಾ. ಆಚಾರ್ಯರು	೧೦೪೮
ಶ್ರೀರಾಘವೇಂದ್ರಾಷ್ಟಕಮ್	ಶ್ರೀ ಹರಿಯಾಡಿ ಮಹೇಶಭಟ್ಟರು	೧೦೪೮
ಅವತಾರತ್ರಯಸ್ತೋತ್ರಮ್	ಶ್ರೀ ಕುಂದಾಪುರ ರಾಘವೇಂದ್ರ ಪುರಾಣಿಕರು	೧೦೪೯
ಶ್ರೀರಾಘವೇಂದ್ರಸುಪ್ರಭಾತಮ್	ಶ್ರೀ ಉಡುಪಿ ಸುರೇಶ ಆಚಾರ್ಯರು	೧೦೫೦
ಶ್ರೀರಾಘವೇಂದ್ರಗುಣಸ್ತವಃ	ಶ್ರೀ ಉಡುಪಿ ರಾಮಕೃಷ್ಣ ಪೇಜತ್ತಾಯ	೧೦೫೨

ಯತಿಪರ್ವ

ಶ್ರೀಮದ್ಯೋಗೀಂದ್ರತಾರಾವಲೀ	ಶ್ರೀಸುಮತೀಂದ್ರತೀರ್ಥರು	೧೦೫೭
ಶ್ರೀಯೋಗೀಂದ್ರಸ್ತುತಿಃ		೧೦೬೨
ಶ್ರೀಸುಮತೀಂದ್ರಪಂಚರತ್ನಸ್ತೋತ್ರಮ್	ಶ್ರೀವಾದಿರಾಜಾಚಾರ್ಯರು	೧೦೬೨
ಶ್ರೀಸುಮತೀಂದ್ರಸುಪ್ರಭಾತಮ್		೧೦೬೫

ಶ್ರೀಸುಮತೀಂದ್ರಪ್ರಶಂಸಾ		೧೦೬೪
ಶ್ರೀಶೇಷಚಂದ್ರಿಕಾಚಾರ್ಯಸ್ತೋತ್ರಮ್	ಶ್ರೀವಿದ್ಯಾರತ್ನಾಕರತೀರ್ಥರು	೧೦೬೪
ಶ್ರೀಜಗನ್ನಾಥತೀರ್ಥರು		೧೦೬೮
ಶ್ರೀವಾದೀಂದ್ರಸುಪ್ರಭಾತಮ್		೧೦೬೮
ಶ್ರೀವಾದೀಂದ್ರಸ್ತುತಿಃ	ಉಜಿರೆ ರಾಮಚಂದ್ರಾಚಾರ್ಯರು	೧೦೬೯
ಶ್ರೀಮದ್ವಾದೀಂದ್ರನಾಮಾವಳಿಃ		೧೦೭೦
ಶ್ರೀವಾದೀಂದ್ರತೀರ್ಥಸ್ತೋತ್ರಮ್	ಶ್ರೀ ನುಜಿಗೂಡು ಕೃಷ್ಣಮೂರ್ತ್ಯಾಚಾರ್ಯರು	೧೦೭೩
ಶ್ರೀವರದೇಂದ್ರಗುರುಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೧೦೭೩
ಶ್ರೀವರದೇಂದ್ರಾಷ್ಟಕಮ್		೧೦೭೫
ಶ್ರೀವರದೇಂದ್ರಕರಾವಲಂಬನಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೧೦೭೭
ಶ್ರೀಧೀರೇಂದ್ರತೀರ್ಥಮಂಗಳಾಷ್ಟಕಮ್	ಶ್ರೀದೇವಾಚಾರ್ಯರು	೧೦೭೯
ಶ್ರೀಧೀರೇಂದ್ರಾಷ್ಟಕಮ್	ಶ್ರೀ ವಾಯಿ ಅಣ್ಣಯ್ಯಾಚಾರ್ಯ	೧೦೮೧
ಶ್ರೀಧೀರೇಂದ್ರಾಷ್ಟಕಮ್	ಶ್ರೀ ಸಾತಾರಿ ಆಚಾರ್ಯರು	೧೦೮೩
ಶ್ರೀಮದ್ಧೀರೇಂದ್ರಸ್ತುತಿಪಂಚಕಮ್	ಪಾರ್ಥಸಾರಥಿ ಆಚಾರ್ಯರು	೧೦೮೫
ಶ್ರೀಭುವನೇಂದ್ರತೀರ್ಥಸುಪ್ರಭಾತಮ್		೧೦೮೬
ಶ್ರೀಭುವನೇಂದ್ರತೀರ್ಥಸ್ತುತಿಃ		೧೦೮೬
ಶ್ರೀವ್ಯಾಸತತ್ತ್ವಜ್ಞಸ್ತುತಿಮಾಲಿಕಾ	ಸಂಗ್ರಹ	೧೦೮೬
ಶ್ರೀಮದ್ವಿಷ್ಣುತೀರ್ಥವೃಂದಾವನಸ್ತೋತ್ರಮ್		೧೦೮೬
ಶ್ರೀಮದ್ವಿಷ್ಣುತೀರ್ಥಗುರುಸ್ತೋತ್ರಮ್	ಶ್ರೀಕೃಷ್ಣಾಚಾರ್ಯ	೧೦೮೮
ಶ್ರೀಸುಬೋಧೇಂದ್ರಸ್ತುತಿಃ	ಶ್ರೀಸುಜನೇಂದ್ರತೀರ್ಥರು	೧೦೯೬
ಶ್ರೀಸುಧರ್ಮೇಂದ್ರಮಹೋದಯಃ	ಶ್ರೀಕೃಷ್ಣಾವಧೂತರು	೧೦೯೭
ಶ್ರೀಸುಗುಣೇಂದ್ರತೀರ್ಥಪಂಚರತ್ನಮಾಲಾಸ್ತೋತ್ರಮ್	ಶ್ರೀಸುಪ್ರಜ್ಞೇಂದ್ರತೀರ್ಥರು	೧೧೦೦
ಶ್ರೀಸುಗುಣೇಂದ್ರಮಹಿಮಾರತ್ನಮಾಲಾ	ರಾಜಾ. ಎಸ್. ಗುರುರಾಜಾಚಾರ್ಯರು	೧೧೦೨
ಶ್ರೀಸುಪ್ರಜ್ಞೇಂದ್ರತೀರ್ಥಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೧೧೦೪
ಶ್ರೀಸುಪ್ರಜ್ಞೇಂದ್ರತೀರ್ಥಸ್ತುತಿ	ಸಂಗ್ರಹ	೧೧೦೫
ಶ್ರೀಸುಕೃತೀಂದ್ರತೀರ್ಥಸ್ತೋತ್ರಮ್		೧೧೦೬
ಯತೀಂದುಶತಕಮ್	ಶ್ರೀಬಾಲಸರಸ್ವತೀ	೧೧೦೭
ಶ್ರೀಸುಶೀಲೇಂದ್ರಸುಪ್ರಭಾತಮ್	ಶ್ರೀ ರಾಜಾ. ಎಸ್. ಗುರುರಾಜಾಚಾರ್ಯರು	೧೧೨೩
ಶ್ರೀಸುಶೀಲೇಂದ್ರಸುಪ್ರಭಾತಮ್		೧೧೨೫
ಶ್ರೀಸುಶೀಲೇಂದ್ರಮಂಗಳರತ್ನಮಾಲಾ	ಶ್ರೀ ರಾಜಾ. ಎಸ್. ಗುರುರಾಜಾಚಾರ್ಯರು	೧೧೨೫
ಶ್ರೀಸುಶೀಲೇಂದ್ರಸ್ತೋತ್ರಮ್	ಶ್ರೀ ಆರ್ಚಕ ವೇದವ್ಯಾಸಾಚಾರ್ಯರು	೧೧೨೭
ಶ್ರೀಮತ್ಸುಶೀಲಗುರುವುಂಗವಮಾಶ್ರಯೇಽಹಂ	ಶ್ರೀ ರಾಜಾ. ಎಸ್. ಗುರುರಾಜಾಚಾರ್ಯರು	೧೧೩೦
ಶ್ರೀಮತ್ಸುಶೀಲೇಂದ್ರಸ್ತುತಿಮಾಲಾ	ಶ್ರೀ ಶ್ರೀನಿವಾಸಭಟ್ಟರು	೧೧೩೨

ಶ್ರೀಸುಶೀಲೇಂದ್ರಸ್ತುತಿಮಲ್ಲಿಕಾ	ಸಂಗ್ರಹ	೧೧೩೪
ಶ್ರೀಮತ್ಸುಶೀಲೇಂದ್ರಯತಿವರ್ಯನವರತ್ನಮಾಲಾ	ಶ್ರೀ ಧಡೇಸೂಗೂರು ಶ್ರೀಮೆಂಕೋಬಾಚಾರ್ಯರು	೧೧೩೫
ಶ್ರೀಸುವ್ರತೀಂದ್ರಸ್ತುತಿರತ್ನಮಾಲಾ	ಕವಿ ರಂಗನಾಥಾಚಾರ್ಯರು	೧೧೩೭
ಶ್ರೀಸುವ್ರತೀಂದ್ರವಿಜಯ	ಶ್ರೀ ಉಡುಪಿ ರಂಗನಾಥಾಚಾರ್ಯರು	೧೧೪೦
ಶ್ರೀಸುಯಮೀಂದ್ರಸುಪ್ರಭಾತಮ್	ಶ್ರೀ ರಾಜಾ. ಎಸ್. ಗುರುರಾಜಾಚಾರ್ಯರು	೧೨೦೬
ಶ್ರೀಸುಯಮೀಂದ್ರಮಂಗಳಾಷ್ಟಕಮ್	ಶ್ರೀ ರಿತ್ತಿ ವೆಂಕಣ್ಣಾಚಾರ್ಯರು	೧೨೦೭
ಶ್ರೀಸುಯಮೀಂದ್ರಯತೀಂದ್ರವಂದನರತ್ನಮಾಲಾ	ಶ್ರೀ ಗಲಗಲಿ ಪುಂಢರೀನಾಥಾಚಾರ್ಯರು	೧೨೦೯
ಶ್ರೀಸುಯಮೀಂದ್ರತೀರ್ಥಪಂಚಪ್ರಸೂನಮಾಲಾ	ಶ್ರೀ ರಿತ್ತಿ ವೆಂಕಣ್ಣಾಚಾರ್ಯರು	೧೨೧೧
ಶ್ರೀಸುಯಮೀಂದ್ರಭಕ್ತಿಕುಮಸುಮಾಂಚನಮ್	ಶ್ರೀಲಕ್ಷ್ಮೀನಾರಾಯಣ ಉಪಾಧ್ಯಾಯರು	೧೨೧೩
ಶ್ರೀಸುಯಮೀಂದ್ರಗುರುಸ್ತುತಿರತ್ನಮಾಲಾ	ಶ್ರೀಕೃಷ್ಣಮೂರ್ತ್ಯಾಚಾರ್ಯರು	೧೨೧೫
ಶ್ರೀಸುಯಮೀಂದ್ರಗುರುಸ್ತುತಿರತ್ನಮಾಲಾ	ಶ್ರೀ ಆರ್.ಎಸ್. ಪಂಚಮುಖಿ	೧೨೧೭
ಶ್ರೀಸುಯಮೀಂದ್ರಗುರುಸ್ತೋತ್ರಪಂಚಕಮ್	ಶ್ರೀದಕ್ಷಿಣಾಮೂರ್ತಿ ನಾರಾಯಣಶರ್ಮ	೧೨೧೯
ಶ್ರೀಸುಯಮೀಂದ್ರಗುರುಸ್ತುತಿಃ	ಶ್ರೀ ಮಾನವಿ ಕೃಷ್ಣಮೂರ್ತ್ಯಾಚಾರ್ಯರು	೧೨೨೦
ಶ್ರೀಸುಯಮೀಂದ್ರತೀರ್ಥಪಂಚರತ್ನಮಾಲಾ	ಮತ್ತಕದಾಳಿ ಗೋಪಾಲಾಚಾರ್ಯರು	೧೨೨೧
ಕವಿತಾಪುಷ್ಪೋಪಹಾರಃ	ಶ್ರೀ ಸುಬ್ಬರಾಯ ಉಪಾಧ್ಯಾಯರು	೧೨೨೨
ಶುಭಾಶಂಸನಮ್	ಶ್ರೀ ಎಸ್. ಭೀಮಭಟ್ಟರು	೧೨೨೩
ಶುಭಾಶಂಸನಮ್	ಧಡೇಸೂಗೂರು ವೆಂಕೋಬಾಚಾರ್ಯರು	೧೨೨೪
ಶ್ರೀಸುಯಮೀಂದ್ರಚಂದ್ರಸ್ತೋತ್ರಮ್	ರಾಜಾ ಎಸ್. ಗುರುರಾಜಾಚಾರ್ಯರು	೧೨೨೫
ಶ್ರೀಸುಯಮೀಂದ್ರತೀರ್ಥನವರತ್ನಮಾಲಿಕಾ	ಶ್ರೀಲಕ್ಷ್ಮೀನಾರಾಯಣ ಉಪಾಧ್ಯಾಯರು	೧೨೨೬
ಶ್ರೀಮತ್ಸುಜಯೀಂದ್ರಸುಪ್ರಭಾತಮ್	ರಾಜಾ. ಎಸ್. ಗುರುರಾಜಾಚಾರ್ಯರು	೧೨೨೮
ಶ್ರೀಸುಜಯೀಂದ್ರತೀರ್ಥಮಂಗಳಾಷ್ಟಕಮ್	ರಾಜಾ. ಎಸ್. ಗುರುರಾಜಾಚಾರ್ಯರು	೧೨೩೦
ಶ್ರೀಸುಜಯೀಂದ್ರಪಂಚಪದ್ಯರತ್ನಮಾಲಾ	ಶ್ರೀ ಫೂಳಿ ಕೃಷ್ಣಾಚಾರ್ಯರು	೧೨೩೨
ಶ್ರೀಸುಶಮೀಂದ್ರತೀರ್ಥಭವಂದನಮ್	ಶ್ರೀಸುವಿದ್ಯೇಂದ್ರತೀರ್ಥರು	೧೨೩೩
ಶ್ರೀಸುಶಮೀಂದ್ರಪ್ರಭಾತಮ್		೧೨೩೯
ಶ್ರೀಸುಶಮೀಂದ್ರತೀರ್ಥಪೂಜಾಕ್ರಮಮ್		೧೨೩೯
ಶ್ರೀಸುಶಮೀಂದ್ರತೀರ್ಥಸದ್ಭಕ್ತಿಮಾಲಿಕಾ	ರಾಜಾ. ಎಸ್. ಗುರುರಾಜಾಚಾರ್ಯರು	೧೨೪೦
ಶ್ರೀಸುಶಮೀಂದ್ರತೀರ್ಥಸದ್ಗುಣಕುಸುಮಮಾಲಿಕಾ	ರಾಜಾ. ಎಸ್. ಗುರುರಾಜಾಚಾರ್ಯರು	೧೨೪೩
ಶ್ರೀಮತ್ಸುಶಮೀಂದ್ರತೀರ್ಥಪ್ರಣತಿಪ್ರಶಸ್ತಿಃ		೧೨೪೫
ಶ್ರೀಸುಶಮೀಂದ್ರತೀರ್ಥಸ್ತುತಿಃ	ಸಂಗ್ರಹ	೧೨೪೬
ಶ್ರೀಸುಶಮೀಂದ್ರತೀರ್ಥಗುರುಸ್ತವನಮ್		೧೨೪೭
ಶ್ರೀಸುಶಮೀಂದ್ರಸದ್ಗುಣಜ್ವಾಲಮಾಲಿಕಾ	ಗುರುರಾಜಾಖ್ಯ ಕವಿಗಳು	೧೨೫೦
ಗುರುವಂದನಪತ್ರಿಕಾ	ಶ್ರೀ ಎಸ್. ವಾದಿರಾಜಾಚಾರ್ಯರು	೧೨೫೧
ಗುರುಪರಂಪರಾಸ್ತೋತ್ರಮ್		೧೨೫೩

ಗುರುಸ್ತೋತ್ರದಂಡಕಮ್	ಶ್ರೀವಾಸುಧೇಂದ್ರತೀರ್ಥರು	೧೨೫೬
ಶ್ರೀಹರಿಗುರುಸ್ತೋತ್ರಮ್	ಶ್ರೀ ಕೃಷ್ಣಮೂರ್ತಿಗಳು	೧೨೫೭
ಶ್ರೀಭೂತರಾಜಸ್ತೋತ್ರಮ್		೧೨೬೧
ಸಂಕ್ಷಿಪ್ತಭೂತರಾಜಸ್ತೋತ್ರಮ್		೧೨೬೨

ಹರಿದಾಸಪರ್ವ

ಶ್ರೀಪಾದರಾಜಸ್ತೋತ್ರಮ್		೧೨೬೫
ಶ್ರೀವ್ಯಾಸರಾಜಸ್ತೋತ್ರಮ್		೧೨೬೫
ಶ್ರೀವಾದಿರಾಜಸ್ತೋತ್ರಮ್		೧೨೬೫
ಶ್ರೀಪುರಂದರದಾಸಸ್ತೋತ್ರಮ್		೧೨೬೬
ಶ್ರೀಕನಕದಾಸಸ್ತೋತ್ರಮ್		೧೨೬೬
ಶ್ರೀಪ್ರಸನ್ನವೇಂಕಟದಾಸಸ್ತೋತ್ರಮ್		೧೨೬೬
ಶ್ರೀವಿಜಯದಾಸಸ್ತೋತ್ರಮ್		೧೨೬೬
ಶ್ರೀಗೋಪಾಲದಾಸಸ್ತೋತ್ರಮ್		೧೨೬೭
ಶ್ರೀಮೋಹನದಾಸಸ್ತೋತ್ರಮ್		೧೨೬೭
ಶ್ರೀಜಗನ್ನಾಥದಾಸರು		೧೨೬೭
ಶ್ರೀಮಜ್ಜಗನ್ನಾಥದಾಸಾರ್ಯಸ್ತೋತ್ರಮ್	ಶ್ರೀಗುರುಜಗನ್ನಾಥದಾಸರು	೧೨೬೭
ಶ್ರೀಮಜಗನ್ನಾಥದಾಸಾರ್ಯಕರಾವಲಂಬನಸ್ತೋತ್ರಮ್		೧೨೭೦
ಶ್ರೀಕೃಷ್ಣಾರ್ಯಸ್ತೋತ್ರಮ್		೧೨೭೨
ಶ್ರೀಮದಿಭರಾಮಪುರ ಕೃಷ್ಣಾರ್ಯಾಷ್ಟಕಮ್		೧೨೭೩
ಶ್ರೀವೇಣುಗೋಪಾಲದಾಸಸ್ತೋತ್ರಮ್		೧೨೭೪
ಶ್ರೀವ್ಯಾಸವಿಠಲದಾಸಸ್ತೋತ್ರಮ್		೧೨೭೪
ಶ್ರೀಗುರುವಿಜಯದಾಸಸ್ತೋತ್ರಮ್		೧೨೭೪
ಶ್ರೀಗುರುವಿಜಯದಾಸಾರ್ಯಾಷ್ಟಕಮ್	ಶ್ರೀರಘೂದಾಂತತೀರ್ಥರು	೧೨೭೫
ಶ್ರೀಪ್ರಾಣೇಶದಾಸಸ್ತೋತ್ರಮ್		೧೨೭೬
ಶ್ರೀದನಿಠಲದಾಸಸ್ತೋತ್ರಮ್		೧೨೭೬
ಶ್ರೀಗುರುಜಗನ್ನಾಥದಾಸಸ್ತೋತ್ರಮ್		೧೨೭೬
ಶ್ರೀಮುದ್ದುಮೋಹನದಾಸಸ್ತೋತ್ರಮ್		೧೨೭೭
ಶ್ರೀತಂದೆಮುದ್ದುಮೋಹನದಾಸಸ್ತೋತ್ರಮ್		೧೨೭೭
ಶ್ರೀಗುರುಗೋವಿಂದದಾಸಸ್ತೋತ್ರಮ್		೧೨೭೭
ಸರ್ವಸಮರ್ಪಣಗದ್ಯಮ್		೧೨೭೭
ನಿತ್ಯೋಪಯೋಗಿ ದಾಸರ ಸ್ತುತಿ : ಕೇಶವನಾಮ		೧೨೭೯
ಮಧ್ವನಾಮ		೧೨೮೧
ಶ್ರೀವಿಜಯಕವಚ		೧೨೮೫
ಅಕಾರಾದಿ ಅನುಕ್ರಮಣಿಕಾ		೧೨೮೯

ದೇವತಾ ಪರ್ವ

ಪ್ರಾತಃಸಂಕಲ್ಪಗದ್ಯಮ್

◆ ◆

ಶ್ರೀರಾಯರು ದ್ವೈತಸಾರಸ್ವತಲೋಕಕ್ಕೆ ನೀಡಿದ ಕೊಡುಗೆ ಅಪಾರವಾದುದು. ಪೂರ್ವಾಚಾರ್ಯರ ಗ್ರಂಥಗಳ ಮೇಲೆ ಬೆಳಕು ಚೆಲ್ಲುವ ವ್ಯಾಖ್ಯಾನಗ್ರಂಥಗಳೂ, ಆರೂಢವಾದ ಸಂಕೀರ್ಣ ವಿಷಯಗಳನ್ನೊಳಗೊಂಡ ಗ್ರಂಥಗಳ ಸಂಗ್ರಹರೂಪ ಕೃತಿಗಳು, ಸ್ವತಂತ್ರ ಕೃತಿಗಳು ಎಂಬುದಾಗಿ ಮೂರು ರೀತಿಯ ರಚನೆಯನ್ನು ಕಾಣಬಹುದಾಗಿದೆ. ಇಂತಹ ಸಂಗ್ರಹರೂಪ ಕೃತಿಗಳಲ್ಲಿ ಪ್ರಾತಃಸಂಕಲ್ಪಗದ್ಯವು ಅಚ್ಚರಿಯನ್ನು ಮೂಡಿಸುವ, ಕಿರಿದಾದರೂ ಸಕಲಶಾಸ್ತ್ರ ಸಾರವನ್ನು ಸಂಗ್ರಹಿಸಿದ ಅಪರೂಪದ ಕೃತಿ. ಈ ಕೃತಿಯಲ್ಲಿ ಶ್ರೀರಾಯರು ಸಾಧಕನಿಗೆ ಕರ್ಮಯೋಗದ ರಹಸ್ಯ ಸಂದೇಶವನ್ನು ನೀಡುವ ಮಾರ್ಗಸೂಚಿಯನ್ನು ನೀಡಿದುದಲ್ಲದೆ ಹರಿಸರ್ವೋತ್ತಮತ್ವ - ವಾಯುಜೀವೋತ್ತಮತ್ವವನ್ನು ಚೆನ್ನಾಗಿ ಈ ಕೃತಿಯಲ್ಲಿ ಪ್ರತಿಬಿಂಬಿಸಿದ್ದಾರೆ. ಆಯಾ ಕರ್ಮವನ್ನು ಆರಂಭಿಸುವ ಸಂಕಲ್ಪದಲ್ಲಿ ಸಕಲಶಾಸ್ತ್ರಸಾರವನ್ನು ಅನುಸಂಧಾನ ಮಾಡಿಕೊಳ್ಳಲು ಸಾಧಕನಿಗೆ ಮಾಡಿದ ಉಪಕಾರವು ಅವರ ಸಜ್ಜನ ಕಾರುಣ್ಯದ ದ್ಯೋತಕವಾಗಿದೆ.

ಸಕಲ ಸಜ್ಜನ ಸಮುದಾಯವು ತನ್ನ ಶರೀರದಲ್ಲಿ ನಿಯಾಮಕನಾದ, ಸರ್ವೋತ್ತಮನಾದ ಹರಿಯಲ್ಲಿ ಮನವನ್ನು ನೆಲೆಗೊಳಿಸಿ ಅಹಂಕಾರ - ಮಮಕಾರಗಳನ್ನು ತೊರೆದು ಮತ್ತು ನಿಷಿದ್ಧ ಕಾಮನೆಗಳನ್ನು ತೊರೆದು ಸಕಲ ಕರ್ಮಗಳನ್ನು ಶ್ರೀಹರಿಪೂಜಾರೂಪವಾಗಿ ಮಾಡಿ, ಅರ್ಪಿಸಿ, ಭಗವಂತನ ಶುದ್ಧಜ್ಞಾನ ಪಡೆದು ಪರಮಾತ್ಮನನ್ನು ಪಡೆಯಬೇಕೆಂಬ ಸಂದೇಶ ಇಲ್ಲಿದೆ.

ಯಾವುದೇ ಕರ್ಮವನ್ನಾಚರಿಸುವ ಮೊದಲು ಅದರಲ್ಲಿಯೂ ವೇದೋಕ್ತವಾದ ಕರ್ಮವನ್ನು ಮಾಡುವಾಗ, ನಿತ್ಯನೈಮಿತ್ತಿಕಕಾಮ್ಯಗಳನ್ನಾಚರಿಸುವ ಮೊದಲು ಸಂಕಲ್ಪವನ್ನು ಮಾಡಬೇಕು. ಕೆಲವು ಬಾರಿ ಅನಿರೀಕ್ಷಿತವಾಗಿ ನಮ್ಮಿಂದ ಸತ್ಕರ್ಮಗಳು ನಡೆದಿರುತ್ತವೆ. ಪ್ರಾತರಾರಭ್ಯ ರಾತ್ರಿ ಪರ್ಯಂತ ಮಾಡುವ ಸಕಲ ಸತ್ಕರ್ಮಗಳನ್ನು ಎದ್ದೊಡನೆಯೇ ಶ್ರೀಹರಿಪೂಜಾರೂಪವಾಗಿ ಮಾಡುತ್ತೇನೆಂಬ ಅನುಸಂಧಾನ ಮಾಡಲು ಶ್ರೀರಾಯರು ನಮಗೆ ರಚಿಸಿಕೊಟ್ಟ ಸಕಲಶಾಸ್ತ್ರಸಾರಭೂತವಾದ ಕೃತಿ ಪ್ರಾತಃಸಂಕಲ್ಪಗದ್ಯ.

ಜೀವರಿಗೆ ಪುಣ್ಯಪಾಪಾತ್ಮಕವಾದ ಕರ್ಮವು ಅನಾದಿಯಾಗಿದ್ದು, ಎಲ್ಲ ಕರ್ಮಗಳನ್ನು ನಡೆಸುವಾಗಲೂ ಶ್ರೀಪತಿಯು ಸ್ವತಂತ್ರನಾಗಿದ್ದಾನೆ, ಸರ್ವೋತ್ತಮನಾಗಿದ್ದಾನೆ, ನಿರ್ದೋಷ ಅಶೇಷ ಸದ್ಗುಣಪೂರ್ಣನಾಗಿದ್ದಾನೆ, ಸರ್ವಾವಸ್ಥಾಪ್ರೇರಕನಾಗಿದ್ದಾನೆ, ಸರ್ವಾಧಾರ, ಸರ್ವದೇಶಕಾಲವ್ಯಾಪ್ತ, ಸರ್ವನಿಯಾಮಕ, ಸೃಷ್ಟ್ಯಾದ್ಯಷ್ಟಕರ್ತನಾಗಿದ್ದಾನೆ ಎಂಬ ಅರಿವು, ಎಚ್ಚರಿಕೆಗಳೊಂದಿಗೆ, ಅನಾದಿಯೋಗ್ಯತೆ, ಪ್ರಾರಬ್ಧಕರ್ಮಾನುಸಾರವಾಗಿ ನಮ್ಮ ದೇಹದಲ್ಲಿರುವ ತತ್ತ್ವಾಭಿಮಾನಿದೇವತೆಗಳು, ಅವರಲ್ಲೂ ನಿಯಾಮಕರಾಗಿರವ, ಸಕಲವೇದಪ್ರತಿಪಾದ್ಯರೂ, ಅನಂತಗುಣೋಪಾಸನೆಯನ್ನು ಮಾಡುವವರೂ, ಸರ್ವಜ್ಞ ಶಿಖಾಮಣಿಗಳೂ, ಭಕ್ತವತ್ಸಲರೂ, ಭಕ್ತಪರಾಧಸಹಿಷ್ಣುಗಳೂ, ತ್ರಿವಿಧ ಜೀವರ ಸಾಧನಗತಿಪ್ರದಾಯಕರೂ, ಹರಿಯಾಜ್ಞಾದ್ಧಾರಕರು, ಪಾಪಾವಿದ್ದರೂ, ಸತ್ಕರ್ಮ-ಕಾರಯಿತೃಗಳೂ, ಜೀವೋತ್ತಮರೂ ಆದ ಶ್ರೀಮುಖ್ಯಪ್ರಾಣದೇವರು ನಮ್ಮೊಳಗೆ ನಿಂತು, ಎಲ್ಲ ಶುಭಾಶುಭಕಾರ್ಯಗಳನ್ನು ಮಾಡಿಸಿ, ಭಗವಂತನಿಗೆ ಆ ಕರ್ಮವನ್ನು ಅರ್ಪಿಸುವರು. ಅಂತಹ ವಾಯುದೇವರ ಹೃದ್ಗುಹಾವಾಸಿಯಾದ ನಮ್ಮ ಬಿಂಬಮೂರ್ತಿಯ ಪೂಜಾ-ರೂಪವಾಗಿ ಎಲ್ಲ ಕರ್ಮಗಳನ್ನು ಅರ್ಪಿಸಬೇಕು. ಈ ಅನುಸಂಧಾನಪೂರ್ವಕ ಸಂಕಲ್ಪವನ್ನು ಮಾಡಬೇಕೆಂಬ ವಿಚಾರವನ್ನು ಈ ಪ್ರಾತಃಸಂಕಲ್ಪಗದ್ಯದಲ್ಲಿ ಶ್ರೀರಾಯರು ಸಜ್ಜನರ ಅನುಗ್ರಹಕ್ಕಾಗಿ ಸ್ಪಷ್ಟಪಡಿಸಿರುವರು.

ನಾವು ಸತ್ಕರ್ಮವನ್ನು ಮಾಡುವುದರ ಜೊತೆಗೆ ನಮ್ಮವರಿಗೂ ಆ ಕರ್ಮದ ಮರ್ಮವನ್ನು ಅರುಹಿ, ಅವರಿಂದಲೂ ಈ ಅನುಸಂಧಾನದೊಂದಿಗೆ ಸತ್ಕರ್ಮಾಚರಣೆಯನ್ನು ಮಾಡಿಸಬೇಕೆಂಬ ವಿಚಾರವನ್ನು ಇಲ್ಲಿ ಅರುಹಿದ್ದಾರೆ.

◆ ◆

ಓಂ... ಲೌಕಿಕವೈದಿಕಭೇದಭಿನ್ನವರ್ಣಾತ್ಮಕಧ್ವನ್ಯಾತ್ಮಕಾಶೇಷಶಬ್ದಾರ್ಥ ಋಗಾದಿಸರ್ವವೇದಾರ್ಥವಿಷ್ಣುಮಂತ್ರಾರ್ಥಪುರುಷಸೂಕ್ತಾರ್ಥಗಾಯತ್ರ್ಯರ್ಥ ಶ್ರೀಮನ್ನಾರಾಯಣಾಷ್ಟಾಕ್ಷರಮಂತ್ರಾರ್ಥವಾಸುದೇವದ್ವಾದಶಾಕ್ಷರಮಂತ್ರಾಂತರ್ಗತಾಂತ್ಯ-ಚತುರಕ್ಷರಾರ್ಥವ್ಯಾಹೃತ್ಯರ್ಥವಾತ್ಮಕಾವಂತ್ಯಾರ್ಥಪ್ರಣವೋಪಾಸಕಾನಾಂ, ಪಾಪಾವಿದ್ದೈತ್ಯಪೂಗಾವಿದ್ಧಶ್ರೀವಿಷ್ಣುಭಕ್ತಾದ್ಯನಂತಗುಣಪರಿಪೂರ್ಣ ರಮಾವ್ಯತಿರಿಕ್ತ-ಪೂರ್ವಪ್ರಸಿದ್ಧವ್ಯತಿರಿಕ್ತಾನಂತವೇದಪ್ರತಿಪಾದ್ಯಮುಖ್ಯತಮಾನಂತದೇವನಿಯಾಮಕಾನಂತ ರೂಪಭಗವನ್ಮಾಯ್ಯಸಾಧಕಪರಮದಯಾಲುಕ್ಷಮಾಸಮುದ್ರಭಕ್ತವತ್ಸಲ ಭಕ್ತಾಪರಾಧಸಹಿಷ್ಣು ಶ್ರೀಮುಖ್ಯಪ್ರಾಣಾವತಾರಭೂತಾನಾಂ, ಅಜ್ಞಜ್ಞಾನಾರ್ಥಿಜ್ಞಾನಯೋಗ್ಯ ಭಗವತ್ಪಾಪಾತ್ರ-ಭೂತಸಲ್ಲೋಕಕಪಾಲು ಬ್ರಹ್ಮರುದ್ರಾದ್ಯರ್ಚಿತಭಗವದಾಜ್ಞಾ ಶಿರಸಿ ಪರಮಾದರೇಣಾ-ನರ್ಘ್ಯಶಿರೋರತ್ನವನ್ನಿಧಾಯ ತಥಾಽಶೇಷ ದೇವತಾಪ್ರಾರ್ಥನಾ ಹಾರವದ್ಧೃದಿ ನಿಧಾಯ, ಸರ್ವಸ್ವಕೀಯಸಜ್ಜನಾನುಗ್ರಹೇಚ್ಛಯಾ ಕರ್ಮಭುವ್ಯವತೀರ್ಣಾನಾಂ, ತಥಾಽವತೀರ್ಯ

ಸಕಲಸಚ್ಛಾಸ್ತ್ರಕರ್ತೃಣಾಂ, ಸಕಲದುರ್ಮತಭಂಜಕಾನಾಂ, ಅನಾದಿತಃ ಸತ್ಸಂಪ್ರದಾಯ-ಪರಂಪರಾಪ್ರಾಪ್ತ ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪಕಾನಾಂ, ಅತ ಏವ ಭಗವತ್ಪರಮಾನುಗ್ರಹ ಪಾತ್ರಭೂತಾನಾಂ, ಸರ್ವದಾ ಭಗವದಾಜ್ಞಯಾ ಭಗವತ್ಸನ್ನಿಧೌ ಪೂಜ್ಯಾನಾಂ, ತಥಾ ಭಗವತಾ ದತ್ತವರಾಣಾಂ, ದ್ವಾತ್ರಿಂಶಲ್ಲಕ್ಷಣೋಪೇತಾನಾಂ, ತಥಾ ಸಮಗ್ರಗುರುಲಕ್ಷಣೋ-ಪೇತಾನಾಂ, ಅಸಂಶಯಾನಾಂ, ಪ್ರಸಾದಮಾತ್ರೇಣ ಸ್ವಭಕ್ತಾಶೇಷಸಂಶಯಭೇತ್ತೃಣಾಂ, ಪ್ರಣವಾದ್ಯಶೇಷ ವೈಷ್ಣವಮಂತ್ರೋದ್ಧಾರಕಾಣಾಂ, ಸರ್ವದಾ ಸರ್ವವೈಷ್ಣವ ಮಂತ್ರಜಾಪಕಾನಾಂ, ಸಂಸಿದ್ಧಸಪ್ತಕೋಟಿಮಹಾಮಂತ್ರಾಣಾಂ, ತತ್ರ ತತ್ರ ಪೃಥಕ್ ಪೃಥಕ್ ಭಗವತೋಽನಂತರೂಪೇಷು ಪೃಥಕ್‌ಪೃಥಗ್ವೇದೋಕ್ತತದನುಕ್ಯೂಹರತೋಕ್ತತದನುಕ್ತ-ಸಂಪ್ರದಾಯಾಗತ ಸ್ವೇತರ ಸ್ವಾಭಿನ್ನತಯಾಽಖಿಲಶೇಷಶಕ್ತಿವಿಶೇಷಾಖ್ಯಾಂ, ಪೃಥಗ್ವ್ಯವಹಾರ ವಿಷಯಸರ್ವಸಾಮರ್ಥ್ಯೋಪೇತನಿರವಧಿಕಾನಂತಾನವದ್ಯಕಲ್ಯಾಣಗುಣಗಣಪರಿಪೂರ್ಣಾ-ನಂತಗುಣೋಪಸಂಹರ್ತೃಣಾಂ ತಥಾ ವೇದೋಕ್ತಸರ್ವಕ್ರಿಯೋಪಸಂಹರ್ತೃಣಾಂ, ಏವಂ ಅನಂತರೂಪಾವಯವಗುಣ ಕ್ರಿಯಾಜಾತ್ಯವಸ್ಯಾವಿಶಿಷ್ಟ ಭಗವದುಪಾಸಕಾನಾಂ, ಪರಮದಯಾಲೂನಾಂ, ಕ್ಷಮಾಸಮುದ್ರಾಣಾಂ, ಭಕ್ತವತ್ಸಲಾನಾಂ, ಭಕ್ತಪರಾಧಸಹಿಷ್ಣೂನಾಂ, ಸ್ವಭಕ್ತಾನ್ ದುರ್ಮಾರ್ಗಾದುದ್ಧೃತ್ಯ ಸನ್ಮಾರ್ಗಸ್ಥಾಪಕಾನಾಂ, ಸ್ವಭಕ್ತಂ ಮಾಮುದ್ಧಿತ್ಯ ಭಗವತಃ ಪುರಃ ಪರಮದಯಾಲೋ ಕ್ಷಮಾಸಮುದ್ರ ಭಕ್ತವತ್ಸಲ ಭಕ್ತಾಪರಾಧಸಹಿಷ್ಣೋ ತ್ವದಧೀನಂ ದೀನಂ ದೂನಂ ಅನಾಥಂ ಶರಣಾಗತಮೇನಮುದ್ಧರೇತಿ ವಿಜ್ಞಾಪನ-ಕರ್ತೃಣಾಂ, ಸರ್ವಜ್ಞಶಿರೋಮಣೀನಾಂ, ಅಶೇಷಗುರ್ವಂತರ್ಯಾಮಿಣಾಂ, ಸದಾ ಭಗವತ್ಪರಾಣಾಂ, ಭಗವತೋಽನ್ಯತ್ರ ಸರ್ವವಸ್ತುಷು ಮನಃಸಂಗರಹಿತಾನಾಂ, ಸರ್ವತ್ರ ಸರ್ವದಾ ಸರ್ವಾಕಾರಸರ್ವಾಧಾರಸರ್ವಾಶ್ರಯಸರ್ವೋತ್ಪಾದಕಸರ್ವಪಾಲಕಸರ್ವಸಂಹಾರಕ ಸರ್ವನಿಯಾಮಕಸರ್ವಪ್ರೇರಕಸರ್ವಪ್ರವರ್ತಕಸರ್ವನಿವರ್ತಕಯಥಾಯೋಗ್ಯಂ ಸರ್ವಜ್ಞಾನಜ್ಞಾನಬಂಧಮೋಕ್ಷಪ್ರದಸರ್ವಸತ್ತಾಪ್ರದಸರ್ವಶಬ್ದವಾಚ್ಯಸರ್ವಶಬ್ದಪ್ರವೃತ್ತಿನಿಮಿತ್ತ ಸರ್ವಗುಣಾತಿಪರಿಪೂರ್ಣತಮಸರ್ವದೋಷಾತಿದೂರಸರ್ವಾಚಿಂತ್ಯಸರ್ವೋತ್ತಮಸರ್ವೇಶ್ವರ ಸರ್ವಾತ್ಯಂತವಿಲಕ್ಷಣಸ್ವಗತಭೇದವಿವರ್ಜಿತತ್ವಾದಿನಾಭಗದ್ವಾಚ್ಯಾನಾಂ, ಅಭಿಮಾನಾದಿ ಸರ್ವದೋಷದೂರಾಣಾಂ, ಅಸೂಯೇರ್ಷ್ಯಾದ್ಯಶೇಷಮನೋದೋಷನಿವರ್ತಕಾನಾಂ ನಿತ್ಯಾಪರೋಕ್ಷೀಕೃತರಮಾಯುಕ್ತಾಶೇಷಭಗವದ್ರೂಪಾಣಾಂ, ಅತ ಏವ ವಿಲೀನಾಶೇಷ-ಪ್ರಕೃತಿಬಂಧಾನಾಂ, ಅತ ಏವ ದೂರೋತ್ಸಾರಿತಾಶೇಷಾನಿಷ್ಟಾನಾಂ ಅತ ಏವಾಶೇಷ-ಭಕ್ತಾಶೇಷಾನಿಷ್ಟ ನಿವರ್ತಕಾನಾಂ, ಪ್ರಣವೋಪಾಸಕಾನಾಂ, ಅಸ್ಮದಾದಿಗುರೂಣಾಂ, ಶ್ರೀಮದಾನಂದತೀರ್ಥಶ್ರೀಮಚ್ಚರಣಾನಾಂ ಅಂತರ್ಯಾಮಿನ್ ಅನಿರುದ್ಧಪ್ರದ್ಯುಮ್ನ ಸಂಕರ್ಷಣ-ವಾಸುದೇವಾತ್ಮಕಶ್ರೀಮದ್ಭವಲ್ಲಭಶ್ರೀಲಕ್ಷ್ಮೀವೇದವ್ಯಾತ್ಮಕಅಂಡಸ್ಥಿತಾನಂತ-ರೂಪಾವಯವಗುಣಕ್ರಿಯಾಜಾತ್ಯವಸ್ಯಾವಿಶಿಷ್ಟ ರಮಾಯುಕ್ತಕ್ಷೀರಾಬ್ಧಿಶೇಷಶಾಯಿ ಶ್ರೀಪದ್ಮನಾಭಾತ್ಮಕಾಂಡಾದ್ಬಹಿರಭವತ್ಕಶುದ್ಧಸೃಷ್ಟಿತ್ವೇನಾಭಿಮತಶ್ರೀಚತುರ್ಮುಖ-

ಮುಖ್ಯಪ್ರಾಣೋಪಾಸ್ಯತ್ವಾದ್ಯನೇಕಪ್ರಯೋಜನಕಾನಂತಾನಂತರೂಪಮೂಲಭೂತ
ತಥಾಽಶೇಷಜಗತ್ಕಾಲನಪ್ರಯೋಜನಕಶಾಂತಿಪತ್ಯನಿರುದ್ಧಮೂಲಭೂತಾಶೇಷ
ಜಗತ್ಸೃಷ್ಟಿಪ್ರಯೋಜನಕಕೃತಿಪತಿ ಪ್ರದ್ಯುಮ್ನಮೂಲಭೂತಜಗತ್ಸಂಹಾರಪ್ರಯೋಜನಕ
ಜಯಾಪತಿಸಂಕರ್ಷಣಮೂಲಭೂತ ತಥಾ ಸ್ವಸ್ವಸಮಗ್ರಯೋಗ್ಯತಾಭಜ್ಞಪರಮಾನು-
ಗ್ರಹಶೀಲಭಗವತ್ಪ್ರೇರಿತ ಚತುರ್ಮುಖಾದಿಸದ್ಗುರೂಪದಿಷ್ಟಸ್ವಸ್ವಯೋಗ್ಯಭಗವದ್ರೂಪ-
ಗುಣೋಪಾಸನಯಾ ಸಂಜಾತಸ್ವಸ್ವಯೋಗ್ಯಭಗವದ್ರೂಪವಿಶೇಷದರ್ಶನಭೋಗಾಭ್ಯಾಂ
ವಿನಷ್ಟಾನಿಷ್ಟಸಂಚಿತಪ್ರಾರಬ್ಧಲಕ್ಷಣಾಶೇಷಕರ್ಮಣಾಂ, ಸ್ವಸ್ವಯೋಗ್ಯತಾನುಸಾರೇಣ
ಸಂಪೂರ್ಣಸಾಧನಾನಾಂ, ಪೂರ್ವಕಲ್ಪೇ ಬ್ರಹ್ಮಣಾ ಸಹ ವಿರಜಾನದೀಸ್ನಾನೇನ
ತ್ಯಕ್ತಲಿಂಗಾನಾಂ, ತಥಾ ವಿನಷ್ಟಾದಶೇಷಾಶೇಷ ಪ್ರಾರಬ್ಧಕರ್ಮಣಾಂ ಪ್ರಲಯಕಾಲೇ
ಭಗವದ್ಗದೇ ವಸತಾಂ ಆನಂದಮಾತ್ರವಪುಷಾಂ ತದನುಭವರಹಿತಾನಾಂ ಸ್ವಸ್ವಯೋಗ್ಯ
ಭಗವದ್ರೂಪ ವಿಶೇಷಧ್ಯಾನರತಾನಾಂ, ಸೃಷ್ಟಿಕಾಲೇ ಭಗವದಾಜ್ಞಯಾ ಭಗವದುದರಾದ್ವಿನಿ-
ರ್ಗಚ್ಛತಾನಾಂ ಶ್ವೇತದ್ವೀಪದರ್ಶನಂ ನಿಮಿತ್ತೀಕೃತ್ಯ ಪ್ರಧಾನಾವರಣಭೂತಸ್ವೇಚ್ಛಾಪರಕೇಣ
ಸ್ವಸ್ವಯೋಗ್ಯಾನಂದಾವಿರ್ಭಾವಲಕ್ಷಣಮುಕ್ತಿಪ್ರದಾನಪ್ರಯೋಜನಕಮಾಯಾಪತಿ
ಶ್ರೀವಾಸುದೇವಾತ್ಮಕಲಕ್ಷ್ಮ್ಯಾತ್ಮಕಪ್ರಲಯಾಬ್ಧಿಸ್ಥಶ್ರೀವಟಪತ್ರಶಾಯ್ಯಶೇಷಜಗದುದರಾಶೇಷ
ಮುಕ್ತಾಭಿದೇಶೋರ್ಧ್ವಭಾಗಕುಕ್ಷ್ಯಾಖ್ಯದೇಶತ್ರಿವಿಧಾಶೇಷಸಂಸಾರಿನಾಭಿದೇಶಾಖಿಲ-
ತಮಃಪತಿತನಾಭ್ಯಧೋಭಾಗದೇಶಶ್ರೀಭೂಮ್ಯಾಲಿಂಗಿತಕಾಲಾದಿಚೇಷ್ಟಕಪರಮಾಣ್ವಾದ್ಯ-
ಶೇಷಕಾಲಾವಯವಸ್ವಷ್ಟ್ಯಾದಿಕರ್ತೃಶೇಷನಾಮಕಪರಮಪುರುಷನಾಮಕಶ್ರೀಚತುರ್ಮುಖ
ಮುಖ್ಯಪ್ರಾಣೋಪಾಸಿತಚರಣಾನಿರುದ್ಧಾದಿಚತೂರೂಪಾತ್ಮಕಗಾಯತ್ರೀನಾಮಕ
ಸವಿತೃನಾಮಕರೂಪವಿಶೇಷಾತ್ಮಕವ್ಯಾಪ್ತರೂಪಬೃಹಚ್ಛರೀರಶೂನ್ಯಾಭಧಕಾಲಾಭಧ
ಕೇವಲಾಭಧಬ್ರಹ್ಮಾಭಿಧಾನಂತಾಭಧರೂಪವಿಶೇಷಾತ್ಮಕನಿರುಪಚರಿತಮೂಲರೂಪ
ನಿರುಪಚರಿತವ್ಯಾಪ್ತಪ್ರತಿಪಾದ್ಯಾನಂತತೇಜಃಪುಂಜತಾದ್ಯಶರಮಾಯುಕ್ತರೂಪವಿಶೇಷಾತ್ಮಕ
ಗಾಯತ್ರೀಭೂತವಾಕ್ಪೃಥ್ವೀಶರೀರಹೃದಯಭೇದೇನ ಷಡ್ವಿಧಗಾಯತ್ರೀನಾಮಕ
ಲೋಕವೇದಸಮೀರರಮಾಂತರ್ಗತಪ್ರಣವಾಖ್ಯತುರೀಯಪಾದೋಪೇತಗಾಯತ್ರೀ-
ಪಾದಚತುಷ್ಟಯಪ್ರತಿಪಾದ್ಯವೈಕುಂಠಸ್ಥಿತಅನಂತಾಸನಸ್ಥಿತಶ್ವೇತದ್ವೀಪಸ್ಥಿತಸರ್ವಚೇತನ
ರೂಪಭೇದೇನ ಚತೂರೂಪಾತ್ಮಕ ನಿರುಪಚರಿತವಾಗರ್ಥಪ್ರತಿಪಾದಕ ಶ್ರೀದೇವ್ಯಾದಿ
ರಮಾರೂಪಾಷ್ಟಕಾಭಮನ್ಯಮಾನಚಕ್ರಶಂಖವರಾಭಯಯುಕ್ತಹಸ್ತಚತುಷ್ಟಯೋ-
ಪೇತಪ್ರದೀಪವರ್ಣಸರ್ವಾಭರಣಭೂಷಿತವಿಶ್ವಾದಿಭಗವದ್ರೂಪಾಷ್ಟಕಪ್ರತಿಪಾದಕಾ-
ಕಾರಾದ್ಯಷ್ಟಾಕ್ಷರಾತ್ಮಕಶ್ರೀಮತ್ಪ್ರಣವಾದ್ಯಷ್ಟಮಹಾಮಂತ್ರಪ್ರತಿಪಾದ್ಯಾಷ್ಟರೂಪಾತ್ಮಕ
ಮಂತ್ರಾಧ್ಯಾಯೋಕ್ತಭೂವರಾಹಾದ್ಯಶೇಷವೈಷ್ಣವಮಂತ್ರಪ್ರತಿಪಾದ್ಯಭೂವರಾಹಾದ್ಯ-
ಶೇಷರೂಪವಿಶೇಷಾತ್ಮಕರಮಾದಿಮಂತ್ರಪ್ರತಿಪಾದ್ಯರಮಾದಿನಿಷ್ಠರಮಾದಿನಾಮಕರೂಪ
ವಿಶೇಷಾತ್ಮಕಶ್ರೀಲಕ್ಷ್ಮೀನೃಸಿಂಹಾತ್ಮಕಪರಮದಯಾಲೋ ಕ್ಷಮಾಸಮುದ್ರ ಭಕ್ತವತ್ಸಲ

ಭಕ್ತಾಪರಾಧಸಹಿಷ್ಣೋ ದೇಶಕಾಲಾಧಿಪತೇ ದೇಹೇಂದ್ರಿಯಾಧಿಪತೇ ಸೂರ್ಯವಂಶಧ್ವಜ
ರಘುಕುಲತಿಲಕಲಕ್ಷ್ಮಣಭರತಶತ್ರುಘ್ನಾಗ್ರಜ ಶ್ರೀಮದ್ಗುಮುಮುಷಾಸಿತಚರಣ ಸೀತಾಪತೇ
ಶ್ರೀರಾಮಚಂದ್ರ ! ತ್ವದಾಜ್ಞಯಾ ತ್ವತ್ಪ್ರಸಾದಾತ್ ತ್ವತ್ಪ್ರೇರಣಯಾ ತ್ವತ್ಪ್ರೀತ್ಯರ್ಥಂ ತ್ವಾಮುದ್ದಿಶ್ಯ
ತ್ವಾಮನುಸ್ಮರನ್ನೇವ ತ್ವದಾಜ್ಞಯಾ ನಿಯತೇನ ಮನ್ನಿಯಾಮಕೇನ ಸತ್ಯಾಪ್ರದವಾಯುನಾಮಕ
ಚೇಷ್ಟಾಪ್ರದಪ್ರಾಣನಾಮಕಧಾರಣಾಪ್ರದಧರ್ಮನಾಮಕಮುಕ್ತಿಪ್ರದಭಕ್ತಿನಾಮಕರೂಪ
ವಿಶೇಷೈರ್ಮದ್ಬುದ್ಧಿ ಸ್ಥಿತೇನ ಪರಮುದಯಾಲುನಾ ಕ್ಷಮಾಸಮುದ್ರೇಣ ಭಕ್ತವತ್ಸಲೇನ
ಭಕ್ತಾಪರಾಧಸಹಿಷ್ಣುನಾ ಸರ್ವಸ್ವಾಮಿನಾ ಸರ್ವಪ್ರೇರಕೇಣ ಸರ್ವತಾತ್ಪಿಕದೇಮತಾಪ್ರೇರಕೇಣ,
ಸರ್ವತಾತ್ಪಿಕಾಸುರಭಂಜಕೇನ ತಥಾ ತತ್ಪ್ರೇರಣಾಪ್ರಯುಕ್ತಾಶೇಷದುರ್ಮತಭಂಜಕೇನ,
ಅತ ಏವ ಪ್ರಭಂಜನಶಬ್ದವಾಚ್ಯೇನ, ಪ್ರತಿದಿನಂ ಪ್ರತಿಕ್ಷಣಂ ಬುದ್ಧಿಶೋಧಕೇನ,
ಸರ್ವಕರ್ಮಕರ್ತ್ರಾ ಸರ್ವಕರ್ಮಕಾರಯಿತ್ರಾ ಸರ್ವಕರ್ಮಸ್ವಾಮಿನಾ ಸರ್ವಕರ್ಮ-
ಸಮರ್ಪಕೇಣ ಸರ್ವಕರ್ಮಫಲಭೋಕ್ತ್ರಾ ಸರ್ವಕರ್ಮಫಲಭೋಜಯಿತ್ರಾ ಸರ್ವಕರ್ಮ-
ಪ್ರೇರಕೇಣ ಸರ್ವಕರ್ಮೋದ್ಯೋಧಕೇನ ಸರ್ವಕರ್ಮಶುದ್ಧಿಪ್ರದೇನ ಸರ್ವಕರ್ಮಸಿದ್ಧಿಪ್ರದೇನ
ಸರ್ವಕರ್ಮನಿಷ್ಠೇನ ಸರ್ವಕರ್ಮಸಾಕ್ಷಿಣಾ ಸರ್ವಕರ್ಮನಿಷ್ಠ ಭಗವದ್ರೂಪೋಪಾಸಕೇನ
ಅತ ಏವ ಅಶೇಷಜೀವನಿಃಸಂಖ್ಯಾದಿಕಾಲೀನಧರ್ಮಾಧರ್ಮ ದ್ರಷ್ಟ್ರಸ್ವೇಚ್ಛೋದ್ಯೋಧಕೇನ
ತದ್ಭಾವಕಕಪಿಲೋಪಾಸಕೇನ, ರಮಾವ್ಯತಿರಿಕ್ತಪೂರ್ವಪ್ರಸಿದ್ಧವ್ಯತಿರಿಕ್ತಾನಂತವೇದ-
ಪ್ರತಿಪಾದ್ಯಮುಖ್ಯತಮೇನ, ಅನಂತಗುಣಪರಿಪೂರ್ಣೇನ ಸರ್ವದೋಷದೂರೇಣ
ತ್ವಚ್ಚಿತ್ತಾಭಜ್ಞೇನ ತ್ವಚ್ಚಿತ್ತಾನುಸಾರಚಿತ್ತೇನ ತ್ವತ್ಪರದಾನುಗ್ರಹಪಾತ್ರಭೂತೇನ
ಮದ್ಯೋಗ್ಯತಾಭಜ್ಞೇನ ಶ್ರೀಭಾರತೀರಮಣೇನ ರುದ್ರಾದ್ಯಶೇಷತಾತ್ಪಿಕವೇದತೋ-
ಪಾಸಿತಚರಣೇನ ಮಮ ಸರ್ವಾತ್ಮನಸ್ತು ವಿಚಿತ್ರಧಾ ವಿಚಿತ್ರಧಾ ತ್ವದುಪಾಸಕೇನ,
ಶ್ರೀಮದ್ಮುಖ್ಯಪ್ರಾಣೇನ ಪ್ರೇರಿತಃಸನ್ ತ್ವತ್ಸಂಸ್ಮೃತಿಪೂರ್ವಕಂ ಶಯಾನಾತ್
ಸದ್ಯುತ್ಥಾಯಾದ್ಯತನಂ ಸ್ವವರ್ಣಾಶ್ರಮೋಚಿತಂ ದೇಶಕಾಲಾದಸ್ಯೋಚಿತಂ
ನಿತ್ಯನೈಮಿತ್ತಿಕಕಾಮ್ಯಭೇದೇನ ತ್ರಿವಿಧಂ ತ್ವತ್ಪೂಜಾತ್ಮಕಂ ಕರ್ಮ ಯಥಾಶಕ್ತಿ ಯಥಾಜ್ಞಸ್ತಿ
ಯಥಾವೈಭವಂ ಕರಿಷ್ಯೇ । ಮದಾಜ್ಞಾಕಾರಿಭಿರ್ವಿದ್ಯಾಸಂಬಂಧಿಭಿರ್ದೇಹಸಂಬಂಧಿಭಿಶ್ಚ
ತ್ವದೀಯೈರಶೇಷೈರ್ಜನೈಸ್ತ್ವತ್ಸರ್ವಕರ್ಮಕರ್ತೃತ್ವಕಾರಯಿತೃತ್ವಾದ್ಯನುಸಂಧಾನಪೂರ್ವಕಂ
ಕಾರಯಿಷ್ಯೇ ಚ ॥

॥ ಇತಿ ಶ್ರೀರಾಘವೇಂದ್ರಾಖ್ಯಯತಿನಾ ಕೃತಮಂಜಸಾ
ಪ್ರಾತಃಸಂಕಲ್ಪಗದ್ಯಂ ಸ್ಯಾತ್ ಪ್ರೀತ್ಯೈ ಮಾಧವಮುದ್ಭಯೋಃ ॥

॥ ಇತಿ ಶ್ರೀಮದ್ರಾಘವೇಂದ್ರತೀರ್ಥಕೃತಂ ಪ್ರಾತಃಸಂಕಲ್ಪಗದ್ಯಮ್ ॥

✡ ✡ ✡

ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್

◆ ◆

ವಿದ್ವತ್ ಪ್ರಪಂಚದಲ್ಲಿ ಅನಿತರ ಸಾಧಾರಣವಾದ ಮಲ್ಲರೆನಿಸಿ, ಪ್ರಕಾಂಡಪಂಡಿತರನ್ನು ವಾದದಲ್ಲಿ ಜಯಿಸಿ, ೧೦೮ ಜಯಪತ್ರಿಕೆಗಳನ್ನು ಪಡೆದು, ಅವುಗಳನ್ನು ಸುವರ್ಣ ಪುಷ್ಪಗಳಲ್ಲಿ ಕೆತ್ತಿಸಿ ಶ್ರೀನಿವಾಸನಿಗೆ ಅರ್ಪಿಸಿದವರು. ಇವರ ಅಗಾಧ ವಿದ್ವತ್ತು, ಪ್ರೌಢಿಮೆಗಳಿಗೆ ಮನಸೋತು ಲಕ್ಷ್ಮೀನಾರಾಯಣಮುನಿಗಳೆನಿಸಿದ ಶ್ರೀಪಾದರಾಜರೇ ಮೊದಲಾದ ಅನೇಕ ಪೀಠಾಧಿಪತಿಗಳು ಇವರಲ್ಲಿ ಶಾಸ್ತ್ರಾಧ್ಯಯನ ಮಾಡಿದರು. ಶ್ರೀಮೂಲರಾಮನ ಪೂಜೆ ಮಾಡುವ ಅವಕಾಶ ಸಿಗದೆ ಖಿನ್ನರಾದ ಇವರಿಗೆ ಸ್ವಪ್ನದಲ್ಲಿ ಕಂಡ ಭಗವಂತ ಮುಂದಿನ ಜನ್ಮದಲ್ಲಿ ಶ್ರೀಮೂಲರಾಮನ ಪೂಜಾವಕಾಶ ದೊರೆಯಲಿದೆ ಎಂದು ಸೂಚನೆ ಇತ್ತನಂತೆ. ಮುಂದೆ ಇವರೇ ಶ್ರೀವಿಜಯೀಂದ್ರರಾಗಿ ಜನಿಸಿ, ರಾಮನ ಪೂಜೆ ಮಾಡಿದರೆಂದು ಪ್ರಮಾಣಗಳಿಂದ ಪ್ರಮಿತವಾಗಿದೆ. ಇವರು ಪರಾಭವ ಸಂವತ್ಸರ ಮಾರ್ಗಶೀರ್ಷ ಶುದ್ಧ ದಶಮಿಯಂದು ತಿರುನಲ್ವೇಲಿಯಲ್ಲಿ ವೃಂದಾವನಸ್ಥರಾದರು. "ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಭರತಖಂಡದ ತುಂಬೆಲ್ಲ ಸಂಚರಿಸಿ ಅದ್ವೈತ ಹಾಗೂ ಶೈವಮತವನ್ನು ಖಂಡಿಸಿದ ಶ್ರೀವಿಬುಧೇಂದ್ರಗುರುಗಳನ್ನು ಭಜಿಸುತ್ತೇವೆಂದು" ಶ್ರೀಜಿತಾಮಿತ್ರರು ಚರಮಶ್ಲೋಕವನ್ನು ರಚಿಸಿದರು.

◆ ◆

*ಅಮೀ ಲಕ್ಷ್ಮೀನಾರಾಯಣಮುನಿಮುಖಾಶೇಷಯತಯೋ
ಯತೋ ವಿದ್ಯಾಮೃದ್ಯಾಮಧಿಜಗುರಧಿಷ್ಠಾನಪತಯಃ ।
ಮುಹುರ್ಮೋಹೋದಂಚತ್ ಪರಮತಪರೀಭಾವಚತುರಃ
ಸ ಮೇ ಭೂಯಃ ಶ್ರೇಯಃ ದಿಶತು ವಿಬುಧೇಂದ್ರವ್ರತಿಪತಿಃ ॥

ಆಕೇರಲಂ ತಥಾಸೇತುಮಾಗಂಗಂ ಚ ಹಿಮಾಲಯಮ್ ।
ನಿರಾಕೃತಾದ್ವೈತಶೈವಂ ವಿಬುಧೇಂದ್ರಗುರುಂ ಭಜೇ ॥

✡ ✡ ✡

ಶ್ರೀಜಿತಾಮಿತ್ರರಾಯರ ಸ್ತೋತ್ರ

◆ ◆

ಈ ಸ್ತೋತ್ರವೂ ಶ್ರೀಜಿತಾಮಿತ್ರರ ಸ್ತೋತ್ರವಾಗಿದ್ದು, ಶ್ರೀಕ್ಷೇತ್ರ ಕೊಪ್ಪದ ಅರ್ಚಕರಾದ ಪಂಡಿತ ಗಿರಾಚಾರ್ಯ ಕವಿಗಳಿಂದ ವಿರಚಿತವಾಗಿದೆ. ಶ್ರೀಮದ್ರಾಮಪದಾರ್ಚಕರಾದ ಗುಣಗಣಧಾಮರಾದ ಆಶ್ರಿತಜನರಿಗೆ ಕಾಮಿತಪ್ರದರಾದ ಸ್ವತಃ ಕಾಮವರ್ಜಿತರಾದ

* ಇದು ಶ್ರೀಧೀರೇಂದ್ರತೀರ್ಥರು ಗುರುಗುಣಸ್ತವನದ ವ್ಯಾಖ್ಯಾನದಲ್ಲಿ ರಚಿಸಿದ ಸ್ತುತಿ.

ಮಧ್ವಮತವಂಶೋದ್ಭವ ಶ್ರೀವಿಬುಧೇಂದ್ರರ ಕುಮಾರರಾದ, ಶರಣಾಗತಜನದುರಿತ-ತಿಮಿರಭಾಸ್ಕರನಾದ ಏಳುದಿನಗಳ ಕಾಲ ಕೃಷ್ಣವೇಣಿಯಲ್ಲಿ ವಾಸಮಾಡಿ ಪುನರುತ್ಥಿತರಾಗಿ ಗೋನದ ತರುವಿನಲ್ಲಿ ಸನ್ನಿಹಿತರಾದ ಶ್ರೀಜಿತಾಮಿತ್ರರ ಗುರುಪ್ರಾರ್ಥನೆ ಇದಾಗಿದೆ. ಇದು ಗೇಯಗುಣಸಂಪನ್ನವಾದ ಸರಳ, ಸುಲಲಿತವಾದ ಸ್ತೋತ್ರವಾಗಿದೆ.

◆ ◆

ಶ್ರೀಮದ್ರಾಮಪದಾರ್ಚಕ ನಿರ್ಜಿತ ಕಾಮ ಸುಗುಣಗಣಧಾಮ ನಮೋ ।
ಮಾಮವನತಜನ ಕಾಮಿತ ಫಲದ ಜಿತಾಮಿತ್ರಾಖ್ಯ ಮುನೀಂದ್ರ ನಮೋ ॥ ೧ ॥

ನಂದತೀರ್ಥವಂಶೋದ್ಭವ ಗುರು ವಿಬುಧೇಂದ್ರಕುಮಾರ ಯತೀಂದ್ರ ನಮೋ ।
ಇಂದುಮೌಲಿ ಭೂ ವ್ಯಂದಾರಕ ಭವಬಂಧ ವಿಮೋಚಕ ನಮೋ ನಮೋ ॥ ೨ ॥

ಭೂತನಾಥಪುರುಹೂತಮುಖಸುರ ವ್ರಾತವಿನುತ ತೇ ನಮೋ ನಮೋ ।
ವಾತಮತಾಂಬುಧಿ ಶೀತಕಿರಣಪ್ರಖ್ಯಾತ ಜಿತಾಹಿತ ಪಾಲಯಂ ಮಾಂ ॥ ೩ ॥

ಶರಣಾಗತಜನ ದುರಿತ ತಿಮಿರ ಭಾಸ್ಕರ ಕರುಣಾಕರ ನಮೋ ನಮೋ ।
ಗುರುವರೇಣ್ಯ ಶಿವಪುರಗ್ರಾಮ ಸ್ಥಿತ ವರ ದ್ವಿಜಕುಲ ಸಂಜಾತ ನಮೋ ॥ ೪ ॥

ಭಕ್ತಜನಾವನ ತತ್ಪುಂ ಕೃಷ್ಣಾಪೂರ್ಣಪ್ರವಾಹಾಂತಸ್ಥ ನಮೋ ।
ಸಪ್ತವಾಸರಮುಷಿತ್ವಾ ಭೋ ಪುನರುತ್ಥಿತ ಪರಮಸಮರ್ಥ ನಮೋ ॥ ೫ ॥

ಅನಮೆ ಕೃಷ್ಣಾವೇಣಿ ತಟಸ್ಥಿತ ಗೋನದ ತರು ಸುಸ್ಥಾನ ಗತಾ ।
ಅನತ ಜನ ಸುರಧೇನು ಸಮಾನ ಮಹಾನುಭಾವ ತೇ ನಮೋ ನಮೋ ॥ ೬ ॥

ಶ್ರೀಮತ್ಕಾರ್ಪರಧಾಮ ನರಹರೇಃ ಪ್ರೇಮಪಾತ್ರ ಸುಚರಿತ್ರ ನಮೋ ।
ಕಾಮಾದಿರಿಪು ಸ್ತೋಮ ಭಯಾಪಹ ಮಾಮುದ್ಧರತೆ ನಮೋ ನಮೋ ॥ ೭ ॥

✡ ✡ ✡

ಶ್ರೀಜಿತಾಮಿತ್ರಸ್ತೋತ್ರಮ್

◆ ◆

ಶ್ರೀಜಿತಾಮಿತ್ರಗುರುಗಳು ಶ್ರೀಮದಾಚಾರ್ಯರ ನಂತರ ೧೧ನೆಯವರಾದ ಪೀಠಾಧಿಪತಿಗಳು. ಇವರು ಅವತರಿಸಿದ ಶಿವಪುರ ಕೃಷ್ಣಾತೀರದಲ್ಲಿರುವ ಪ್ರಸಿದ್ಧ ತೀರ್ಥ-ಕ್ಷೇತ್ರಗಳಿಂದಾವೃತ ಪ್ರದೇಶವಾಗಿದೆ. ಪರಿವಾಯುಗಳ ಆಜ್ಞೆಯಂತೆ ರುದ್ರದೇವರು ಜಿತಾಮಿತ್ರರಾಗಿ ಅವತರಿಸಿದರು. ಬಾಲ್ಯದಿಂದಲೂ ಕಷ್ಟಗಳನ್ನೇ ಅನುಭವಿಸಿದ ಅನಂತಪ್ಪ

ಮಾತಾಪಿತೃಗಳನ್ನು ಕಳೆದುಕೊಂಡು ಮನೆಯ ಜವಾಬ್ದಾರಿಯನ್ನು ಹೊತ್ತು ಅಕ್ಕನೊಂದಿಗೆ ಕಾಲಕಳೆಯುತ್ತಿದ್ದ. ಮುಂದೆ ಯೋಗ್ಯ ಕನ್ಯೆಯೊಂದಿಗೆ ಅನಂತಪ್ಪನ ವಿವಾಹವಾಗಿ ಕಾಲಕಳೆಯುತ್ತಿರಲು, ದೇಶಸಂಚಾರ ಮಾಡುತ್ತಾ ಶಿವಪುರಕ್ಕೆ ಆಂದಿನ ಯತಿಗಳಾದ ಶ್ರೀವಿಬುಧೇಂದ್ರತೀರ್ಥರ ಆಗಮನ, ಜತ್ತಪ್ಪನ ಜೀವನದ ದಿಕ್ಕನ್ನೇ ಬದಲಾಯಿಸಿತು. ಜತ್ತಪ್ಪ ಜಿತಾಮಿತ್ರರಾಗಿ ವೇದಾಂತಸಾಮ್ರಾಜ್ಯದಲ್ಲಿ ಅಭಿಷಿಕ್ತರಾದರು. ಈ ಜಿತಾಮಿತ್ರರ ಕಥೆಯು ಈ ಸ್ತೋತ್ರದಲ್ಲಿ ಅಡಕವಾಗಿದೆ.

ಜಿತಾಮಿತ್ರರು ಆಚಾರ್ಯ ಮಧ್ವರ ಭಾಷ್ಯ ಹಾಗೂ ನ್ಯಾಯಸುಧೆಯ ಸೇವನೆ-ಯಿಂದ ಪರಿಶುದ್ಧ ಬುದ್ಧಿಯುಳ್ಳವರು. ಅರಿಷಡ್ವರ್ಗವನ್ನು ಗೆದ್ದವರು, ಶ್ರೀರಘೂನಂದನರೇ ಮೊದಲಾದ ಸಚ್ಛಿಷ್ಯರಿಗೆ ಸಚ್ಶಾಸ್ತ್ರದ ಪಾಠ ಮಾಡಿದವರು. ಕೃಷ್ಣೆ ತುಂಬಿ ಹರಿದರೂ ನೀರಿನಲ್ಲಿ ನಿಶ್ಚಲರಾಗಿ ಪದ್ಮಾಸನದಲ್ಲಿದ್ದು, ಏಳು ದಿನ ತಪಸ್ಸು ಮಾಡಿದರು. ಏಳುದಿನ ಅಹೋರಾತ್ರಿ ಪೂರ್ಣಪ್ರವಾಹ ಹರಿದು ನೆರಿ ಇಳಿದ ಮೇಲೆ ಜಿತಾಮಿತ್ರರು ಒಂದು ಮಣ್ಣಿನ ರಾಶಿಯಲ್ಲಿ ಕಾಣದಂತೆ ಮುಳುಗಿ ಹೋಗಿದ್ದರು. ರುದ್ರಾವತಾರಿಗಳಾದ ಜಿತಾಮಿತ್ರರು ಮಹಾನದಿಯಾದ ಗಂಗೆಯ ವೇಗದ ಪ್ರವಾಹವನ್ನು ತಿಳಿದವರು. ಶ್ರೀರಾಮನ ಸೇವೆಯೆಂಬ ಸಮುದ್ರದಲ್ಲಿ ಮುಳುಗಿ ತೇಲುವ ಅವರಿಗೆ ಕೃಷ್ಣೆಯ ಪೂರ್ಣಪ್ರವಾಹದ ಭಯವೆಂಬುದು ಇಲ್ಲವೆಂದು ಈ ಸ್ತೋತ್ರದಲ್ಲಿ ವರ್ಣಿಸಲಾಗಿದೆ. ಅವರ ನಾನಾಮಹಿಮೆಗಳನ್ನು ವರ್ಣಿಸಿ, ಅವರಲ್ಲಿ ರಕ್ಷಿಸುವಂತೆ ಪ್ರಾರ್ಥಿಸಲಾಗಿದೆ. ಶ್ರೀಹರಿ, ಶ್ರೀಮಧ್ವರನ್ನು ಧ್ಯಾನ ಮಾಡುವಂತೆಯೂ, ಶ್ರೀಮದಾಚಾರ್ಯರ, ಶ್ರೀಟೀಕಾ-ರಾಯರ ಗ್ರಂಥಗಳ ಅಧ್ಯಯನರೂಪ ಸೇವೆ ಮಾಡುವಂತೆಯೂ ಅನುಗ್ರಹಿಸಲಾಗಿದೆ. ಇವರು ಮಾರ್ಗಶೀರ್ಷ ಕೃಷ್ಣ ಅಮಾವಾಸ್ಯೆಯಂದು ಹರಿಧ್ಯಾನತತ್ಪರರಾದರು. ಕೃಷ್ಣಾ-ಭೀಮಾ ಸಂಗಮದ ನಡುಗಡ್ಡೆಯಲ್ಲಿ ಗೋನದ ವೃಕ್ಷದಲ್ಲಿ ಸನ್ನಿಹಿತರಾಗಿ ಇಂದಿಗೂ ಭಕ್ತರನ್ನು ಅನುಗ್ರಹಿಸುತ್ತಿರುವರು.

ಕೊನೆಯಲ್ಲಿ ಈ ಸ್ತೋತ್ರ ರಚಿಸಿದ ಕೃಷ್ಣಾಚಾರ್ಯರು ಪ್ರೀತಿಪೂರ್ವಕವಾಗಿ, ಅತ್ಯಂತ ಭಕ್ತಿಯಿಂದ ಈ ಸ್ತೋತ್ರವನ್ನು ಪಠಿಸುವವರು ಸಚ್ಛಾಸ್ತ್ರಶ್ರವಣಮನನಾದಿಗಳನ್ನು ಪಡೆಯುವರೆಂದು ಫಲವನ್ನು ಹೇಳಿ ಸ್ತೋತ್ರವನ್ನು ಕೊನೆಗೊಳಿಸಿದ್ದಾರೆ.

◆ ◆

ಶ್ರೀಬ್ರಹ್ಮೇಶನುತಂ ವ್ಯಾಸಂ ನತ್ವಾ ಮಧ್ವಾದಿಮದ್ಗುರೂನ್ ।
ಭೂತ್ಯೈ ಯಥಾಮತಿ ಸ್ತೌಮಿ ಜಿತಾಮಿತ್ರ ಗುರೂಂಶ್ಚ ಮೇ ॥ ೧ ॥

ಆನಂದತೀರ್ಥವಂಶೋತ್ಥವಿಬುಧೇಂದ್ರಕರಾಬ್ಜಜಃ ।
ಜಿತಾಮಿತ್ರಸುತೀರ್ಥೋಽಸಿ ಗುರೋ ಮಾನಸಗೋ ಹಿ ಮೇ ॥ ೨ ॥

ಲವಣಾಬ್ಧಿತಪಸ್ತೀರ್ಣೋ ಭವಾನುಗ್ರಭವಾಗ್ರಣೀಃ ।
ಕಾಮಜಿತ್ ಕಾಮಿನಿಸಂಗೀ ವಿಷತಾಪಸ್ತಿತಾಪಹಾ ॥ ೩ ॥

ವಂದೇ ತ್ವಾಂ ಬುದ್ಧಿದೇವೀಶ ಯತಿಭಾವೇ ಸುಕೋಪಗೀಃ ।
ದ್ರೌಣಿರ್ವಾ ಸಾಂಶ್ಚಿರಂಜೀವೀ ಪ್ರಾಣಭೀಮ ವಿಪಕ್ಷಿಗೀಃ ॥ ೪ ॥

ತತ್ತ್ವಂ ರೂಪತ್ರಯಸ್ಥಂ ಸಃ ಸ್ಮರೇನ್ ಸ್ವಧರ್ಮಮಂಜಸಾ ।
ಸರ್ವಸದ್ಗುಣಪೂರ್ತ್ಯರ್ಥಂ ಸರ್ವಜ್ಞಪದಭಾವನಃ ॥ ೫ ॥

ಸದ್ಭಾಷ್ಯಕಂಜಸನ್ನ್ಯಾಯಸುಧಾಸೇವನಶುದ್ಧಧೀಃ ।
ಜಿತಕಾಮೇಂದ್ರಿಯ ಕ್ರೋಧಃ ಭವತಾಪವಿವರ್ಜಿತಃ ॥ ೬ ॥

ಸನ್ಮಧ್ವಾಧಾರಣಾಜ್ಞೇಶೋ ವ್ಯಾಸರಾಮಾರ್ಚನೇ ರತಃ ।
ರಘುನಂದನತೀರ್ಥಾದಿಸ್ವಸೇವಕಸುಶಾಸ್ತ್ರಧೀಃ ॥ ೭ ॥

ಪ್ರತ್ಯಥೀಜಿತ್ ಸುಧಾ ಽರ್ಥೇ ಽಗ್ನಿಮಿತ್ರೋಡುಪತಿನೇತ್ರ ಭೋಃ ।
ವಾಮಧೂತಜಿತಾರಿಷ್ಟ ಮಾಮಾಪದ್ಭವ ಮದ್ಗುರೋ ॥ ೮ ॥

ಕೃಷ್ಣವೇಣೀ ಮಹಾಪೂರ್ಣಪ್ರವಾಹಾಂತರ್ಜಲೇ ಽಚಲಃ ।
ಪದ್ಮಾಸನೇ ತಪಃ ಸಪ್ತರಾತ್ರೀಃ ಕುರ್ವನ್ ಸಮಾಧಿಗಃ ॥ ೯ ॥

ಮಹಾಮ್ಯದಿ ತತಸ್ತ್ವಾಸೀಃ ಸ್ವಾತ್ಮಾನ್ವೇಷಣಕಾರಿಣಃ ।
ನ ಕುರುಷ್ವಂ ವ್ಯಥಾಮತ್ರ ಸಂಸ್ಥಿತೋ ಽಹಮತೋ ಯತಃ ॥ ೧೦ ॥

ಸಮುತ್ಥಿತಸ್ತತೋ ಽಪ್ಯಾಸೀಃ ಸ್ವಮಹಿಮ್ನಾ ಜಿತಾಪ್ರಿಯ ।
ಮದ್ದುಸ್ತರಭವಾಬ್ಧೌ ಮಾಂ ದೀನಂ ಮಗ್ನಂ ಸಮುದ್ಧರ ॥ ೧೧ ॥

ರಾಮಸೇವಾಸುಧಾಸಿಂಧೂಮಜ್ಜನೇ ಸ್ವಾದರೋ ಮಹಾನ್ ।
ಸೀತಾಲಂಕಾರ ಜಿತ್ತೇ ಽಲಂ ಕೃಷ್ಣಾಗಮನಭೀಃ ಕುತಃ ॥ ೧೨ ॥

ತತೋ ವರ್ಷದ್ವಯಾತ್ ಪಂಚದಿನಾದ್ಯಾ ಶ್ರಿದಿನಾತ್ಪರಮ್ ।
ದೃಶ್ಯೋ ಽದೃಶ್ಯೋ ಜನ್ಯಸ್ತ್ವಾಸೀಃ ಸ್ವಾತ್ಮಾಂತರ್ಧಾನಶಕ್ತಿಮಾನ್ ॥ ೧೩ ॥

ತಿತಿಕ್ಷಃ ಪರಮೋದಾರಕ್ಷುತ್ಪಿಪಾಸಾಭಯೋಜ್ಝಿತಃ ।
ಭುಂಜಾನೋ ಽನ್ನಂ ಕದಾಚಿತ್ ತ್ವಂ ಭಗಿನೀಭಕ್ತಿಯಂತ್ರಿತಃ ॥ ೧೪ ॥

ಭೀಮಾಪ್ರವಾಹಯುಕ್ತುದ್ಯತ್ಕೃಷ್ಣಾಸದ್ವೀಪಗೇ ತಟೌ ।
ಮಾರ್ಗಶೀರ್ಷೇ ತತೋ ಽಮಾಯಾಂ ಭಗಿನೀದೃಷ್ಟಿಗೋಚರಃ ॥ ೧೫ ॥

ಮಹಿಮ್ನಾಂತರ್ಹಿತಸ್ತ್ವಾಸೀಃ ಕಲಿಜಿಚ್ಚಿರಜೀವಿತಃ ।
ಪೋಷ್ಟ್ರಿಪುರಧುಗ್ವಿಷ್ಣೋರುಗ್ರನಂದೀಸುವೇಷತಃ ॥ ೧೬ ॥

ಸೌರಿಜಿತ್ತ್ವಂ ಜಟಾಪ್ರೋತ್ತಕೃಷ್ಣಾಭೀಮಾಂತರಾದರಃ ।
ಕೃಷ್ಣವೇಣೀ ಸುಧಾರಣ್ಯೇ ಗೋನದಶ್ವೇತಧಾಮಗಃ ॥ ೧೭ ॥

ಹೃತ್ಪದ್ಮಧಾಮಗಾನಂದತೀರ್ಥಮಾಧವಪೂಜಕ ।
ಜಿತಾಮಿತ್ರಾಮರಾಧೀಶ ದೇಹಿ ಮೇ ಽದ್ವೈತವಾಗ್ಬಯಮ್ ॥ ೧೮ ॥

ತ್ವಾಂಶೋಗ್ರೋಜ್ಜಾಸಿತಧ್ಯಾತ್ಮನೃಸಿಂಹಾಖ್ಯಂ ಮಹಾಮಲಮ್ ।
ಬ್ರಹ್ಮ ಚಿಂತಯತೇ ತುಭ್ಯಂ ಜಿತಾಮಿತ್ರ ನಮೋ ನಮಃ ॥ ೧೯ ॥

ಶ್ರೀಮದಾನಂದತೀರ್ಥಾರ್ಯಚರಣಾರಾಧನೇ ರತಮ್ ।
ಜಿತಾಮಿತ್ರಾಪ್ತಸಚ್ಚಿಷ್ಯಂ ಕೃತ್ವಾ ಮಾಂ ಪಾಹಿ ಸರ್ವದಾ ॥ ೨೦ ॥

ಪ್ರಪನ್ನಾರ್ತಿಹರಸ್ನೇಹನಿರ್ದೋಷಗುಣಚಿಂತನ ।
ಸದಾ ಕುರು ಜಿತಾಮಿತ್ರ ನಿರ್ದೋಷಗುಣತಚಿಂತನಮ್ ॥ ೨೧ ॥

ಜಿತಾಮಿತ್ರಮುನೀಂದ್ರೋ ಮೇ ಶತಾನಂದಚಿದಾತ್ಮಕಃ ।
ಶಮಾದರದಮಾರಾಗಸಚ್ಚಿದಾನಂದದೋ ಭವ ॥ ೨೨ ॥

ಶ್ರೀಶಮದ್ವಸುಧಾಸಿಂಧುಹೃತ್ ಶ್ವೇತದ್ವೀಪ ಏವ ಮಾಮ್ ।
ಸಂಸ್ಥಾಪಯ ಜಿತಾಮಿತ್ರ ಪ್ರಪನ್ನಭವತಾರಕ ॥ ೨೩ ॥

ಕೃಪಾಬ್ಧೇ ಶಮ್ರುಜಿತ್ ತೀರ್ಥ ಕೃಪಾದೃಷ್ಟ್ಯಾ ವಿಲೋಕ್ಯ ಮಾಮ್ ।
ಪೂರ್ಣಧೀಭಾಷ್ಯಸನ್ನ್ಯಾಯಸುಧಾಸೇವಾಂ ಚ ಕಾರಯ ॥ ೨೪ ॥

ಜಿತಾಮಿತ್ರಗುರುಸ್ತೋತ್ರಂ ಯಃ ಪಠೇತ್ ಪ್ರೀತಿಪೂರ್ವಕಮ್ ।
ಪ್ರಾಪ್ನೋತಿ ಸ ಮಹಾಭಕ್ತ್ಯಾ ಶ್ರವಣಾದಿಸುಸಂಪದಮ್ ॥ ೨೫ ॥

ಇತಿ ಶ್ರೀಶೇರಣಾಪ್ರೇಮಜಿತಾಮಿತ್ರಕೃಪಾಬಲಾತ್ ।
ವಂದಾರುಣಗುರುಸ್ತೋತ್ರಂ ಕೃಷ್ಣಾಖ್ಯೇನ ಮಯಾ ಕೃತಮ್ ॥ ೨೬ ॥

ಸಪ್ತರಾತ್ರಂ ಕೃಷ್ಣವೇಣ್ಯಾಮುಷಿತ್ವಾ ಪುನರುತ್ಥಿತಮ್ ।
ಜಿತಾಮಿತ್ರಗುರುಂ ವಂದೇ ವಿಬುಧೇಂದ್ರಕರೋದ್ಭವಮ್ ॥ ೨೭ ॥

✡ ✡ ✡

ಶ್ರೀರಘುನಂದನತೀರ್ಥಸ್ತುತಿಃ

ಪರೈರಪಹೃತಾ ಮೂಲರಾಮಾರ್ಚಾ ಗುರ್ವನುಗ್ರಹಾತ್ ।
ಯೇನಾನೀತಾ ನಮಸ್ತಸ್ಮೈ ರಘುನಂದನಭಿಕ್ಷವೇ ॥

✡ ✡ ✡

ಶ್ರೀಬ್ರಹ್ಮಣ್ಯತೀರ್ಥವಿಜಯಃ

◆ ◆

ಶ್ರೀಬ್ರಹ್ಮಣ್ಯತೀರ್ಥ ಪರಂಪರೆಯಲ್ಲಿ ಅವರ ಪ್ರಶಿಷ್ಯರಾದ ಶ್ರೀಶ್ರೀನಿವಾಸತೀರ್ಥರು ಶ್ರೀಬ್ರಹ್ಮಣ್ಯತೀರ್ಥರ ಜೀವನದ ಅನೇಕ ಮಹತ್ವದ ಘಟನೆಗಳನ್ನೊಳಗೊಂಡ ಈ ವಿಜಯಕಾವ್ಯವನ್ನು ರಚಿಸಿರುವರು.

ಆರಂಭದಲ್ಲಿ ಶ್ರೀವಿಠ್ಠಲಮೂರ್ತಿ, ಶ್ರೀಮಧ್ವಾಚಾರ್ಯರು, ಶ್ರೀಬ್ರಹ್ಮಣ್ಯತೀರ್ಥರು ಹಾಗೂ ಶ್ರೀವ್ಯಾಸರಾಜರ ನಮನದಿಂದ ಪ್ರಾರಂಭವಾಗುವ ಈ ಕೃತಿಯು ನೇರವಾಗಿ ಬ್ರಹ್ಮಣ್ಯತೀರ್ಥರ ಅವತಾರ ಪ್ರಸಂಗವನ್ನು ವಿವರಿಸುತ್ತದೆ.

ಕಾವೇರಿ ತೀರದಲ್ಲಿರುವ ನರಹರಿಕ್ಷೇತ್ರದಲ್ಲಿ ಪೂಗಾರಾಮ ಕುಲದಲ್ಲಿ ಹುಟ್ಟಿದ ರಾಮಾಚಾರ್ಯ ದಂಪತಿಗಳಿಗೆ ಶ್ರೀನೃಸಿಂಹಪ್ರಸಾದದಿಂದ ಸೂರ್ಯನಂತೆ ಪ್ರಕಾಶಮಾನನಾದ, ಸೂರ್ಯಾಂಶಸಂಭೂತನಾದ, ಮಂಗಳಸ್ವರೂಪನಾದ ಮಗನು ಹುಟ್ಟಿದನು. ನರಸಿಂಹನೆಂದು ನಾಮಾಂಕಿತನಾದ ಆ ಮಗುವಿಗೆ ಎಂಟನೆಯ ವಯಸ್ಸಿನಲ್ಲಿ ಉಪನಯನವಾಗಿ ಶ್ರೀಪುರುಷೋತ್ತಮತೀರ್ಥರಲ್ಲಿ ವಾಸ ಹಾಗೂ ವಿದ್ಯಾಭ್ಯಾಸ. ಅನಂತರ ಪರಮಹಂಸಾಶ್ರಮ ಸ್ವೀಕಾರ, ಶ್ರೀನರಹರಿ ಪ್ರತಿಮಾಪೂಜನ, ದಿಗ್ವಿಜಯ ಸಂಚಾರ, ವಾದಿವಿಜಯ, ಸಜ್ಜನೋದ್ಧಾರ, ಮಧ್ವಮತಪ್ರಚಾರ - ಇವೇ ಮೊದಲಾದ ಘಟನೆಗಳನ್ನು ಈ ಲಘುಕಾವ್ಯವು ನಿರೂಪಿಸುತ್ತದೆ.

ಆಬ್ಬೂರಿನಲ್ಲಿ ಶ್ರೀಬ್ರಹ್ಮಣ್ಯತೀರ್ಥರು ವಾಸವಾಗಿದ್ದ ಸಮಯದಲ್ಲಿ ಒಂದೊಮ್ಮೆ ಷಾಷ್ಟಿಕ ಕುಲೋತ್ಪನ್ನನಾದ ಓರ್ವ ಬ್ರಾಹ್ಮಣನು ಭಾರ್ಯಾಸಮೇತನಾಗಿ ಗಂಗಾಯಾತ್ರೆಗೆ ಹೊರಟು ಜ್ವರದಿಂದ ಮೃತನಾಗುತ್ತಿರಲು ಆ ಭಾರ್ಯೆ ದುಃಖಿತಳಾಗಿ ಶ್ರೀಬ್ರಹ್ಮಣ್ಯತೀರ್ಥರ ಅಡಿದಾವರೆಗಳಿಗೆ ಎರಗಿದಾಗ ಶ್ರೀಗಳು ದೀರ್ಘಸುಮಂಗಲಿಯಾಗುವಂತೆ ಆಶೀರ್ವಾದ ಮಾಡುತ್ತಾರೆ. ನಿನ್ನ ಪತಿಯು ನೂರು ವರ್ಷ ಜೀವಿಸಿರುವನು. ನೀನು ಇಬ್ಬರು ಪುತ್ರರನ್ನು ಪಡೆಯುವಿ. ಅದರಲ್ಲಿ ಮೊದಲನೆಯವನನ್ನು ಭೂಸ್ಪರ್ಶವಿಲ್ಲದೆ ನನಗೆ ಕೊಡು ಎಂದು ಹೇಳಿ ಅಭಿಮಂತ್ರಿತವಾದ ಜಲವನ್ನು ಅಕೆಗೆ ಕೊಡುತ್ತಾರೆ. ಆ ಜಲವನ್ನು ತಂದು ಆ

ಸಾಧ್ವಿಯು ತನ್ನ ಪತಿಯ ದೇಹಕ್ಕೆ ಪ್ರೋಕ್ಷಿಸಿದಾಗ ಕೂಡಲೇ ಆ ಪತಿಯು ಜೀವಿತನಾಗುವನು. ಹೀಗೆ ಗುರುಗಳ ಅನುಗ್ರಹದಿಂದ ಆ ಸಾಧ್ವೀ ಗರ್ಭವತಿಯಾಗಿ ಒಂದು ಮಗುವಿಗೆ ಜನ್ಮ ನೀಡುವಳು. ಆಕೆಯ ಪ್ರಸೂತಿ ಸಮಯವನ್ನು ತಮ್ಮ ದಿವ್ಯದೃಷ್ಟಿಯಿಂದ ಬಲ್ಲ ಗುರುಗಳು ತಮ್ಮ ಶಿಷ್ಯರುಗಳ ಮೂಲಕ ಆ ಶಿಶುವನ್ನು ಸ್ವರ್ಣಪಾತ್ರೆಯಲ್ಲಿ ಇರಿಸಿ ಮಠಕ್ಕೆ ತರಿಸುತ್ತಾರೆ. ಸ್ವಹಸ್ತದಿಂದಲೇ ಆ ಶಿಶುವನ್ನು ಕಣ್ವ ನದೀ ಜಲದಿಂದ ತೊಳೆಯುತ್ತಾರೆ. ಮಧ್ವಮತಾನುಯಾಯಿಗಳೆಲ್ಲರಿಗೂ ಪ್ರಕೃಷ್ಟವಾದ ಸಂತೋಷವನ್ನುಂಟು- ಮಾಡಲು ಸಾಕ್ಷಾತ್ ಪ್ರಹ್ಲಾದರಾಜರೇ ಅವತರಿಸಿ ಬಂದಿರುವರೆಂದು ಶ್ರೀಗಳು ತಿಳಿಯುತ್ತ ಆ ಶಿಶುವನ್ನು ಪೋಷಣೆ ಮಾಡುತ್ತ, ವಿಪ್ರರಿಂದ ಉಪನಯನ ಮಾಡಿಸಿ, ಏಳನೆಯ ವಯಸ್ಸಿನಲ್ಲಿ ಪರಮಹಂಸಾಶ್ರಮವನ್ನು ನೀಡುತ್ತಾರೆ, ಅವರೇ ಶ್ರೀವ್ಯಾಸತೀರ್ಥರು.

ಶ್ರೀಬ್ರಹ್ಮಣ್ಯತೀರ್ಥರು ತಮ್ಮ ಚಿಕ್ಕಮ್ಮನ ಮಕ್ಕಳಾಗಿದ್ದ ಶ್ರೀಪಾದರಾಜರಲ್ಲಿ ವಿದ್ಯಾವ್ಯಾಸಂಗಕ್ಕೋಸ್ಕರ ವ್ಯಾಸರಾಜರನ್ನು ಕಳುಹಿಸಿಕೊಡುತ್ತಾರೆ.

ಆಬ್ಬೂರಿನಲ್ಲಿ ಬ್ರಾಹ್ಮಣರೂಪಿಯಾದ ಹರಿಯಿಂದ ಸ್ವಪ್ನಚೋದಿತರಾಗಿ ಭೂಮಿಯಲ್ಲಿ ಹೂತೂಹೋಗಿದ್ದ ವಿಠ್ಠಲನ ವಿಗ್ರಹವನ್ನು ತೆಗೆಸಿ, ಆ ವಿಠ್ಠಲಮೂರ್ತಿಯನ್ನು ಪೂಜಿಸುತ್ತ ಶ್ರೀಗಳು ಶಿಷ್ಯರೊಂದಿಗೆ ಸಂಚಾರ ಮಾಡುತ್ತ ಅನಾವೃಷ್ಟಿಪೀಡಿತರಾದ ಜನರ ವಿಜ್ಞಾಪನೆಯಂತೆ ಸುವೃಷ್ಟಿಯುಂಟಾಗುವಂತೆ ಮಾಡುತ್ತಾರೆ.

ಹೀಗೆ ಅನೇಕ ಮಹಿಮೆಯನ್ನು ತೋರಿದ, ಭಜಕರಿಗೆ ಕಾಮಿತಪ್ರದರಾದ ಶ್ರೀಬ್ರಹ್ಮಣ್ಯಯತಿಪುಂಗವರು ಶ್ರೀವ್ಯಾಸರಾಜರನ್ನು ವೇದಾಂತಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರನ್ನಾಗಿಸಿ ವೈಶಾಖ ಕೃಷ್ಣಪಕ್ಷ ಏಕಾದಶಿಯಂದು ಶ್ರೀಬ್ರಹ್ಮಣ್ಯತೀರ್ಥರು ಹರಿಯ ಪದವನ್ನು ಅಲಂಕರಿಸಲು ತಮ್ಮ ಸ್ವರೂಪದಲ್ಲಿ ಲೀನರಾದರು.

ಹೀಗೆ ಶ್ರೀಬ್ರಹ್ಮಣ್ಯತೀರ್ಥರ ಅಗಾಧ ತಪೋಮಹಿಮೆಗಳೊಂದಿಗೆ ಮುಕ್ತಾಯಗೊಳ್ಳುವ ಈ ಕೃತಿಯ ಅಂತ್ಯದಲ್ಲಿ ಈ ಕೃತಿಯ ಪಠಣ ಹಾಗೂ ಗುರುರಾಜರ ಬೃಂದಾವನದ ಅನೇಕ ವಿಧವಾದ ಸೇವೆ ಇವುಗಳ ಫಲವನ್ನು ಶ್ರೀಶ್ರೀನಿವಾಸತೀರ್ಥರು ಹೇಳಿರುವರು. 'ಬ್ರಹ್ಮಣ್ಯತೀರ್ಥಾಯ ನಮಃ' ಎಂಬ ಅಷ್ಟಾಕ್ಷರ ಮಂತ್ರದಿಂದ ದುರ್ಲಭವಾದುದು ಯಾವುದೂ ಇಲ್ಲ.

ಈ ಮಂತ್ರ ಜಪದಿಂದ ಸಕಲ ಅನಿಷ್ಟಗಳ ನಿವಾರಣೆಯನ್ನು ಹೇಳಲಾಗಿದೆ. ಅವರ ಸೇವೆಯಿಂದ ರೋಗಿಯು ರೋಗರಹಿತನಾಗುವನು ಅಪುತ್ರನು ಪುತ್ರವಂತನಾಗುವನು. ಯಾರ್ಯಾರು ಏನೇನು ಬಯಸುವರೋ ಅವುಗಳೆಲ್ಲವೂ ಶ್ರೀಗುರುರಾಜರ ಅನುಗ್ರಹದಿಂದ ಪೂರೈಯುವವೆಂದು ಈ ವಿಜಯದ ಕೊನೆಯಲ್ಲಿ ವರ್ಣಿಸಲಾಗಿದೆ.

ಕೊನೆಯಲ್ಲಿ ಶ್ರೀಗುರುರಾಜರ ವೃಂದಾವನವನ್ನು ಪೂಜಿಸುವ ವಿಧಾನವೆನ್ನೂ ಸಹ ಇಲ್ಲಿ ಶ್ರೀನಿವಾಸತೀರ್ಥರು ತೋರಿಸಿಕೊಟ್ಟಿದ್ದಾರೆ. ಇಂತಹ ಸ್ತೋತ್ರಪಠಣದಿಂದ ಗುರು-ಕಾರುಣ್ಯವನ್ನು ಪಡೆದು ಅಭೀಷ್ಟವಾದದ್ದನ್ನು ಹೊಂದಬಹುದು.

◆ ◆

ಸಮಚರಣಸರೋಜಂ ಸಾಂದ್ರನೀಲಾಂಬುದಾಂಭಂ ।
ಜಘನನಿಹಿತಪಾಣೇಂ ಮಂಡನಂ ಮಂಡನಾನಾಮ್ ॥
ತರುಣತುಲಸಿಮಾಲಾಕಂಧರಂ ಕಂಜನೇತ್ರಂ ।
ಸದಯಧವಲಹಾಸಂ ವಿಥ್ಠಲಂ ಚಿಂತಯಾಮಿ ॥

◆ ◆

ಶ್ರೀಲೋಲಂ ವಿಥ್ಠಲಂ ನತ್ವಾ ಶ್ರೀಮಧ್ವಮುನಿಪಾನಪಿ ।
ಬ್ರಹ್ಮಣ್ಯಗುರುರಾಜಂ ಚ ವ್ಯಾಸರಾಜಂ ಚ ಸೌಮ್ಯಹಮ್ ॥ ೧ ॥

ಬ್ರಹ್ಮಣ್ಯಗುರುರಾಜಸ್ಯ ವಿಜಯಂ ತತ ಪಾಬಲಾತ್ ।
ರಚಯಾಮಿ ಮನಶ್ಶುದ್ಧ್ಯೈ ಸತಾಂ ಪ್ರೀತ್ಯೈ ಗುರೋರ್ಮುದೇ ॥ ೨ ॥

ಅಲ್ಪಜ್ಞೋನಾಪಿ ಕೌತುಕಾದ್ವರ್ಣಿತಂ ಚರಿತಂ ಗುರೋಃ ।
ತನ್ಮಹಿಮ್ನೈವ ಕೃತಿನಾಂ ಕಂಠಮಾಲ್ಯಂ ಭವೇದ್ಧ್ರುವಮ್ ॥ ೩ ॥

ಭೂಮೌ ಭಾರತಖಂಡೇಽತ್ರ ಚೋಲಭೂಜನನೀ ಧುನೀ ।
ಮರುದ್ವೃಧಾಭಿಧಾಭಾತಿ ಸ್ವರ್ಧುನೀವಾಘನಾಶಿನೀ ॥ ೪ ॥

ತತ್ತೀರೇ ನೃಹರೇಃಕ್ಷೇತ್ರೇ ನೃಸಿಂಹಸ್ವರ್ದ್ರುಮಂ ದ್ವಿಜಃ ।
ಪಾದಪ್ರಪನ್ನದೇಯೇಷ್ಟಫಲಭಾರನತಂ ಶ್ರಿತಃ ॥ ೫ ॥

ಸ ತು ರಾಮಾಚಾರ್ಯನಾಮಾ ಪೂಗಾರಾಮಕುಲೋದ್ಭವಃ ।
ಶ್ರೀನೃಸಿಂಹಪ್ರಸಾದೇನ ಸಭಾರ್ಯೋಽಲಭತಾತ್ಮಜಮ್ ॥ ೬ ॥

ಭಾಸ್ವಂತಮಿವ ಭಾಂತಂ ತಂ ಭಾಸ್ಕರಾಂಶಂ ಶುಭಾಕೃತಿಮ್ ।
ನೃಸಿಂಹವರಲಬ್ಧಂ ಶ್ರೀನೃಸಿಂಹಾಖ್ಯಂ ಪಿತಾಽಕರೋತ್ ॥ ೭ ॥

ಗಭಾಷ್ಟಮೇಽಬ್ದೇ ಪೋತಂ ತಮುಪನೀಯ ದ್ವಿಜೋತ್ತಮಃ ।
ಪುರುಷೋತ್ತಮತೀರ್ಥಾರ್ಯನಿಕಟಂ ಪ್ರಾಹಿಣೋದ್ವಟುಮ್ ॥ ೮ ॥

ಸ್ವತಃಸಂಪ್ರಾಪ್ತವಿದ್ಯಾಯ ಗುರೂಣಾಮುಪದೇಶನಮ್ ।
ಶಿಷ್ಟಾಚಾರಾವನಾಯಾಭೂದನ್ಯತೋ ನ ರವೇರ್ಹಿ ಭಾಃ ॥ ೯ ॥

ವಿರಕ್ತೌ ಸನಕೋ ಬಾಲಃಪ್ರಜ್ಞಾಯಾಂ ಸ ಬೃಹಸ್ಪತಿಃ ।
ಪರಿಭಕ್ತೌ ಶುಕಾಚಾರ್ಯ ಇತಿ ಮೇನೇ ಗುರುರ್ವಟುಮ್ ॥ ೧೦ ॥

ಸ್ವಪ್ನೇ ತು ತವ ಶಿಷ್ಯೋಽಯಂ ಭವಿತೇತಿ ದ್ವಿಜಾತ್ಮನಾ ।
ಬೋಧಿತೋ ಗುರುವರ್ಯೋಽಮುಂ ಪಿತ್ರಾಜ್ಞಪ್ತಂ ವ್ಯಧಾದ್ಯತಿಮ್ ॥ ೧೧ ॥

ಆಬಾಲ್ಯಾದ್ಬ್ರಾಹ್ಮಣೋಭೋಽಸೌ ದಯಾಲುರಿತಿ ಮೌನಿನಾ ।
ಬ್ರಹ್ಮಣ್ಯತೀರ್ಥನಾಮ್ನಾ ಹಿ ಸಮಾಖ್ಯಾತೋ ರವಿದ್ಯುತಿಃ ॥ ೧೨ ॥

ಶ್ರೀಮದ್ವರಯತಿಪಸ್ತಾಬ್ಜಸೇವಿತಾಂ ತತ್ಕುಲಕ್ರಮಾತ್ ।
ತಚ್ಛಿಷ್ಯಪೂಜಿತಾಂ ಶ್ರೀಮಜ್ಜಯಧ್ವಜಗುರೂತ್ತಮೈಃ ॥ ೧೩ ॥

ಸ್ವಸ್ಮೈ ಪ್ರದತ್ತಾಂ ಗುರುರಾಣ್ನೃಸಿಂಹಪ್ರತಿಮಾಂ ತಥಾ ।
ಸಂಸ್ಥಾನಸ್ಯಾಽಧಿಪತ್ಯಂ ಚ ಬ್ರಹ್ಮಣ್ಯಯತಯೇ ದದೌ ॥ ೧೪ ॥

ಪುರುಷೋತ್ತಮಾರ್ಯಯತಿರಾಟ್ ಪ್ರವಿವೇಶ ಗುಹಾಂ ತತಃ ।
ಪುರುಷೋತ್ತಮಗುರೋತ್ಯೇವ ನಾಮ್ನಾ ಖ್ಯಾತಾಽಧುನಾಪಿ ಸಾ ॥ ೧೫ ॥

ಬ್ರಹ್ಮಣ್ಯಯತಿರಾಜೇಂದ್ರಪ್ರಭಾವಭಿದುರೇಣ ಹಿ ।
ಜನತಾಘಾದ್ರಿವೃಂದಾನಿ ಭಿಂದಾನೋ ವ್ಯಚರತ್ತತಃ ॥ ೧೬ ॥

ಜ್ಞಾನಮಂಡಪಭಾಗಸ್ಥ ಕಣ್ವನದ್ಯಾಃ ಸಮೀಪಗಮ್ ।
ಆಬ್ಜೂರುಕ್ಷೇತ್ರಮಾಸಾದ್ಯ ಸ್ವಮಸದ್ಯತಿರಾಟ್ ತತಃ ॥ ೧೭ ॥

ನಿಮಜ್ಜನ್ ಕಣ್ವಸರಿತಿ ತ್ರಿಕಾಲಂ ಪ್ರಣವಂ ಜಪನ್ ।
ಬೋಧಯನ್ಮಧ್ವಸಿದ್ಧಾಂತಮರ್ಚಯನ್ನೃಹರಿಂ ಸದಾ ॥ ೧೮ ॥

ಶಿಷ್ಯೇಣಾನೀತಪಕ್ವಾನ್ನಂ ಪಾತ್ರಸಂಸ್ಥಂ ಮಹಾಮುನಿಃ ।
ಶಂಖೋದಕಪ್ರೋಕ್ಷಣೇನ ಪುನಸ್ತಪ್ತಂ ವಿಧಾಯ ತತ್ ॥ ೧೯ ॥

ಶ್ರೀನೃಸಿಂಹಾಯಾರ್ಪಯಿತ್ವಾ ಸ ಭುಂಕ್ತೇ ಸಹ ಶಿಷ್ಯಕೈಃ ।
ತದಾತ್ವೇ ಜಾತು ವಿಪ್ರೇಂದ್ರಃ ಷಷ್ಠಿವಂಶಧರೋ ಧನೀ ॥ ೨೦ ॥

ಮರುದ್ವೃಧಾತೀರಗತಃ ಸಭಾರ್ಯೋ ನಿರ್ಗತೋ ಗೃಹಾತ್ ।
ಗಂಗಾಂ ಗಂತುಂ ಕೃತಸ್ವಾಂತಃ ಜ್ವರಾಂತಕಪತೋ ಮೃತಃ ॥ ೨೧ ॥

ಸತೀಗತಿಂ ಗಂತುಕಾಮಾ ಪತ್ಯಾ ಸಹ ಗತಿಂ ದ್ವಿಜಾನ್ ।
ಪತಿವ್ರತಾ ಯಯಾಚೇ ತಾಂ ಪ್ರೈಷಯಂಸ್ತೇ ಗುರುಂ ಪ್ರತಿ ॥ ೨೨ ॥

ಬ್ರಹ್ಮಣ್ಯಯತಿರಾಜಂ ಸಾ ಪ್ರಾಣಮದ್ದುಃಖಿಕರ್ಶಿತಾ ।
ಸರ್ವಂ ವಿದನ್ ಸತ್ಯವಾದೀ ತಾಂ ಸಾಧ್ವೀಮವದತ್ಕಿಲ ॥ ೨೩ ॥

ಸುಧೀರ್ಭಮಂಗಲೀ ಭೂಯಾ ಇತಿ ಸಾ ವಿಸ್ಮಿತಾ ತತಃ ।
ಪತಿಂ ಮೃತಂ ಶ್ರಾವಯಂತೀ ಜಗದೇ ಮುನಿನಾ ಪುನಃ ॥ ೨೪ ॥

ಮಾ ಭೈಷೀಃ ಸಾಧ್ವಿ ಭದ್ರಂ ತೇ ಜೀವತ್ಯಬ್ದಶತಂ ಪತಿಃ ।
ದ್ವೌ ಪುತ್ರೌ ಲಪ್ಸ್ಯಸೇ ಪೂರ್ವಂ ದೇಹಿ ಮೇಽಸ್ಪೃಷ್ಟಭೂತಲಮ್ ॥ ೨೫ ॥

ಇತಿ ಚಿತ್ರಚರಿತ್ರೋಽಸೌ ವದನ್ ಜಘ್ನೋದಕಂ ದದೌ ।
ದ್ರುತಮಾದಾಯ ಸುದತೀ ದಯಿತಂ ಪ್ರೋಕ್ಷಯಜ್ಜಲೈಃ ॥ ೨೬ ॥

ತತ್ಷಣಾಜ್ಜೀವಿತಃ ಕಾಂತಃ ಕಾಂತಯಾಗಾತ್ಸುರಾಪಗಾಮ್ ।
ಗುರೋಃ ಪ್ರಸಾದಾತ್ಕಾಲೇನ ಸತೀ ಗರ್ಭಂ ಬಭಾರ ಹಿ ॥ ೨೭ ॥

ಪ್ರಸೂತಿಸಮಯಂ ಜ್ಞಾನನ್ ದಿವ್ಯಚಕ್ಷುಃ ಸ್ವಶಿಷ್ಯಕೈಃ ।
ಸ್ವರ್ಣಪಾತ್ರಧೃತಂ ಪೂತಮಾನಯಾಮಾಸ ಸನ್ನಿಧಿಮ್ ॥ ೨೮ ॥

ಸ್ವಪಾಣಿಕಮಲೇನಾಲಂ ಬಾಲಂ ಕಣ್ವನದೀಜಲೈಃ ।
ಕ್ಷಾಲಯಾಮಾಸ ಯತ್ರಾಸೌ ಖ್ಯಾತಃಶ್ವೇತಶಿಲಾಪ್ರದಃ ॥ ೨೯ ॥

ಪ್ರಹ್ಲಾದನಾಯ ಮಾಧ್ವಾನಾಂ ಪ್ರಹ್ಲಾದೋಽಯಂ ಧರಾಂ ಗತಃ ।
ಇತ್ಯಾಹ್ಲಾದಿತಚಿತ್ತೋಽಯಂ ರರಕ್ಷ ಗಿರಿಗಹ್ವರೇ ॥ ೩೦ ॥

ಪಂಚಮೇಽಬ್ದೇ ತತ್ರ ವಿಪ್ರೈರುಪನೀತಂ ಚ ಸಪ್ತಮೇ ।
ಸನ್ಯಾಸಭಾಗಿನಂ ತೋಷಾದ್ಯಾಸನಾಮಾನಮಾತನೋತ್ ॥ ೩೧ ॥

ತಂ ವ್ಯಾಸತೀರ್ಥಂ ವಿದ್ಯಾರ್ಥಂ ಸ್ವಮಾತುರ್ಭಗಿನೀಸುತಮ್ ।
ಶ್ರೀಪಾದರಾಜನಾಮಾನಂ ಪ್ರಾಪಯದ್ಗುರುಪುಂಗವಃ ॥ ೩೨ ॥

ಅಬ್ಬೂರುಕ್ಷೇತ್ರ ವಿವಾಸೌ ಭೂಮೌ ಲೀನತನುಂ ಹರಿಮ್ ।
ವಿಶ್ಕಲಂ ಲಬ್ಧವಾನ್ ಸ್ವಪ್ನೇ ವಿಪ್ರಾತ್ಮ ಹರಿಚೋದಿತಃ ॥ ೩೩ ॥

ವ್ಯಾಸರಾಜೇನ ವಿದ್ಯಾಯಾಂ ವ್ಯಾಸೋಪಮಧಿಯಾ ಯುತಃ ।
ಸಂಚರನ್ಸಂಚನೀಯೋಽಯಮಂಚಯತ್ ತರಂ ಚ ವಿಶ್ಕಲಮ್ ॥ ೩೪ ॥

ಗಾಹಂ ಗಾಹಂ ತೀರ್ಥಸಾರ್ಥಂ ದರ್ಶಂ ದರ್ಶಮಜಂ ಭಜನ್ ।
ಜೇಯಂ ಜೇಯಂ ವಾದಿವಾದಂ ಧ್ಯೇಯಂ ಧ್ಯಾಯನ್ನಮನ್ಯುನಿಃ ॥ ೩೫ ॥

ಕರ್ಣಾಟರಾಜಧಾನೀಂ ಸ ವರ್ಣ್ಯಾಂ ಪ್ರಾಪ್ಯ ಸುರಾಲಯೇ ।
ಸ್ವರ್ಣಪೀಠೇಽರ್ಚಯದ್ದೇವಮರ್ಕೋಽಜಾಯತಲೋಚನಃ ॥ ೩೬ ॥

ಅನಾವೃಷ್ಟ್ಯಾರ್ದಿತಾಸ್ತತ್ರ ಮುನಿಶ್ರೇಷ್ಠಂ ನ್ಯವೇದಯನ್ ।
ಕೃಪಾದೃಷ್ಟ್ಯಾವಲೋಕ್ಯಾಸ್ಮಾನ್ ಪಾಹಿ ವೃಷ್ಟ್ಯೇತ್ಯಥಾನಮನ್ ॥ ೩೭ ॥

ಇತ್ಯರ್ಥಿತಃ ಸಂಯಮೀಂದ್ರಃ ಸ್ವೇರಿತಚ್ಛಾತ್ರಮಂತ್ರತಃ ।
ಪೌರಸ್ಯಮಪುಷ್ಣತ್ತುಃ ಕೃಪಾದೃಷ್ಟ್ಯಾಭಿವೃಷ್ಟಿಭಿಃ ॥ ೩೮ ॥

ತತಃಪ್ರಾತಃಪೌರವಾರಃಪ್ರಮೋದಭರಪೀಡಿತಃ ।
ಇಷ್ಟಯೇತುಂ ಯತಂ ದ್ರಷ್ಟುಮಾಗತ್ಯ ನ ಹಿ ದೃಷ್ಟವಾನ್ ॥ ೩೯ ॥

ಶ್ರುತ್ವೋದಂತಮಿಲಾಕಾಂತಃ ಸ್ವಾಂತೇ ಸಂತೋಷವಾನ್ ಸ್ವಕೈಃ ।
ಜ್ಞಾನಮಂಡಪದೇಶಸ್ಥೋಽನಜ್ಞೀತ್ ಗುರುಪುಂಗವಾನ್ ॥ ೪೦ ॥

ನಿರ್ಬಧ್ಯ ಗ್ರಾಮಮೇಕಂ ತು ದಾಪಯಾಮಾಸ ಭಿಕ್ಷವೇ ।
ಶ್ರೀಮದ್ವೈಷ್ಣವಸಿದ್ಧಾಂತಸ್ಥಾಪಕಾಯ ಮಹಾತ್ಮನೇ ॥ ೪೧ ॥

ವ್ಯಾಖ್ಯಾತಾಖಿಲಶಾಸ್ತ್ರಾಯ ಜ್ಞಾನವೈರಾಗ್ಯಶಾಲಿನೇ ।
ಪರಿವ್ರಾಜಕವರ್ಯಾಯ ಶಾಂತಿದಾಂತಿಯುತಾಯ ವೈ ॥ ೪೨ ॥

ಬ್ರಹ್ಮಣ್ಯತೀರ್ಥಶಿಷ್ಯಾಯ ವ್ಯಾಸರಾಜಾಯ ಧೀಮತೇ ।
ಗೃಹೀತ್ವಾ ಯತಿರಾಟ್ ಗ್ರಾಮಂ ಬ್ರಾಹ್ಮಣೇಭ್ಯೋ ದದೌ ಕ್ರಮಾತ್ ॥ ೪೩ ॥

ಸ ಗ್ರಾಮೋ ರಾಮಗಿರ್ಯಾಖ್ಯಮಂಡಲಾಂತರ್ಗತಃಫಲೀ ।
ಬ್ರಹ್ಮಣ್ಯಪುರನಾಮ್ನಾಽಸ್ತಿ ಪ್ರಖ್ಯಾತೋಽದ್ಯಾಪಿ ಭೂತಲೇ ॥ ೪೪ ॥

ಭೂಮೌ ವಾಸಮಲಂಕುರ್ವನ್ನಲಂಕರ್ತುಂ ಹರೇಃಪದಮ್ ।
ವೇದಾಂತರಾಜ್ಯಭೂಪಾಲಂ ಸ್ವಶಿಷ್ಯಮಕರೋತ್ತದಾ ॥ ೪೫ ॥

ವೈಶಾಖಿಕೃಷ್ಣಪಕ್ಷೇಽಸಾವೇಕಾದಶ್ಯಾಂ ಗುರೂತ್ತಮಃ ।
ನಭೋಮಧ್ಯಗತೇಽರ್ಯಮ್ಣಿ ಸ್ವರೂಪೇಽಲೀಯತ ಪ್ರಭುಃ ॥ ೪೬ ॥

ಅಬ್ಬೂರುಕ್ಷೇತ್ರಭಾಗೇಽಪಿ ಭಜತಾಂ ಕಾಮಿತಪ್ರದಃ ।
ಬ್ರಹ್ಮಣ್ಯಗುರುರಧ್ಯಾಸ್ತೇ ವೃಂದಾವನಮಿಹಾಂಶತಃ ॥ ೪೭ ॥

ವೃಂದಾವನಾಂತರಗತೋ ಬ್ರಹ್ಮಣ್ಯಗುರುರಾಡಿಹ ।
ಯಾವದ್ದದಾತಿ ಭಕ್ತೇಭ್ಯಸ್ತಾವನ್ನೈವ ಸುರದ್ರುಮಃ ॥ ೪೮ ॥

ತತ್ಸೇವನಾಚ್ಚರೇತ್ಪಂಗುಃಖಿಂಜಶ್ಚ ಕರವಾನ್ಭವೇತ್ ।
ಕುಷ್ಠೀ ಕುಷ್ಠವಿಹೀನಃಸ್ಯಾದ್ಬಧಿರಃಶೃಣುಯಾತ್ಸುಖಿಮ್ ॥ ೪೯ ॥

ಮೂರ್ಖಾಲುಃಸಂತ್ಯಜೇನ್ಮೂರ್ಖಮನಪತ್ಯೋಽಪಿ ಪುತ್ರವಾನ್ ।
ಯೇ ಯೇ ವಾಂಛಂತಿ ಯಂ ಕಾಮಂ ತೇ ತೇ ತಂ ತಂ ಸಮಾಪ್ನುಯುಃ ॥ ೫೦ ॥

"ಬ್ರಹ್ಮಣ್ಯತೀರ್ಥಾಯ ನಮಃ" ಇತ್ಯಷ್ಟಾಕ್ಷರಸನ್ಮನುಮ್ ।
ಓಂಕಾರಪೂರ್ವಕಂ ನಿತ್ಯಂ ಜಪತಾಂ ಕಿಂ ನು ದುರ್ಲಭಮ್ ॥ ೫೧ ॥

ಮಂತ್ರೇಣಾನೇನ ಸಂಜಪ್ಯ ತೋಯಪ್ರಕ್ಷೇಪಣಾನ್ನರೇ ।
ಪಿಶಾಚಗ್ರಹಪೀಡಾದಿ ತತ್ಕ್ಷಣಾತ್ಕ್ಷೀಯತೇ ಧ್ರುವಮ್ ॥ ೫೨ ॥

ಯಃಪುನರ್ಗುರುವರ್ಯಂ ತಂ ಕ್ಷೀರಾಜ್ಯದಧಿಪೂರ್ವಕೈಃ ।
ಸ್ನಾಪಯೇದ್ವಿಷ್ಣುನೈವೇದ್ಯೈರರ್ಚಯೇಲ್ಲಭತೇಽಖಿಲಮ್ ॥ ೫೩ ॥

ದೀಪಾಲಿಂ ಸ್ಥಾಪಯನ್ನಗ್ರೇ ಸ ಹರೌ ದೃಢಭಕ್ತಿಮಾನ್ ।
ಹರಿಪ್ರಸಾದಪಾತ್ರಂ ಸ್ಯಾತ್ ಸಾಕ್ಷಾತ್ರತ್ರ ನೃಹರಿಃಪರಃ ॥ ೫೪ ॥

ಪ್ರತ್ಯೂಷೇ ಸೇವಕಃಸ್ನಾಯಾಜ್ಜಪೇತ್ತನ್ಮಂತ್ರಮುತ್ತಮಮ್ ।
ಪ್ರದಕ್ಷಿಣಾನಮಸ್ಕಾರಾನ್ ಕುರ್ಯಾತ್ತಚ್ಚರಿತಂ ಪಠೇತ್ ॥ ೫೫ ॥

ಮಧ್ಯಾಹ್ನೇಽಪಿ ಪುನಃಸ್ನಾಯಾದ್ಭುಂಜೀತಾರ್ಪಿತಮೇವ ಸಃ ।
ಪುನರ್ನಮೇದ್ಭಜೇದ್ಧ್ಯಾಯೇನ್ನಿಶಿ ಸ್ನಾಯಾದ್ಗುರುಂ ಭಜೇತ್ ॥ ೫೬ ॥

ಏವಂ ಕ್ರಮೇಣ ರೋಗಾರ್ತಃ ಪರಂ ಭಕ್ತ್ಯಾ ನಿಷೇವತೇ ।
ಅಚಿರಾಲ್ಲಭತೇ ಕಾಮಂ ಗುರುಕಾರುಣ್ಯಸಾಧಿತಮ್ ॥ ೫೭ ॥

ಇತಿ ಬ್ರಹ್ಮಣ್ಯತೀರ್ಥಾನಾಂ ಚರಿತ್ರಮಣಿಮಾಲಿಕಾ ।
ಗ್ರಥಿತಾ ಶ್ರೀನಿವಾಸೇನ ಹರಿಪಾದಾಂಬುಜೇಽರ್ಪಿತಾ ॥ ೫೮ ॥

॥ ಇತಿ ಶ್ರೀಮದ್ವ್ಯಾಸರಾಜಗುರುಬ್ರಹ್ಮಣ್ಯತೀರ್ಥಗುರುರಾಜವಿಜಯಃ ಸಮಾಪ್ತಃ ॥

✡ ✡ ✡

ಶ್ರೀಬ್ರಹ್ಮಣ್ಯತೀರ್ಥಮಂಗಳಾಷ್ಟಕಮ್

◆ ◆

ಪ್ರಾತಃಸ್ಮರಣೆಯಲ್ಲಿ ಹಾಗೂ ವಿವಾಹ, ಉಪನಯನವೇ ಮೊದಲಾದ ಶುಭ-ಪ್ರಸಂಗಗಳಲ್ಲಿ ಮಂಗಳಾಷ್ಟಕವು ಅವಿಭಾಜ್ಯ ಅಂಗವಾಗಿದೆ. ಇಂತಹ ಅನೇಕ ಮಂಗಳಾಷ್ಟಕ-ಗಳನ್ನು ನಾವು ಸ್ತೋತ್ರಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಶ್ರೀಶ್ರೀನಿವಾಸತೀರ್ಥರು ಶ್ರೀಬ್ರಹ್ಮಣ್ಯತೀರ್ಥರ ಅನುಗ್ರಹಾಕಾಂಕ್ಷಿಗಳಿಗೋಸ್ಕರ ಈ ಮಂಗಳಾಷ್ಟಕವನ್ನು ರಚಿಸಿರುವರು. ಮಧುರ ಪದಸಂಯೋಜನೆ, ಸಂಗೀತದ ಹೆಜ್ಜೆಗೆ ಗೆಜ್ಜೆಯನ್ನು ನುಡಿಸುವ ಛಂದಸ್ಸಿನ ನಡೆ, ಭಕ್ತಿಭಾವದ ಮುನ್ನಡೆ ಇವುಗಳು ಈ ಸ್ತೋತ್ರದ ವೈಶಿಷ್ಟ್ಯಗಳು.

ಸೂರ್ಯದೇವನೇ ಬ್ರಹ್ಮಣ್ಯತೀರ್ಥಯತಿರೂಪದಿಂದ ಧರೆಗಿಳಿದು ನೃಸಿಂಹಸೇವಾ-ಸಕ್ತನಾಗಿ ಕಾಮಿತಾರ್ಥಗಳನ್ನೀಯುವ ಚಿಂತಾಮಣಿಯಂತಿರುವ ಇಂತಹ ಯತಿಪುಂಗವರು ನಮಗೆ ಮಂಗಲವನ್ನೀಯಲಿ ಎಂಬ ಮಂಗಲಪ್ರಾರ್ಥನೆಯಿಂದ ಆರಂಭವಾಗುವ ಈ ಅಷ್ಟಕವು ಪ್ರತಿಯೊಂದು ಶ್ಲೋಕದಿಂದಲೂ ಗುರುರಾಜರಿಂದ ಮಂಗಲವನ್ನು ಪ್ರಾರ್ಥಿಸುತ್ತದೆ.

ಸ್ವಯಂ ಪ್ರಕಾಶಸ್ವರೂಪನಾಗಿ ಚಂದ್ರಮನಿಗೆ ಪ್ರಕಾಶವನ್ನಿತ್ತು ಬೆಳಗಿಸುವ ಸೂರ್ಯ-ನಂತೆ ಶ್ರೀಬ್ರಹ್ಮಣ್ಯತೀರ್ಥ ಭಾಸ್ಕರರು ತಾವು ಸ್ವಯಂ ಪ್ರಕಾಶರಾಗಿದ್ದು, ಅನೇಕ ವಿದ್ವಚ್ಚಂದ್ರರಿಗೆ ವಿದ್ವತ್ಪ್ರಕಾಶವನ್ನು ನೀಡಿ ಎಲ್ಲೆಡೆಯೂ ವಿದ್ವತ್ಪ್ರಭೆ ಬೆಳಗುವಂತೆ ಮಾಡಿದವರು.

ಇವರ ವ್ಯಾಖ್ಯಾನಸಿಂಹನಾದ ಮಾತ್ರದಿಂದಲೇ ಪರವಾದಿ ಗಜಗಳು ತಮ್ಮ ಗುಹೆಯನ್ನು ಭದ್ರವಾಗಿ ಸೇರುತ್ತಿದ್ದವು. ಅಂತಹ ವಿದ್ವಚ್ಚಕ್ರವರ್ತಿ ಚೂಡಾಮಣಿಗಳಿವರು.

ಇವರ ಕರಕಮಲದಿಂದ ಅನುಗ್ರಹಿತವಾದ ಮಹಾಮಂತ್ರಾಕ್ಷತೆಗಳಿಂದ ದೊರೆಯುವ ಸರ್ವಾಭೀಷ್ಟಗಳು ಕಲ್ಪವೃಕ್ಷದಿಂದಲೂ ದೊರೆಯಲು ಶಕ್ಯವಿಲ್ಲ. ಇವರ ಮೃತ್ತಿಕಾಧಾರಣ, ಕ್ರೂರಗ್ರಹಭಂಜನ, ಇವರು ಅಜ್ಞಾನ ನಾಶಮಾಡುವ ಸೂರ್ಯ, ಸಾಧುಗಳೆಂಬ ಕಮಲ-ಗಳನ್ನರಳಿಸುವ ಚಂದ್ರ, ಸಂಸಾರ ಸಮುದ್ರದ ಅಲೆಗಳ ಹೊಡೆತಕ್ಕೆ ಸಿಕ್ಕಿದ, ಆಶ್ರಯ-ವನ್ನಪೇಕ್ಷಿಸುವ ಸಜ್ಜನರಿಗೆ ತೆಪ್ಪದಿಂದ ದಾಟಿಸುವ ನಾವಿಕ.

ಇವೇ ಮುಂತಾದ ಅಸಾಮಾನ್ಯ ವ್ಯಕ್ತಿತ್ವವನ್ನು ಚಿತ್ರಿಸಿ ಪ್ರಾತಃಕಾಲದಲ್ಲಿ ಶುಭ-ಕಾರ್ಯಗಳಲ್ಲಿ ಇದನ್ನು ಪಠಿಸಿದರೆ ಸರ್ವಾರಿಷ್ಟ ನಿವಾರಣೆಯಾಗಿ ಸರ್ವವೂ ಮಂಗಲಕರ-ವಾಗುವುದೆಂದು ಫಲಶ್ರುತಿಯನ್ನು ಹೇಳುವುದರೊಂದಿಗೆ ಭಕ್ತರಿಗೆ ಸ್ತೋತ್ರಪಠಣದಲ್ಲಿ ಆಸಕ್ತಿಯನ್ನು ಹುಟ್ಟಿಸಿ, ಈ ಸ್ತೋತ್ರವು ಪರಿಸಮಾಪ್ತವಾಗುತ್ತದೆ.

◆ ◆

ಶ್ರೀಮಾನತ್ರ ದಿವಾಕರಃ ಕರುಣಯಾ ಬ್ರಹ್ಮೌಘವಾಂಭಾಕೃತೇ
ಶ್ರೀಮತ್ಯಗ್ರವನಾನ್ವಯಾಯತಿಲಕಾದ್ರಾಮಾರ್ಯವಿಪ್ರೋತ್ತಮಾತ್ ।
ಲಬ್ಧ್ವಾ ಜನ್ಮ ನೃಸಿಂಹಸೇವನರತಃ ಕ್ಷೋಣೀಸುಚಿಂತಾಮಣಿಃ
ಶ್ರೀಬ್ರಹ್ಮಣ್ಯ ಇತೀರಿತಃ ಸ ಭುವಿ ನಃ ಕುರ್ಯಾನ್ನಿರ್ಮಂಗಲಮ್ ॥ ೧ ॥

ಪೂರ್ವಂ ಸುಭ್ರತನುಃಕಲಾನಿಧಿರಸೌ ಲೀಢಸ್ತಮೋ ಜಿಹ್ವಯಾ
ಮಾಲಿನ್ಯಸ್ಯ ವಶೋ ಯದೀಯಯಶಸಾಂ ತ್ರೈಲೋಕ್ಯಗಾನಾಂ ಕರೈಃ ।
ಧಾವಲ್ಯಂ ಪುನರಾಪ್ತವಾನಪಿ ಹಸತ್ಯನ್ಯಪ್ರಭಾಲಾಭತಃ
ಶ್ರೀಬ್ರಹ್ಮಣ್ಯಯತೀಶ್ವರಃ ಸ ಭುವಿ ನಃ ಕುರ್ಯಾತ್ತರಂ ಮಂಗಲಮ್ ॥ ೨ ॥

ಯದ್ವಾದಾಭಿಧಸಿಂಹನಾದಮತುಲಂ ವಾದೀಂದ್ರದಂತಾವಲಾಃ
ಶೃಣ್ವಂತಃ ಕಿಲ ದೂರತೋಽಪಿ ಚಕಿತಾ ದಿಕ್ಕಂದರಂ ಪ್ರಾದ್ರವನ್ ।
ಸೋಽಯಂ ಶ್ರೀಯತಿರಾಜಶೂರಮೃಗರಾಟ್ ವೃಂದಾವನೇ ಸಂಮಸನ್
ಶ್ರೀಬ್ರಹ್ಮಣ್ಯವರಾಭಿಧಃ ಸ ಭುವಿ ನಃ ಕುರ್ಯಾತ್ತರಂ ಮಂಗಲಮ್ ॥ ೩ ॥

ಯಸ್ಯ ಶ್ರೀಕರಪಂಕಜಾದ್ಯುತಮಹಾಮಂತ್ರಾಕ್ಷರೈಃ ಸಾಧಿತಾಃ
ಸರ್ವೇಽಭೀಷ್ಟಚಯಾಃಸುರದ್ರುಮವರೈರ್ದಾತುಂ ನ ಶಕ್ಯಾ ಹಿ ತೇ ।
ಯದ್ವೃಂದಾವನಮೃತ್ತಿಕಾಧೃತಿರಹೋ ಕ್ರೂರಗ್ರಹೋದ್ಭಂಜಿಕಾ
ಶ್ರೀಬ್ರಹ್ಮಣ್ಯಯತೀಶ್ವರಃ ಸ ಭುವಿ ನಃ ಕುರ್ಯಾತ್ತರಂ ಮಂಗಲಮ್ ॥ ೪ ॥

ಶ್ರೀಘಾಸ್ತಾನಪರೋಽಯಮಾಂತರತಮಸ್ತೋಮಸ್ಯ ಸಂಭೇದಕೋ
ಗೋಭಿಶ್ಚಿತ್ರಸುವರ್ಣರಮ್ಯತಮಭಿಃಸಾದ್ಭುಸಂಹರ್ಷಕಃ ।
ಕಿಂಚಾತಿಗ್ಮರುಚಿರ್ಮನುಷ್ಯಸುದೃಶಾಂ ಹರ್ಷೇಣ ದೃಶ್ಯಾಕೃತಿಃ
ಶ್ರೀಬ್ರಹ್ಮಣ್ಯಯತೀಶ್ವರಃ ಸ ಭುವಿ ನಃ ಕುರ್ಯಾತ್ತರಂ ಮಂಗಲಮ್ ॥ ೫ ॥

ಸಂಸಾರಾಂಬುನಿಧೌ ತರಂಗನಿಚಯೈಃಸಂತಾಡಿತಾನಾಂ ಸತಾಂ
ನಿತ್ಯಂ ಪಾರಮಿತಃಪರಂ ಮೃಗಯತಾಮಾಲಂಬನಾಪೇಕ್ಷಿಣಾಮ್ ।
ಜ್ಞಾನಾಭಿಖ್ಯದೃಢೋಡುವೇನ ವಿಲಸನ್ ಸಂತಾರಕೋ ನಾವಿಕಃ
ಶ್ರೀಬ್ರಹ್ಮಣ್ಯಯತೀಶ್ವರಃ ಸ ಭುವಿ ನಃ ಕುರ್ಯಾತ್ತರಂ ಮಂಗಲಮ್ ॥ ೬ ॥

ಯದ್ವೃಂದಾವನಮಿಂದಿರೇಶಕರುಣಾವೃಂದಸ್ಯ ಸಂದಾಯಕಂ
ಮಂದಾರದ್ರುಮವಜ್ಜನೇಷ್ವನಿಚಯಂ ಸಂಪಾದಯತ್ಪಾವನಮ್ ।
ಸಾಂದ್ರಾನಂದಕದಂಬಮೂರ್ತಿರುಚಿರಂ ಸದ್ವೃಂದಸಂಸೇವಿತಂ
ಶ್ರೀಬ್ರಹ್ಮಣ್ಯಯತೀಶ್ವರಃ ಸ ಭುವಿ ನಃ ಕುರ್ಯಾತ್ತರಂ ಮಂಗಲಮ್ ॥ ೭ ॥

ಸೇವ್ಯಾ ಕಣ್ವನದೀಪವಿತ್ರಸಲಿಲಾರಾಮಾಪ್ರಮೇಯೋ ಹರಿಃ
ಕ್ಷೇತ್ರಂ ಜ್ಞಾನಸುಮಂಟಪಾಖ್ಯಮನಿಶಂ ಹ್ಯಬ್ಜೋರುನಾಮ್ನ್ಯಸ್ತಿ ಯತ್ ।
ತದ್ರಮ್ಯಸ್ಥಲಭೂಷಣಂ ವರಗುರುರ್ವೃಂದಾವನಂ ತದ್ಗತಃ
ಶ್ರೀಬ್ರಹ್ಮಣ್ಯಯತೀಶ್ವರಃ ಸ ಭುವಿ ನಃ ಕುರ್ಯಾತ್ತರಂ ಮಂಗಲಮ್ ॥ ೮ ॥

ಇತ್ಯೇತದ್ವರಮಂಗಲಾಷ್ಟಕಮಿದಂ ಶ್ರೀಶ್ರೀನಿವಾಸೋದಿತಂ
ಸರ್ವಾಭೀಷ್ಟಕರಂ ಪ್ರಭಾತಸಮಯೇ ಭಕ್ತ್ಯಾ ಪಠನ್ ಮಾನವಃ ।
ಮಾಂಗಲ್ಯಾದಿಶುಭಕ್ರಿಯಾಸು ಚ ವದನ್ ಬ್ರಹ್ಮಣ್ಯಕಾರುಣ್ಯತಃ
ಸುಜ್ಞಾನಂ ವಿವಿಧಾರ್ಥಸಿದ್ಧಿಮಪಿ ಸ ಪ್ರಾಪ್ನೋತ್ಯಸೌ ಮಂಗಲಮ್ ॥ ೯ ॥

॥ ಇತಿ ಶ್ರೀಮದ್ವ್ಯಾಸರಾಜಗುರುವರಶ್ರೀಬ್ರಹ್ಮಣ್ಯತೀರ್ಥಗುರುರಾಜಮಂಗಲಾಷ್ಟಕಂ ಸಮಾಪ್ತಮ್ ॥

✡ ✡ ✡

ಪಂಚರತ್ನಮಾಲಿಕಾಸ್ತೋತ್ರಮ್

◆◆

ಶ್ರೀಬ್ರಹ್ಮಣ್ಯತೀರ್ಥರ ಕರಕಮಲಸಮುದ್ಭೂತರಾದ, ಅಗಾಧ ಪಾಂಡಿತ್ಯಪ್ರಭೆಯಿಂದ ಬೆಳಗಿದ, ಸಮಸ್ತ ಲೌಕಿಕ - ವೈದಿಕ ಧರ್ಮಜ್ಞ ಚಕ್ರವರ್ತಿಗಳಿಂದ ಮಾನ್ಯರಾದ, ವಿಜಯನಗರ ಸಾಮ್ರಾಜ್ಯದ ಸಾಮ್ರಾಟರಾದ, ವ್ಯಾಸ-ದಾಸಕೂಟಗಳ ಹರಿಕಾರರಾದ ಶ್ರೀವ್ಯಾಸರಾಜರು ತಮ್ಮ ಗುರುಗಳಲ್ಲಿನ ಅನನ್ಯ ಭಕ್ತಭಾವದಿಂದ ಹೃದಯಾಂತರಾಳದಿಂದ ನುಡಿದ ಸ್ತುತಿ ಈ ಪಂಚರತ್ನಮಾಲಿಕಾಸ್ತೋತ್ರ. ಭಕ್ತ್ಯತಿಶಯದಿಂದ ನಿಸೃತವಾದ ಈ ಸ್ತೋತ್ರವು ಲಲಿತ ಮಧುರ ಹೃದಯಂಗಮವಾದ ಪದವೃಂದಗಳಿಂದ ಶ್ರೀಬ್ರಹ್ಮಣ್ಯತೀರ್ಥರ ಪರಿಚಯವನ್ನು ಮಾಡಿಕೊಡುತ್ತದೆ.

ಶ್ರೀಬ್ರಹ್ಮಣ್ಯತೀರ್ಥರು ಶುಭ್ರತಮಚರಿತರು, ಲಕ್ಷ್ಮೀಸಮೇತ ನಾರಾಯಣನನ್ನು ಸೇವಿಸಿದವರು. ಶಾಂತರು, ದಾಂತರೂ, ಮಹಾತ್ಮರೂ, ಗುರುಗುಣಗಳಾದ ನಿರ್ಮಲಜ್ಞಾನ, ವಾಕ್‌ಸಿದ್ಧಿ, ವಾಕ್‌ಶುದ್ಧಿ, ಮಂತ್ರಸಿದ್ಧಿ, ತಪಸ್ಸು, ಶಾಂತಿ, ದಾಂತಿ, ಉಪರತಿ, ತಿತಿಕ್ಷಾ ಮೊದಲಾದವುಗಳಿಂದ ಭರಿತರೂ, ಯೋಗಿಸಮೂಹಸಮೇತರೂ, ಕಾಮ-ಕ್ರೋಧಾದಿಗಳನ್ನು ಅತಿಕ್ರಮಿಸಿದವರೂ, ಕುಮತಿಗಳ ಸಂಬಂಧರಹಿತರೂ, ದುರ್ಮಾದಿಗಳನ್ನು ಗೆದ್ದವರೂ, ಪಾಪಾಂಬುಧಿಯನ್ನು ದಾಟಿಸುವವರೂ, ಧೀರರೂ, ಭೂಸುರರಿಂದ ಗೀತರೂ, ಸುಜನರಿಂದ ಮಹಿತರೂ, ಶ್ಲಾಘ್ಯವಾದ ಜ್ಞಾನವುಳ್ಳವರೂ, ವಿನೀತರೂ ಆಗಿರುವರು.

ಮದಿಸಿದ ಮಾಯಾವಾದಿಗಜಗಳಿಗೆ ಸಿಂಹಪ್ರಾಯರೂ, ಪ್ರಖ್ಯಾತ ಕೀರ್ತಿವಂತರೂ, ಶ್ರೀವಿಠ್ಠಲಪಾದಕಮಲಭೃಂಗರೂ, ಸರ್ವೇಷ್ಟಪ್ರದಚಿಂತಾಮಣಿಗಳೂ, ಕೃಪಾಕಟಾಕ್ಷ-ಶೋಭಿತರೂ, ಜ್ಞಾನಾದಿಸಂಪತ್ತುಗಳಿಂದ ಪ್ರಕಾಶಮಾನರೂ ಆದ ಶ್ರೀಬ್ರಹ್ಮಣ್ಯತೀರ್ಥರು ಎಲ್ಲ ಅಪಾಯಗಳಿಂದ ಪಾರುಮಾಡಲಿ ಎಂದು ಪ್ರಾರ್ಥಿಸಲಾಗಿದೆ.

ಪರಮಪವಿತ್ರವಾದ ಗುರುವರ ಶ್ರೀಬ್ರಹ್ಮಣ್ಯತೀರ್ಥರ ಬೃಂದಾವನದ ಮಹಿಮೆಯೂ ಅಪಾರವಾದುದು. ಬೃಂದಾವನ ದರ್ಶನ ಮಾತ್ರದಿಂದ ಪಾಪಸಮೂಹವೆಲ್ಲವೂ ಸುಟ್ಟು ಭಸ್ಮವಾಗುತ್ತದೆ. ಅವರ ಬೃಂದಾವನದಲ್ಲಿರುವ ಮೃತ್ತಿಕೆಯು ಭಕ್ತರ ಮಹಾತಾಪಗಳನ್ನು ನಿವಾರಿಸುತ್ತದೆ. ಆರ್ತಭಕ್ತನಿಗೆ ವಿದ್ಯಾಸುಖಿಸಂಪತ್ತುಗಳನ್ನಿತ್ತು ಆನಂದಪಡಿಸುವ ಗುಣ. ಭೂತ-ಪ್ರೇತ-ಪಿಶಾಚಗಳನ್ನೋಡಿಸುವ ಉಜ್ವಲಾಗ್ನಿಕುಂಡ. ಇಂತಹ ಗುರುರಾಜರ ಅನುಗ್ರಹ ಸರ್ವದಾ ತಮ್ಮ ಶ್ರೇಯೋಽಭಿವೃದ್ಧಿಗೆ ಕಾರಣವಾಗಲೆಂದು ಶ್ರೀವ್ಯಾಸರಾಜರು ಪ್ರಾರ್ಥನೆಗೈದಿದ್ದಾರೆ.

ಪ್ರತಿಯೊಬ್ಬರೂ ನಿತ್ಯದಲ್ಲಿಯೂ ಗುರುರಾಜರ ಈ ಸ್ತೋತ್ರಪಠಣ ಮಾಡಿದರೆ ಐಹಿಕ - ಆಮುಷ್ಮಿಕ ಸರ್ವಅಭೀಷ್ಟಗಳೂ ಕರಗತವಾಗುವುದರಲ್ಲಿ ಸಂದೇಹವೇ ಇಲ್ಲ ಎಂಬುದು ಈ ಸ್ತೋತ್ರದ ಅಂತರ್ಯವಾಗಿದೆ.

◆ ◆

ವಂದೇ ಬ್ರಹ್ಮಣ್ಯತೀರ್ಥಂ ಶುಭತಮಚರಿತಂ ಸೇವಿತಂ ಶ್ರೀಸಮೇತಮ್
ಶಾಂತಂ ದಾಂತಂ ಮಹಾಂತಂ ಗುರುಗುಣಭರಿತಂ ಯೋಗಿಸಂಘೈರುಪೇತಮ್ ।
ಕಾಮಕ್ರೋಧಾದ್ಯತೀತಂ ಕುಮತಿಭಿರಜಿತಂ ಕಲ್ಮಷಾಂಭೋಧಿಪೋತಮ್
ಧೀರಂ ಭೂದೇವಗೀತಂ ಶುಭಜನಮಹಿತಂ ಧನ್ಯಮಾನ್ಯಂ ವಿನೀತಮ್ ॥ ೧ ॥

ಮಾದ್ಯನ್ಮಾಯಿಗಜೇಂದ್ರ ಪಂಚವದನಃ ಪ್ರಖ್ಯಾತಕೀರ್ತಿರ್ಮಹಾನ್
ಶ್ರೀಮದ್ವಿಠ್ಠಲಪಾದಪದ್ಮಮಧುಪಃ ಸರ್ವೇಷ್ಟಚಿಂತಾಮಣಿಃ ।
ನಿರ್ಮ್ಯಾಜೋರುದಯಾಕಟಾಕ್ಷಲಸಿತೋ , ಜ್ಞಾನಾದಿಭಾಗ್ಯೋಜ್ಜ್ವಲಃ
ಶ್ರೀಬ್ರಹ್ಮಣ್ಯಯತೀಂದ್ರಮಸ್ತಕಮಣಿಃ ಪಾಯಾದಪಾಯಾತ್ಸ ಮಾಮ್ ॥ ೨ ॥

ಬಿಭ್ರತ್ಕಾಷಾಯಚೇಲಂ ವಿಲಸಿತತುಲಸೀಪಂಕಜಾಕ್ಷಾದಿಮಾಲಮ್
ಧೂತಾಜ್ಞಾನಾಳಜಾಲಂ ಮೃದುವಚನಕಲಂ ಚಾರುಸೌಂದರ್ಯಶೀಲಮ್ ।
ಆರ್ತತ್ರಾಣೈಕಲೋಲಂ ಪ್ರಣತಮುನಿಕುಲಂ ವೈಷ್ಣವಾಗ್ರ್ಯಾಮಕೂಲಮ್
ಬ್ರಹ್ಮಣ್ಯಾರ್ಯಂ ದಯಾಲುಂ ಸ್ಮಿತಮುಖಿಕಮಲಂ ಸಾದರಂ ತಂ ಭಜೇಽಲಮ್ ॥ ೩ ॥

ಯದ್ವೃಂದಾವನದರ್ಶನೇನ ನಿತರಾಂ ಪಾಪಾನಿ ಯಾಂತಿ ಕ್ಷಯಮ್
ಯದ್ವೃಂದಾವನ ಮೃತ್ತಿಕಾ ಸುವಿಧೃತಾ ತಾಪತ್ರಯಧ್ವಂಸಿನೀ ।
ಯದ್ವೃಂದಾವನಸೇವಯಾ ಭುವಿ ಜನಃ ಪ್ರಾಪ್ನೋತಿ ವಿದ್ಯಾಂ ಸುಖಮ್
ಸರ್ವಾರಿಷ್ಟನಿವೃತ್ತಯೇಽಸ್ತು ಸ ಚ ಮೇ ಬ್ರಹ್ಮಣ್ಯತೀರ್ಥೋ ಗುರುಃ ॥ ೪ ॥

ಕುಷ್ಠಶ್ವೇತೋರುಗುಲ್ಮ ಕ್ಷಯಕಠಿನತರ ವ್ಯಾಧಿವೈದ್ಯಾಧಿನಾಥೋ
ಭೂತಪ್ರೇತಗ್ರಹೋಚ್ಚಾಟನಕುಶಲಮಹಾಮಂತ್ರಮೂರ್ತಿರ್ಮುನೀಂದ್ರಃ ।
ಸರ್ವಾಭೀಷ್ಟಪ್ರದಾತಾ ಸರಸಸುಹೃದಯಃ ಪುಣ್ಯಚಾರಿತ್ರನಾಮಾ ।
ಭೂಯಾದ್ಬ್ರಹ್ಮಣ್ಯತೀರ್ಥೋ ಗುರುಕುಲತಿಲಕೋ ಭೂಯಸೇ ಶ್ರೇಯಸೇ ಮೇ ॥ ೫ ॥

॥ ಇತಿ ಶ್ರೀಬ್ರಹ್ಮಣ್ಯತೀರ್ಥಗುರುರಾಜ ಪಂಚರತ್ನಮಾಲಿಕಾ ಸ್ತೋತ್ರಮ್ ॥

✡ ✡ ✡

ಶ್ರೀಬ್ರಹ್ಮಣ್ಯತೀರ್ಥಚರಿತ್ರಸಂಗ್ರಹಃ

ಜಾತೋ ಭಾಸ್ಕರ ಏವ ಪೂಗವನಜಾದ್ರಾಮಾನ್ನೃಸಿಂಹಾಖ್ಯಯಾ ।
ಸೋಽಪಿ ಶ್ರೀಪುರುಷೋತ್ತಮಾದ್ಯತಿವರಭೂದ್ಬ್ರಹ್ಮಣ್ಯತೀರ್ಥಾಭಿಧಃ ॥
ಕರ್ಣಾಟಂ ಸ ಸುವೃಷ್ಟಿಭಿರ್ಮೃತಮಥೋಜ್ಜೀವ್ಯ ದ್ವಿಜಂ ಪಾಷ್ಟಿಕಂ ।
ಕೃತ್ವಾ ವ್ಯಾಸಮುನಿಂ ತತೋಽಸ್ಯ ಸುತಕಂ ಲೇಭೇ ವನೇ ವಿಠ್ಠಲಮ್ ॥

ಏಕಶ್ಲೋಕೀ ಭಾಗವತ, ರಾಮಾಯಣ, ಮಹಾಭಾರತಗಳಂತೆ ಈ ಕೃತಿಯು ಒಂದೇ ಶ್ಲೋಕದಲ್ಲಿ ಶ್ರೀಬ್ರಹ್ಮಣ್ಯತೀರ್ಥರ ಮಹತ್ವವನ್ನು ಹೆಚ್ಚಿಸುವ ಅನೇಕ ಘಟನೆಗಳ ಸಂಗ್ರಹರೂಪವಾಗಿದೆ. ನಿತ್ಯದಲ್ಲಿಯೂ ಪ್ರಾತಃಸ್ಮರಣೀಯರಾದ ಇವರ ವಿಸ್ತೃತ ಸ್ತೋತ್ರಗಳನ್ನು ಪ್ರತಿನಿತ್ಯದಲ್ಲಿಯೂ ಪಠಿಸಲು ಕಷ್ಟಕರವೆಂದು ತೋರಿದ ಗುರುರಾಜರ ಭಕ್ತರಿಗೆ ಈ ಕೃತಿಯು ಮಹದುಪಕಾರ ಮಾಡಿದೆ. ಸಾಕ್ಷಾತ್ ಸೂರ್ಯನೇ ಬ್ರಹ್ಮಣ್ಯತೀರ್ಥರಾಗಿ ಅವತರಿಸಿದರೆಂದು ಏವಕಾರ ಪುರಸ್ಸರವಾಗಿ ನಿಶ್ಚಯ ಮಾಡಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

"ಸೂರ್ಯದೇವನೇ ಪೂಗವನವೆಂಬ ವಂಶದಲ್ಲಿ ಜನಿಸಿದ ರಾಮಾಚಾರ್ಯರಿಂದ, ನರಸಿಂಹನೆಂಬ ನಾಮದಿಂದ ಜನಿಸಿ, ಆತನೇ ಶ್ರೀಪುರುಷೋತ್ತಮತೀರ್ಥರಿಂದ ಸನ್ಯಾಸವನ್ನು ಸ್ವೀಕರಿಸಿ, "ಬ್ರಹ್ಮಣ್ಯತೀರ್ಥ" ಎಂಬ ಹೆಸರನ್ನು ಪಡೆದನು. ಆ ಬ್ರಹ್ಮಣ್ಯತೀರ್ಥರೇ ಅನಾವೃಷ್ಟಿ ನಿಮಿತ್ತ ಮೃತಪ್ರಾಯವಾಗಿದ್ದ ಕರ್ನಾಟಕವನ್ನು ಚೆನ್ನಾಗಿ ಮಳೆಯಿಂದ ಉಜ್ಜೀವನಗೊಳಿಸಿದರು ಹಾಗೂ ಮೃತನಾಗಿದ್ದ ಪಾಷ್ಟಿಕ ಕುಲೋತ್ಪನ್ನನಾಗಿದ್ದ ದ್ವಿಜನನ್ನು

ಬದುಕಿಸಿ, ನಂತರ ಆತನ ಸುತನನ್ನು ವ್ಯಾಸತೀರ್ಥ ಮುನಿಯನ್ನಾಗಿಸಿದರು ಹಾಗೂ ವನದಲ್ಲಿ ವಿಠ್ಠಲನ ವಿಗ್ರಹವನ್ನು ಪಡೆದರು" ಎಂದು ಈ ಪದ್ಯದ ಸಾರಾಂಶವಾಗಿದೆ.

✡ ✡ ✡

ಶ್ರೀಬ್ರಹ್ಮಣ್ಯತೀರ್ಥಸ್ತುತಿಃ

◆ ◆

ಈ ಸ್ತುತಿಯು ಕೇವಲ ೧೯ ಶ್ಲೋಕಗಳ ಸ್ತುತಿಯಾಗಿದ್ದು, ನರಸಿಂಹ ಎಂಬುವವರು ಇದನ್ನು ರಚಿಸಿರುವರೆಂದು ಕೊನೆಯ ಶ್ಲೋಕದಿಂದ ತಿಳಿದುಬರುತ್ತದೆ.

ಶ್ರೀಪೂರ್ಣಬೋಧರ ಸುಮತವೆಂಬ ಸಮುದ್ರಕ್ಕೆ ಚಂದಿರನಂತಿರುವ ಶ್ರೀವ್ಯಾಸರಾಜರನ್ನು ಈ ಜಗತ್ತಿಗಿತ್ತ ಶ್ರೀವಿಠ್ಠಲಪಾದಪದ್ಮ ಭ್ರಮರರಾದ, ಮಾಯಿಮತ್ತಮಾತಂಗಗಳ ಗರ್ವಭಂಗದಲ್ಲಿ ಮೃಗರಾಜನಾದ, ವ್ಯಾಖ್ಯಾನದ ಘನ ಗರ್ಜನೆಯಿಂದ ದುಷ್ಟರ ಮದ ಸೀಳುವ ಕಾಷಾಯವಸನಕ್ಕೆ ಭೂಷಣವನ್ನೀಯುವ, ಜಗತ್ತಿನಲ್ಲಿಯೇ ಆಶ್ಚರ್ಯಕರವಾದ ಅಮಲಚಾರಿತ್ರ್ಯವುಳ್ಳ, ದೋಷದೂರರಾದ, ಪಾಪಗಳೆಂಬ ಹಾವುಗಳಿಗೆ ಗರುಡನಂತಿರುವ, ಶರಶ್ಚಂದ್ರನಂತೆ ಸುಂದರವದನವುಳ್ಳ, ಪ್ರತಿವಾದಿಗಳೆಂಬ ಆನೆಗಳಿಗೆ ಅಂಕುಶದಂತಿರುವ, ಕಾಮಿತಗಳನ್ನು ನೀಡುವುದರಲ್ಲಿ ಕಾಮಧೇನುವಿಗೆ ಸದೃಶವಾದ, ಕರುಣಾಳುಗಳಾದ, ಜ್ಞಾನಭಕ್ತಿವೈರಾಗ್ಯಾದಿ ಐಶ್ವರ್ಯಸಂಪನ್ನರಾದ ಶ್ರೀಬ್ರಹ್ಮಣ್ಯತೀರ್ಥರನ್ನು ಇಲ್ಲಿ ಸ್ತುತಿಸಲಾಗಿದೆ.

ಶ್ರೀಬ್ರಹ್ಮಣ್ಯತೀರ್ಥರ ಬೃಂದಾವನ ದರ್ಶನ, ಸೇವೆ, ಪಾದೋದಕ ಪ್ರಾಶನ, ಇವುಗಳ ಮಹತ್ವವನ್ನು ಇಲ್ಲಿ ವರ್ಣಿಸಲಾಗಿದೆ. ಜ್ಞಾನಭಕ್ತಿವೈರಾಗ್ಯ, ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಿ, ಅಜ್ಞಾನಾದಿಗಳಿಂದ ದೂರಮಾಡಿ ರಕ್ಷಿಸಬೇಕೆಂದು ಸ್ತುತಿಕಾರರು ಗುರುರಾಜರಲ್ಲಿ ಮೊರೆಯಿಟ್ಟಿದ್ದಾರೆ.

ಪುಟ್ಟ ಸ್ತೋತ್ರವಾದರೂ ಅಲ್ಲಲ್ಲಿ ಅತ್ಯಂತ ಮಹತ್ವಪೂರ್ಣವಾದ ಚಾರಿತ್ರಿಕ ಅಂಶಗಳನ್ನು ಇಲ್ಲಿ ಅಳವಡಿಸಿರುವುದು ಈ ಸುತ್ತಿಯ ವೈಶಿಷ್ಟ್ಯವಾಗಿದೆ.

◆ ◆

ಶ್ರೀಪೂರ್ಣಬೋಧಸುಮತಾಬ್ಧಿಸುಧಾಕರಾಯ
ಶ್ರೀವ್ಯಾಸರಾಜಗುರವೇ ಯತಿಪುಂಗವಾಯ ।
ಶ್ರೀವಿಠ್ಠಲಾಂಘ್ರಿಸರಸೀರುಹಬಂಭರಾಯ
ಬ್ರಹ್ಮಣ್ಯತೀರ್ಥಗುರವೇಽಸ್ತು ನಮಃ ಶುಭಾಯ ॥ ೧ ॥

ಶ್ರೀಮನ್ನೃಸಿಂಹಪದಪದ್ಮಗುಹಾಶ್ರಯಾಯ
ವ್ಯಾಖ್ಯಾಘನಸ್ವನವಿದಾರಿತದುರ್ಮದಾಯ ।
ದುರ್ಮಾಯಿದಂತಿದಲನೈಕಮೃಗಾಧಿಪಾಯ
ಬ್ರಹ್ಮಣ್ಯತೀರ್ಥಗುರವೇಽಸ್ತು ನಮೋಽಮಲಾಯ ॥ ೨ ॥

ಬ್ರಹ್ಮಣ್ಯತೀರ್ಥಃ ಕಮನೀಯಗಾತ್ರಃ ಶರತ್ಸುಧಾಂಶೂಪಮಚಾರುವಕ್ತ್ರಃ ।
ಜಗದ್ವಿಚಿತ್ರಾಮಲಸಚ್ಚರಿತ್ರೋ ಗುರುಃ ಸ ಮಾಂ ಪಾತು ರಮೇಶಭಕ್ತಃ ॥ ೩ ॥

ಬ್ರಹ್ಮಣ್ಯತೀರ್ಥೋ ಭಗವತ್ಪ್ರಸಾದಾದವಾಪಸಂಪತ್ಪ್ರಕರಃ ಸುಧೀಂದ್ರಃ ।
ವಿಧೂತಪಾಪೋ ವಿಜಿತಾರಿವರ್ಗಃ ಸಂಸೇವಮಾನಾಖಿಲಕಾಮದಶ್ಚ ॥ ೪ ॥

ಸದ್ಜ್ಞಾನಸದ್ಭಕ್ತಿವಿರಕ್ತಿಸಂಪತ್ಪುಧ್ಯಾಯುರಾರೋಗ್ಯಬಲಾನಿ ದತ್ವಾ ।
ಅಜ್ಞಾನರೋಗಾದ್ಯಖಿಲಾಶುಭಾನಿ ಹತ್ವಾಽವತಾನ್ನೋ ಭವತು ಪ್ರಸನ್ನಃ ॥ ೫ ॥

ಕಣ್ಣಾಪಗಾತೀರವರಾಧಿವಾಸಃ ಸಂಸೇವಿತಾಘೋರಗಪಕ್ಷ್ಯಧೀಶಃ ।
ಸಲ್ಲೋಕಚಿತ್ರಾಕ್ಷಿಮಹೋತ್ಸವೋಽಯಂ ವಾಕ್ಪಾಟವಂ ಸಂದಿಶತಾದ್ಗುರುರ್ಮೇ ॥ ೬ ॥

ಯದ್ವೃಂದಾವನಸೇವಯಾ ಭುವಿ ಜನಃ ಪ್ರಾಪ್ನೋತಿ ಸೌಖ್ಯಂ ಮಹ-
ದ್ಯತ್ಪಾದಾಂಬುನಿಷೇವಣಂ ಸಕಲಸತ್ತೀರ್ಥಾಲಿಪುಣ್ಯಾವಹಮ್ ।
ಯತ್ಸಂದರ್ಶನಮಾತ್ರತೋ ನಿಜಮಹಾಪಾಪಾಲಿನಾಶೋ ಭವೇ-
ತ್ತಂ ವಂದೇ ತಪನೀಯವರ್ಣವಪುಷಂ ಬ್ರಹ್ಮಣ್ಯತೀರ್ಥಂ ಗುರುಮ್ ॥ ೭ ॥

ಯತ್ಪುಣ್ಯಕೀರ್ತನಸುಧಾರಸತೃಪ್ತಚಿತ್ತಾ ಯತ್ಪಾದಪಂಕಜನಿಷೇವಣಲಬ್ಧಪುಣ್ಯಾಃ ।
ಯತ್ಪ್ರೇಮಪೂರ್ಣವಿಲಸತ್ಸುಕಟಾಕ್ಷಪಾತ್ರಾಸ್ತದ್ದರ್ಶನಂ ಕಲಿಮಲಾಚಲವಜ್ರಭೂತಮ್ ॥ ೮ ॥

ಆಸೇತುಹಿಮಶೈಲಾಂತಂ ತೀರ್ಥಕ್ಷೇತ್ರಾಣಿ ಯೇನ ವೈ ।
ಚರಿತಾನಿ ಮನಶ್ಶುದ್ಧಿಂ ಸ ಮೇ ಯಚ್ಛತು ಸೂರಿರಾಟ್ ॥ ೯ ॥

ಶ್ರೀಪಾದರಾಜೋ ಜನನೀಸ್ವಸ್ರೀಯೋ ಯಸ್ಯ ಯೋಗಿರಾಟ್ ।
ವಿದ್ಯಾಗುರುರ್ವ್ಯಾಸಮುನೇಸ್ತಂ ವಂದೇಽಹಮಹರ್ನಿಶಮ್ ॥ ೧೦ ॥

ಬ್ರಹ್ಮಣ್ಯಾರ್ಯಸ್ಯ ಶಿಷ್ಯೋಽನ್ಯೋ ನೈವಾತೋ ವ್ಯಾಸಯೋಗಿನೇ ।
ವಿಠ್ಠಲಾರ್ಚಾಂ ನೃಸಿಂಹಾರ್ಚಾಂ ಪ್ರಸನ್ನಃ ಪ್ರದದೌ ಗುರುಃ ॥ ೧೧ ॥

ಮಾಧವಸ್ಯಾಸಿತೇ ಪಕ್ಷೇ ಸಹಸ್ರಾಂಶುತಿಥೌ ಗುರುಃ ।
ಬ್ರಹ್ಮಣ್ಯತೀರ್ಥಃ ಸ್ವರ್ಲೋಕಂ ಗತ್ವಾ ಸಪ್ತಾಶ್ವಮಾವಿಶತ್ ॥ ೧೨ ॥

ಸೂರ್ಯಾಂಶತ್ವಾದಯಂ ಸಾಕ್ಷಾದ್ವ್ಯಾಮೇऽಬ್ಜುರುವರಾಭಿಧೇ ।
ವ್ಯಂದಾವನಂ ಪ್ರವಿಶ್ಯೈವ ಸ್ಥಿತೋऽದ್ಯಾಪಿ ವಿರಾಜತೇ ॥ ೧೩ ॥

ಶ್ರೀವಿಷ್ಣುದಯಾಪಾತ್ರಂ ಜ್ಞಾನವಿಜ್ಞಾನಶಾಲಿನಮ್ ।
ಶ್ರೀಮದ್ಬ್ರಹ್ಮಣ್ಯತೀರ್ಥಾರ್ಯಂ ವಂದೇ ವಾಂಛಿತದಾಯಕಮ್ ॥ ೧೪ ॥

ಶ್ರೀಮತೇ ಯೋಗಿವರ್ಯಾಯ ಸಜ್ಜನಾಂಭೋನಿಧೀಂದವೇ ।
ಬ್ರಹ್ಮಣ್ಯತೀರ್ಥಗುರವೇ ಕರುಣಾಸಿಂಧವೇ ನಮಃ ॥ ೧೫ ॥

ಬ್ರಹ್ಮಣ್ಯಾರ್ಯಪದಾಂಭೋಜಪಾಂಸವಃಪಾವಯಂತು ನಃ ।
ಕಾಮಿತಾಶೇಷಕಲ್ಯಾಣಕಲನೇ ಕಾಮಧೇನವಃ ॥ ೧೬ ॥

ಧೃತಕಾಷಾಯದಂಡೋऽಯಂ ಪ್ರತಿವಾದಿಗಜಾಂಕುಶಃ ।
ಯತಿರಾಜಾಗ್ರಣೀಃ ಶ್ರೀಮಾನ್ ವಿತನೋತು ಮಮ ಶ್ರಿಯಮ್ ॥ ೧೭ ॥

ಬ್ರಹ್ಮಣ್ಯತೀರ್ಥಗುರುವರ್ಯದಯಾಪಯೋಧೇ
ಭಕ್ತಿಂ ಪ್ರದೇಹಿ ಸುದೃಢಾಂ ಹರಿಪಾದಪದ್ಮೇ ।
ಜ್ಞಾನಂ ಶುಭಂ ಚ ವಿಷಯೇಷು ವಿರಕ್ತಿಮಗ್ರ್ಯಾಂ
ಸ್ವಾಮಿನ್ ದಯಾಂ ಕುರು ದಯಾಂ ಕುರು ಮಯ್ಯನಾಥೇ ॥ ೧೮ ॥

ಇತಿ ಬ್ರಹ್ಮಣ್ಯತೀರ್ಥಾರ್ಯಗುರುಸ್ತೋತ್ರಂ ಸುಭಕ್ತಿತಃ ।
ನರಸಿಂಹಾಭಿಧಾನೇನ ಕೃತಂ ವಿಷ್ಣುತುಷ್ಟಯೇ ॥ ೧೯ ॥

॥ ಇತಿ ಶ್ರೀಮದ್ವ್ಯಾಸರಾಜಗುರುಶ್ರೀಬ್ರಹ್ಮಣ್ಯತೀರ್ಥಗುರುರಾಜಸ್ತುತಿ ಸಮಾಪ್ತಾ ॥

✡ ✡ ✡

ಶ್ರೀಬ್ರಹ್ಮಣ್ಯತೀರ್ಥಗುರುರಾಜಸ್ತೋತ್ರಮ್

◆ ◆

ಶ್ರೀಶ್ರೀನಿವಾಸತೀರ್ಥರು ರಚಿಸಿದ ಈ ಸ್ತೋತ್ರವು ನಿತ್ಯಪಠನೀಯವಾದ ಸರ್ವೇಷ್ಟ-ಪ್ರದವಾದ, ಗುರುಪ್ರಸಾದಪ್ರಾಪ್ತಿಯ ಸೋಪಾನವನ್ನೇರಿಸಲು ಸಮರ್ಥವಾದ ಸ್ತೋತ್ರವಾಗಿದೆ.

ಮನೋಹರ ಬಾಲರೂಪೀ ವಿಷ್ಣುವಿನ ರಕ್ಷಾಕವಚವನ್ನು ಪ್ರಾರ್ಥಿಸುತ್ತ ಪಾಪವಿಧ್ವಂಸಕರೆಂದು ಪ್ರಸಿದ್ಧರಾದ ಶ್ರೀಮಧ್ವಾಚಾರ್ಯರು ಪರಿಶುದ್ಧ ಬುದ್ಧಿಯನ್ನು ಕರುಣಿಸುವಂತೆ ಪ್ರಾರ್ಥಿಸುವ ಪದ್ಯದಿಂದ ಆರಂಭವಾಗುವ ಈ ಸ್ತೋತ್ರದಲ್ಲಿ ಭವಾಟವಿಯಲ್ಲಿ ದಿಕ್ಕು

ಕಾಣದ ಸಜ್ಜನರ ಅಜ್ಞಾನವೆಂಬ ಕತ್ತಲೆಯನ್ನು ಉಪದೇಶ ವಾಕ್ಯಗಳೆಂಬ ಕಿರಣಗಳಿಂದ ಪರಿಹರಿಸುವಂತೆ ಶ್ರೀಬ್ರಹ್ಮಣ್ಯತೀರ್ಥರನ್ನು ಪ್ರಾರ್ಥಿಸಲಾಗಿದೆ.

ಪಾಪಗಳೆಂಬ ಬೆಟ್ಟಗಳನ್ನು ತುಂಡರಿಸುವ ವಜ್ರಾಯುಧ ಸದೃಶರಾದ, ಸಜ್ಜನ ಕುಮುದ ವೃಂದವನ್ನರಳಿಸುವ ಚಂದ್ರನಂತಿರುವ, ಪದಾರ್ಥಗಳನ್ನು ಸ್ಫುಟಗೊಳಿಸುವಲ್ಲಿ ಸೂರ್ಯನಂತಿರುವ, ಸಂಸಾರ ಸಾಗರವನ್ನು ದಾಟಿಸುವಲ್ಲಿ ಉತ್ತ ಷ್ಟ ಉಪಾಯದಂತಿರುವ, ಶ್ರೀಮದ್ಧಮುನಿವಂಶವೆಂಬ ಸಮುದ್ರಕ್ಕೆ ಚಂದ್ರನಂತಿರುವ, ಇದಿರು ಬೀಳುವ ವಾದಿಗಳೆಂಬ ಆನೆಗಳ ಗಂಡಸ್ಥಳವನ್ನು ಭೇದಿಸುವ ಸಿಂಹಸದೃಶರಾದ ಗುರುರಾಜರು ಸರ್ವದಾ ತಮ್ಮ ಅನುಗ್ರಹಕವಚವನ್ನು ತೊಡಿಸುವಂತೆ ಪರಿಪರಿ ವಿಧದಿಂದ ಸ್ತೋತ್ರ-ಮಾಡಿ ಭಕ್ತನಿಗೆ ಗುರುರಾಜರಲ್ಲಿ ಅತಿಶಯ ಭಕ್ತಿ ಮೂಡುವಂತೆ ಸ್ತೋತ್ರಕಾರರು ಸ್ತೋತ್ರವನ್ನು ರಚಿಸಿದ್ದಾರೆ. ಭಕ್ತಿಪೂರ್ವಕವಾಗಿ ಅಷ್ಟಾಕ್ಷರ ಜಪಿಸುವವರಿಗೆ ಸರ್ವಾರ್ಥ ಸಿದ್ಧಿಯಾಗುವುದೆಂಬುವುದರಲ್ಲಿ ಸಾಕ್ಷಾತ್ ಶ್ರೀನೃಸಿಂಹದೇವರೇ ಸಾಕ್ಷಿ ಎಂದು ದೃಢವಾಗಿ ಪ್ರಮಾಣ ಮಾಡಿ ಭಕ್ತನ ಆರ್ತ ಪ್ರಾರ್ಥನೆಯಿಂದ ಗುರುಗಳ ಅಂತಃಕರಣ ನೀರಾಗಿ ಹರಿಯುವಂತೆ ಈ ಸ್ತೋತ್ರವನ್ನು ರಚಿಸಿದ್ದಾರೆ.

◆ ◆

ಶ್ರೀವಿಷ್ಣುಃಪಾತು ಸದಾತ್ತಲೀಲೋ
ಬಾಲಾಕೃತಿರ್ಲೋಲಸಕೇಶಜಾಲಃ ।
ಮಧ್ವೋऽಭವದ್ವಿಘ್ನಸಕರಃಕರೋತುಬುದ್ಧಿಂ
ವಿಶುದ್ಧಾಂ ಖಲು ಮಾಧವೇऽಲಮ್ ॥ ೧ ॥

ಶ್ರೀವ್ಯಾಸರಾಜಮುನಿಪಾರ್ಚಿತಪಾದಪೀಠೋ
ಬ್ರಹ್ಮಣ್ಯತೀರ್ಥಗುರುರಾಜಯತೀಂದ್ರಚಂದ್ರಃ ।
ಗೋಭಸ್ತಮಾಂಸಿ ಹರತಾದ್ಭವಕಾನನೇಷು
ಸನ್ಮಾರ್ಗದೃಷ್ಟಿವಿಕಲಸ್ಯ ಸತೋ ಜನಸ್ಯ ॥ ೨ ॥

ಶ್ರೀಮನ್ನೃಸಿಂಹಚರಣಾಂಬುಜಪೂಜನೋತ್ತ-
ಸರ್ವಾರ್ಥಸಂಪದಮರಪ್ರಕೃತಿರ್ಯತೀಂದ್ರಃ ।
ಬ್ರಹ್ಮಣ್ಯತೀರ್ಥಗುರುರಾಡಮರದ್ರುಮೋऽಸೌ
ಸರ್ವೇಷ್ಟಮಾಶು ವಿದಧಾತು ಸುಬೋಧಭಾಂದ್ರಃ ॥ ೩ ॥

ವಜ್ರಾಯಿತೋऽಘಾದ್ರಿವಿಭೇದನೇऽಸೌ
ಚಂದ್ರಾಯಿತಃ ಸತ್ಕುಮುದಪ್ರಹರ್ಷೇ ।
ಸೂರ್ಯಾಯಿತಃ ಸದ್ಭ್ರದಯೇಪ್ರಕಾಶೇ
ಬ್ರಹ್ಮಣ್ಯತೀರ್ಥಃ ಸತತಂ ಸ ಪಾಯ್ಯಾತ್ ॥ ೪ ॥

ನೃಸಿಂಹಸೇವಾಪರಿಪೂತಕಾಯಃ
ಸಂಸಾರಸಿಂಧೂತ್ತರಣಾಭ್ಯುಪಾಯಃ ।
ನಿರ್ದೋಷಬೋಧೇನ ವಿನಷ್ಟಮಾಯಃ
ಬ್ರಹ್ಮಣ್ಯಯೋಗೀ ವೃಜಿನಾತ್ಸ ಪಾಯಾತ್ ॥ ೫ ॥

ಅಷ್ಟಾಂಗಯೋಗಪ್ರವಣಾಂತರಂಗಃ
ಕಷ್ಟವ್ರತಾಚಾರಕೃಶೀಕೃತಾಂಗಃ ।
ಇಷ್ಟಾರ್ಥಪೂರ್ಣಾನ್ ಕುರುತಾನ್ನತಾಂರ್ಗಾ
ನಷ್ಟೋಚ್ಚಸಂಸಾರಚಲತ್ತರಂಗಃ ॥ ೬ ॥

ಶ್ರೀಮದ್ಭಮುನಿವಂಶಾಬ್ಧಿಚಂದ್ರಾಯಿತನಿಜಾಕೃತಿಃ ।
ಜಯದ್ವಜಕರಾಬ್ಜೋತ್ಥಪುರುಷೋತ್ತಮಪುತ್ರಕಃ ॥ ೭ ॥

ಬ್ರಹ್ಮಣ್ಯತೀರ್ಥಗುರುರಾಟ್ ಪದಾತು ಜ್ಞಾನಮುತ್ತಮಮ್ ।
ಸಂಸಾರಕ್ಲೇಶನಾಶಂ ಚ ಸಾಧಯೇತ್ಪಿದ್ಧಪುಂಗವಃ ॥ ೮ ॥

ವಾದೀಂದ್ರಕುಂಭದಲನೇ ಬ್ರಹ್ಮಣ್ಯಯತಿರಾಡ್ಗಜಃ ।
ಹೃದಾರಾಮಸ್ಥಿತಾಘೌಕ್ಷುದಂಡಂ ಖಂಡಯತಾದ್ದೃಢಮ್ ॥ ೯ ॥

ದಯಾಲೋರ್ಗೇಯಚರಿತಾದ್ಬ್ರಹ್ಮಣ್ಯವರಸದ್ಗುರೋಃ ।
ಕೋಽನ್ಯಃ ಸರ್ವೇಷ್ಟದೋಽಸ್ಮಾಕಮಧುನಾ ಧರಣೀತಲೇ ॥ ೧೦ ॥

ಬ್ರಹ್ಮಣ್ಯಗುರುರಾಜಾಯ ನಮೋಽಜ್ಞಾನನಿವಾರಿಣೇ ।
ನಮೋ ನಮೋ ವ್ಯಾಸರಾಜಗುರವೇಽಖಿಲಸಂಪದೇ ॥ ೧೧ ॥

"ಬ್ರಹ್ಮಣ್ಯತೀರ್ಥಾಯ ನಮಃ" ಇತ್ಯಷ್ಟಾಕ್ಷರಮಂತ್ರಕಮ್ ।
ಜಪಿತಾಮಿಷ್ಟಸರ್ವಸ್ವಂ ಕರಗಂ ಸ್ಯಾದಸಂಶಯಮ್ ॥ ೧೨ ॥

ನಿವರ್ತಂತೇಽಖಿಲಾ ರೋಗಾಃ ಕುಷ್ಮಾಪಸ್ಮಾರಪೂರ್ವಕಾಃ ।
ಭ್ರಮಸಂಶಯಪೂರ್ವಾಶ್ಚ ಮನೋದೋಷಾಶ್ಚಯೇಽಖಿಲಾಃ ॥ ೧೩ ॥

ಪ್ರವರ್ತಂತೇ ಸುತಾಃ ಪೌತ್ರಾ ಧನಧಾನ್ಯಗವಾದ್ಯಯಃ ।
ಜ್ಞಾನವಿಜ್ಞಾನಪೂರ್ವಾಶ್ಚ ಮನೋಧರ್ಮಾಃ ಶುಭಾಶ್ಚ ಯೇ ॥ ೧೪ ॥

ಬ್ರಹ್ಮಣ್ಯಗುರುರಾಜ ತ್ವಾಂ ವೃಂದಾವನನಿವಾಸಿನಮ್ ।
ಕುರ್ವನ್ ಪ್ರದಕ್ಷಿಣಾಂ ವಂದೇ ತೀರ್ಥಯಾತ್ರಾಫಲಾಪ್ತಯೇ ॥ ೧೫ ॥

ಕಾಯವಾಗ್ಜನಿಭವಾನ್ ದೋಷಾಂಸ್ತವ ವೃಂದಾವನೋದಕಮ್ ।
ಶ್ರೀಪೀತಂ ನಾಶಯೇನ್ಮೂರ್ಧ್ನಾ ಧೃತಂ ಪುಣ್ಯಂ ಸಮೇಧಯೇತ್ ॥ ೧೬ ॥

ಖಿನ್ನವಿನ್ನ ಜಪದ್ವೀಪ ಪೂತವಾತಮತಿಷ್ಠತ ।
ಶ್ರೀಬ್ರಹ್ಮವ್ರತಗೋಽಸ್ಯೋಽಗಯೋಗವ್ರತ ತಪನ್ನವ ॥ ೧೭ ॥

ಧ್ಯಾಯಾಮಿ ಕಾಷಾಯಸುಚೀಲಮೀಡ್ಯಂ
ಧ್ಯಾಯಂತಮಂತಃ ಖಿಲು ವಿಶ್ವಲಂ ತಂ ।
ಬ್ರಹ್ಮಣ್ಯತೀರ್ಥಂ ವರಬೋಧಮುದ್ರಂ
ವೃಂದಾವನಸ್ಥಂ ರವಿತುಲ್ಯಮೂರ್ತಿಮ್ ॥ ೧೮ ॥

ಕದಾ ಮುದಾ ಪೀತವರೇ ವಸಂತಂ
ಲಸಂತಮಂತಃಕೃಪಯಾರ್ದ್ರಚಿತ್ತಮ್ ।
ಇಷ್ಟಾರ್ಥದಾನೋದ್ಯತಪಾಣಿಪದ್ಮಂ
ಬ್ರಹ್ಮಣ್ಯತೀರ್ಥಂ ಸುದೃಶಾವಲೋಕೇ ॥ ೧೯ ॥

ಗಂಭೀರಸಂಸಾರಸಮುದ್ರಪಾರಂ
ತರೀತುಕಾಮಸ್ಯ ಜನಸ್ಯಲೋಕೇ ।
ಬ್ರಹ್ಮಣ್ಯತೀರ್ಥೋಡುಪಮಂತರೇಣ
ನ ಸ್ಯಾದುಪಾಯಾಂತರಮತ್ರ ನೂನಮ್ ॥ ೨೦ ॥

ಬ್ರಹ್ಮಣ್ಯಯತಿರಾಜ ತ್ವಾಂ ಶರಣಂ ಗತವಾನಹಮ್ ।
ಕರಾವಲಂಬನಂ ದೇಹಿ ಪತಿತಸ್ಯ ಭವಾರ್ಣವೇ ॥ ೨೧ ॥

ಇತಿ ಸ್ತೋತ್ರೇಣ ಯೋ ಮರ್ತ್ಯಃಸೇವತೇ ಗುರುಪುಂಗವಮ್ ।
ಅಶೇಷಕಷ್ಟರಾಹಿತ್ಯಮಿಷ್ಟಲಾಭಂ ಚ ವಿಂದತೇ ॥ ೨೨ ॥

ಸ್ತುತ್ಯಾನಯೋದಕಂ ಜಪ್ತ್ವಾ ಪಿಬನ್ನುದರಪೀಡಯಾ ।
ವಿಮುಕ್ತಃ ಸುಖಮಾಪ್ನೋತಿ ದೀರ್ಘಮಾಯುಶ್ಚ ವಿಂದತಿ ॥ ೨೩ ॥

ಅಷ್ಟೋತ್ತರಶತಂ ಸ್ತೋತ್ರಮೇತತ್ಪುಣ್ಯೇಽಹನಿ ದ್ವಿಜಃ ।
ಜಪನ್ ಭೂತಾದಿಪೀಡಾಭಿರ್ಮುಚ್ಯತೇ ನಾತ್ರ ಸಂಶಯಃ ॥ ೨೪ ॥

ವೃಂದಾವನಸ್ಥಂ ಬ್ರಹ್ಮಣ್ಯಗುರುರಾಜಂ ಸ್ತುವನ್ ಸ್ಮರೇತ್ ।
ತಸ್ಯ ಸರ್ವೇಷ್ಟಲಾಭಃ ಸ್ಯಾದತ್ರ ಸಾಕ್ಷೀ ನೃಕೇಸರೀ ॥ ೨೫ ॥

ಇತಿ ಬ್ರಹ್ಮಣ್ಯತೀರ್ಥಾರ್ಯ ಗುರುವರ್ಯಕೃಪಾಬಲಾತ್ ।
ರಚಿತಂ ಶ್ರೀನಿವಾಸೇನ ತೇನ ಸ ಪ್ರೀಯತಾಂ ಹರಿಃ ॥ ೨೬ ॥

॥ ಇತಿ ಶ್ರೀಮದ್ವ್ಯಾಸರಾಜಗುರುಶ್ರೀಬ್ರಹ್ಮಣ್ಯತೀರ್ಥಗುರುರಾಜಸ್ತೋತ್ರಂ ಸಮಾಪ್ತಮ್ ॥

✡ ✡ ✡

ಶ್ರೀಶ್ರೀಪಾದರಾಜಸ್ತುತಿಃ

◆ ◆

ಶ್ರೀಮಧ್ವಾಚಾರ್ಯರಿಂದ ಸನ್ಯಾಸದೀಕ್ಷೆಯನ್ನು ಪಡೆದು, ಶ್ರೀಪದ್ಮನಾಭತೀರ್ಥರು ಭಗವಂತನ ಸಂಕಲ್ಪದಂತೆ ತಮ್ಮದೇ ಆದ ಒಂದು ಶಾಖಾಮಠವನ್ನು ಸಂಸ್ಥಾಪಿಸಬೇಕೆಂಬ ಅಪೇಕ್ಷೆಯಿಂದ ಒಬ್ಬ ಗೃಹಸ್ಥರಿಗೆ ಆಶ್ರಮವಿತ್ತು, ಗೋಪೀನಾಥದೇವರನ್ನು ದಯಪಾಲಿಸಿದರು. ಆ ಸನ್ಯಾಸಿಗಳೇ ಲಕ್ಷ್ಮೀಧರತೀರ್ಥರು. ಇವರಿಂದ ಏಳನೆಯವರು ಲಕ್ಷ್ಮೀನಾರಾಯಣತೀರ್ಥರು. ಇವರೇ ಶ್ರೀಪಾದರಾಜರು. ಇವರನ್ನು ವಾದಿರಾಜರು ಇಲ್ಲಿ ಸ್ತುತಿಸಿದ್ದಾರೆ.

ಶ್ರೀಗೋಪಿನಾಥ ಪೂಜಕರಾದ, ಪಾಪಸಮೂಹವನ್ನು ನಾಶಪಡಿಸುವ ಶಾಪಾನುಗ್ರಹಶಕ್ತರಾದ ಶ್ರೀಪಾದರಾಜರನ್ನು ಭಜಿಸಿ ಕೃತಕೃತ್ಯರಾಗಬೇಕೆಂದು ಶ್ರೀವಾದಿರಾಜರು ಸಜ್ಜನ ಸಮೂಹವನ್ನು ಎಚ್ಚರಿಸುತ್ತಿರುವರು.

ದೂರ್ವಾಸಮುನಿಗಳಿಂದ ಪ್ರವರ್ತಿತರಾದ, ಶ್ರೀಮಧ್ವಾಚಾರ್ಯರ ವಿಶೇಷ ಅನುಗ್ರಹದಿಂದ ಪಾವಿತರಾದ, ಶ್ರೀಪದ್ಮನಾಭತೀರ್ಥರಿಂದ ಸಂರಕ್ಷಿತವಾದ ಯತಿಪರಂಪರೆಯಲ್ಲಿ ಬಂದು ವೇದಾಂತಸಾಮ್ರಾಜ್ಯದಲ್ಲಿ ಅಭಿಷಿಕ್ತರಾದ, ಶ್ರೀಸ್ವರ್ಣವರ್ಣತೀರ್ಥ ಕರಕಮಲಸಂಜಾತರಾದ ಶ್ರೀಪಾದರಾಜರು ಮಂಗಳ ಪರಂಪರೆಯನ್ನು ದಯಪಾಲಿಸಿ ರಕ್ಷಿಸಲಿ ಎಂದು ಪ್ರಾರ್ಥಿಸಲಾಗಿದೆ.

ಅರ್ಜುನ ಹಾಗೂ ಜಾಂಬವತಿಯರಿಂದ ಪೂಜಿತವಾದ ರುಕ್ಮಿಣೀ-ಸತ್ಯಭಾಮಾ ಸಮೇತ ಶ್ರೀಕೃಷ್ಣ ಹಾಗೂ ರಂಗವಿಠ್ಠಲ ಪ್ರತಿಮೆಗಳನ್ನು ಪಡೆದು ಶ್ರೀಕೃಷ್ಣಪ್ರತಿಮೆಯನ್ನು ಹಾಗೂ ತಮ್ಮ ಪಾದುಕೆಗಳನ್ನು ತಮ್ಮ ವಿದ್ಯಾಶಿಷ್ಯರಾದ ಶ್ರೀವ್ಯಾಸರಾಜರಿಗೆ ಅನುಗ್ರಹಿಸಿದರು. ಅಂತಹ ಯತಿಗಳು ರಕ್ಷಿಸಲೆಂದು ಬೇಡಿದ್ದಾರೆ.

ಮುಂದೆ ಧ್ರುವನ ಚರಿತ್ರೆಯನ್ನು ಉಲ್ಲೇಖಿಸುತ್ತ ಆ ಧ್ರುವನ ಅಂಶವೇ ಶ್ರೀಪಾದರಾಜರೆಂದು ವರ್ಣಿಸುತ್ತ, ಸಾಂಸಾರಿಕ ಕ್ಲೇಶಗಳಿಂದ ಬೇಗನೆ ಪಾರು ಮಾಡಲೆಂದು ಪ್ರಾರ್ಥಿಸಿದ್ದಾರೆ. ತಮ್ಮ ಪರಮಗುರುಗಳಾದ ಶ್ರೀಪಾದರಾಜರ ಈ ಸ್ತೋತ್ರವನ್ನು ಆದರಪೂರ್ವಕವಾಗಿ ಪಠಿಸುವವರಿಗೆ ಸಕಲೇಷ್ಟಸಿದ್ಧಿಯಾಗುವುದೆಂದು ತಿಳಿಸುತ್ತ ಈ ಸ್ತುತಿಯನ್ನು ಕೊನೆಗೊಳಿಸಿದ್ದಾರೆ.

◆ ◆

ದ್ವೈಪಾಯನೋತ್ತಮಕರೋಪಗತಾಂ ಪವನರೂಪಾಮಿತೇಕ್ಷಮಹಿತಾಮ್
ಗೋಪಾಂಗನೇಶತನುಮಾಪಾತಮರ್ಚಯಿತುಮಾಪಾದ್ಯ ಯೋ ಹಿ ಯತಿತಾಮ್ ।
ಸ್ಥಾಪಾಸ್ತಭೂಪಕೃತಶಾಪಾಸಿಘಾತಜನಿತಾಪಾರಪಾಪನಿಚಯಂ
ಶ್ರೀಪಾದರಾಜವರಶಾಪಾಯುಧಂ ಭೃಶಂ ಸೂಪಾಸ್ಮಲೋಲುಪಧಿಯಃ ॥ ೧ ॥

ಕಾಪಾಲಿಕಾಂಶವರಕೋಪಾತಿವಿತ್ರಯತಿ ಭೂಪಾರಿಕಾಂಕ್ಷಿಕುಲಭೂಃ
ಭೂಪಾವನಾಮಿತಧಿಯಾಪಾವಿತಾತಿಶುಭರೂಪಾಬ್ಜನಾಭ ಸುಯತೇಃ ।
ಗೋಪಾಯಿತಾನ್ವಯ ಸುದೀಪಾಭಹೇಮಸರೂಪಾಖ್ಯಭಿಕ್ಷು ವರಭೂಃ
ಶ್ರೀಪಾದರಾಜಯತಿರಾಪಾತು ನಃ ಶುಭಕಲಾಪಾನಪಾರ ಮಹಿಮಾ ॥ ೨ ॥

ಗೋಪಾಲವಿಠ್ಠಲತನೂಪಾರ್ಥಭಲ್ಲಕ ಸುತೋಪಾಸಿತೇ ಸಮಹಿಲೇ
ದೀಪಾಢ್ಯವಿತ್ತ ಭವನಾಪಾಲಿತೇ ಕುರುಕುಲಾಪಾಯ ಭೂನೃಪತಿನಾ ।
ಪ್ರಾಪಾದಿಮಾದಿಶದಘೋಪಾಕ ಶಿಷ್ಯಯತಯೇ ಪಾದುಕೇತಮನಯೋಃ-
ಶ್ರೀಪಾದರಾಜಯತಿರಾಪಾತು ನೋ ರಚಿತ ಭೂಪಾಲಪೀಠವಸತಿಃ ॥ ೩ ॥

ಯೋಽಪಾಗಮತ್ ಸ್ವಪುರತೋಪಾಸ್ತ ಬಂಧುಜನತಾಪಾರಿಬರ್ಹಸುಹೃದಾ-
ಲಾಪಾದಿರಾಗ ಉರು ಭೂಪಾಲವರ್ಯಜನ ಗೋಪಾಂಗಜಾಪಿತತನುಃ ।
ಧೂಪಾಯಿತಾಂತರಶ್ಚಾಪಾಟವೀಂ ನಿಹಿತರೋಪಾಭಮಾತ್ಯವಚಸಾ-
ಗೋಪಾಯಿತಾತ್ಮತನುಭೂಪಾಮರಾರ್ಯಜನಗೋಪಾರವಶ್ಯಕರಭಾಃ ॥ ೪ ॥

ಹಾ ಪಾಕ ಆಗತ ಇಹಾಪಾಪಸೇವ್ಯಮಭಿರೂಪಾಮರದ್ರುಪ್ರತಿಮಾಂ
ಶ್ರೀಪಾಲಯಾಪಿತಮಹೀಪಾರಗಾಮಿಸುರ ಶಾಪಾಯುಧೋಕ್ತ ತಪಸಾ ।
ಕ್ಷ್ಮಾಪಾಲಪೀಠಮಥ ಗೋಪಾಲ ಸೇವ್ಯ ಪದಮಾಪಾಗ್ರ್ಯ ಜನ್ಮಗುರುತಾಂ
ಶ್ರೀಪಾದರಾಜಯತಿರಾಪಾರಯತ್ವಯಮಿಹಾಪಾಯತಃ ಸಪದಿನಃ ॥ ೫ ॥

ವ್ಯಾತ್ತಾನನಾಂತಕ ಸಮಾತ್ತಾಯುಧೋರುಭುಜವೈತ್ತಾಯನೀದ್ವಜ ಚಮೂ-
ಚೇತ್ತಾನುಜಾರ್ಥಮಿವ ಭೇತ್ತಾ ಸ್ವಕಾವತಮಸೋತ್ತಾನ ಪರ್ವತತತೇಃ ।
ಸ್ಯಾತ್ತಾನಿಲಾಗಮ್ಯಮಹೋತ್ತಾನತೀಕ್ಷ್ಣಪವಿರೌತ್ತಾನಪಾದಿಯತಿರಾಡ್
ವೇತ್ತಾ ಹಯಾನನತನೂತ್ತಾರಣಾಸ್ಯ ಮಮ ತೋತ್ತಾ ಭವಾರ್ತಿಮತುಲಾಮ್ ॥ ೬ ॥

ಶ್ರೀಪಾದರಾಜಗುರುವರ್ಣನಪದ್ಮಷಟ್ಕಂ
ಶ್ರೀವ್ಯಾಸರಾಜಯತಿಶಿಷ್ಯಗಣಾರ್ಚ್ಯಭೇಣ ।
ಶ್ರೀವಾದಿರಾಜಯತಿನಾ ರಚಿತಂ ಹಿ ಶಶ್ವತ್
ಸೇವಾದರೇಣ ಪಠತಾಂ ಪ್ರಕರೋತ್ಯಭೀಷ್ಟಮ್ ॥ ೭ ॥

॥ ಇತಿ ಶ್ರೀವಾದಿರಾಜಯತಿಕೃತ ಶ್ರೀಪಾದರಾಜಸ್ತುತಿಃ ಸಮಾಪ್ತಃ ॥

✡ ✡ ✡

ಶ್ರೀಶ್ರೀಪಾದರಾಜಪಂಚರತ್ನಮಾಲಿಕಾ

◆ ◆

ಶ್ರೀಪಾದರಾಜಪಂಚರತ್ನಮಾಲಿಕಾ ಸ್ತೋತ್ರವನ್ನು ಬರೆದವರು ಶ್ರೀವ್ಯಾಸರಾಜರು. ಶ್ರೀಬ್ರಹ್ಮಣ್ಯತೀರ್ಥರಿಂದ ಸನ್ಯಾಸದೀಕ್ಷೆಯನ್ನು ಪಡೆದು ಶ್ರೀಪಾದರಾಜರಲ್ಲಿ ವಿದ್ಯಾಭ್ಯಾಸವನ್ನು ಮಾಡಿದ ಶ್ರೀವ್ಯಾಸರಾಜರು ತಮ್ಮ ವಿದ್ಯಾಗುರುಗಳನ್ನು ಕೊಂಡಾಡುವ ಸ್ತುತಿ ಇದು.

ಶ್ರೀಪಾದರಾಜರು ಸಂಸಾರವೆಂಬ ಘೋರವಾದ ಅನೆಯನ್ನು ಭೇದಿಸುವ ಸಿಂಹ, ವಾದಿಗಳೆಂಬ ಕರೀಂದ್ರಗಳ ಕುಂಭಸ್ಥಲವನ್ನು ಭೇದಿಸುವ ಮೃಗರಾಜನೆಂದು ವರ್ಣಿಸುತ್ತ ಶ್ರೀಪಾದರಾಜ ಬೃಂದಾವನವನ್ನು ಸೇವಿಸುವವರಿಗೆ ಸುವಿಮಲವಾದ ವಿದ್ಯೆ, ಪಶು, ಸಂತತಿ, ಜ್ಞಾನ, ಕೀರ್ತಿ ಮತ್ತು ಸೌಖ್ಯ ಮೊದಲಾದವುಗಳು ಲಭಿಸುವುವೆಂದು ಇಲ್ಲಿ ನಿರೂಪಿಸಲಾಗಿದೆ.

ಶ್ರೀಪಾದರಾಜ ಬೃಂದಾವನ ದರ್ಶನದಿಂದ ಕಾಶೀ, ಕೇದಾರ, ಮಾಯಾ, ಕರಿಗಿರಿ, ಮಥುರಾ, ದ್ವಾರಕಾ, ವೆಂಕಟಾದ್ರಿ, ಶ್ರೀಮುಷ್ಣ ಮೊದಲಾದ ಕ್ಷೇತ್ರದರ್ಶನದ ಫಲವು ದೊರೆಯುವುದಲ್ಲದೆ, ಗುಲ್ಮಾದಿ ವ್ಯಾಧಿಗಳ ಪರಿಹಾರ, ಭೂತ-ಬೇತಾಳ ಬಾಧೆಗಳು ನಿವಾರಣೆಯಾಗುವುವು ಅಖಿಲ ಸನ್ಮಂಗಳವಾಗುವುದೆಂದು ಫಲಶ್ರುತಿಯಲ್ಲಿ ಹೇಳಲಾಗಿದೆ.

ಶ್ರೀಪಾದರಾಜರ ಜೀವನದ ಕೆಲವು ಮುಖಗಳನ್ನು ಈ ಕೃತಿ ಪರಿಚಯಿಸುತ್ತದೆ.

◆ ◆

ವಂದೇ ಶ್ರೀಪಾದರಾಜಂ ರುಚಿತಮಹೃದಯಂ ಪೂಜಿತ ಶ್ರೀಸಹಾಯಂ
ನಿರ್ಧೂತಾಶೇಷಹೇಯಂ ನಿಭೃತಶುಭಚಯಂ ಭೂಮಿದೇವಾಭಿಗೇಯಮ್ ।
ವಿಪ್ರೇಭ್ಯೋ ದತ್ತದೇಯಂ ನಿಜಜನಸದಯಂ ಖಂಡಿತಾಶೇಷಮಾಯಂ
ನಿಷ್ಕ್ರೃತ ಸ್ವರ್ಣಕಾಯಂ ಬಹುಗುಣನಿಲಯಂ ವಾದಿಸಂಘೈರಜೇಯಮ್ ॥ ೧ ॥

ಕ್ಷುಬ್ಧಾದ್ವಾದಿಕರೀಂದ್ರ ವಾದಿಪಟಲೀಕುಂಭಚ್ಛಟಾಭೇದನ-
ಪ್ರೌಢಪ್ರಾಭವತರ್ಕಸಂಘನಿಕರಶ್ರೇಣೀವಿಲಾಸೋಜ್ಜ್ವಲಃ ।
ಗೋಪೀನಾಥಮಹೇಂದ್ರಶೇಖರಲಸತ್ಪಾದಸ್ಥಲಾವಾಸಕೃತ್
ಪಾಯಾನ್ನಾಂ ಭವಘೋರಕುಂಜರಭಯಾತ್ ಶ್ರೀಪಾದರಾಟ್ ಕೇಸರೀ ॥ ೨ ॥

ಬಿಭ್ರಾಣಂ ಕ್ಷೌಮವಾಸಃ ಕರಧೃತವಲಯಂ ಹಾರಕೇಯೂರ ಕಾಂಚೀ-
ಗ್ರೈವೇಯ ಸ್ವರ್ಣಮಾಲಾಮಣಿಗಣಖಚಿತಾನೇಕಭೂಷಾ ಪ್ರಕರ್ಷಮ್ ।
ಭುಂಜಾನಂ ಷಷ್ಟಿಶಾಕಂ ಹಯಗಜಶಿಬಿಕಾನರ್ಘ್ಯಶಯ್ಯಾರಥಾಢ್ಯಂ
ವಂದೇ ಶ್ರೀಪಾದರಾಜಂ ತ್ರಿಭುವನವಿದಿತಂ ಘೋರವಾದಿ ಪ್ರಶಾಂತ್ಯೈ ॥ ೩ ॥

ಯದ್ವೃಂದಾವನ ಸೇವಯಾ ಸುವಿಮಲಾಂ ವಿದ್ಯಾಂ ಪಶೂನ್ ಸಂತತಿಂ
ಜ್ಞಾನಾಜ್ಞಾನಮನಲ್ಪಕೀರ್ತಿನಿವಹಂ ಪ್ರಾಪ್ನೋತಿ ಸೌಖ್ಯಂ ಜನಃ ।
ತಂ ವಂದೇ ನರಸಿಂಹತೀರ್ಥನಿಲಯಂ ಶ್ರೀವ್ಯಾಸರಾಟ್ ಪೂಜಿತಂ
ಧ್ಯಾಯಂತಂ ಮನಸಾ ನೃಸಿಂಹಚರಣಾಂ ಶ್ರೀಪಾದರಾಜಂ ಗುರುಮ್ ॥ ೪ ॥

ಕಾಶೀ ಕೇದಾರ ಮಾಯಾ ಕರಿಗಿರಿ ಮಧುರಾ ದ್ವಾರಕಾ ವೇಂಕಟಾದ್ರಿ
ಶ್ರೀಮುಷ್ಣಕ್ಷೇತ್ರ ಪೂರ್ವ ತ್ರಿಭುವನವಿಲಸತ್ಪುಣ್ಯಭೂಮಾನಿವಾಸಃ ।
ಗುಲ್ಮಾದಿವ್ಯಾಧಿಹರ್ತಾಗುರುಗುಣನಿಲಯೋ ಭೂತವೇತಾಲಭೇದೀ
ಭೂಯಾತ್ ಶ್ರೀಪಾದರಾಜೋ ನಿಖಿಲಶುಭತತಿಪ್ರಾಪ್ತಯೇ ಸಂತತಂ ನಃ ॥ ೫ ॥

॥ ಇತಿ ಶ್ರೀವ್ಯಾಸರಾಜವಿರಚಿತಾ ಶ್ರೀಶ್ರೀಪಾದರಾಜಪಂಚರತ್ನಮಾಲಿಕಾ ॥

✡ ✡ ✡

ಶ್ರೀಶ್ರೀಪಾದರಾಜಾಷ್ಟಕಮ್

◆ ◆

ಶ್ರೀವಿಜಯೇಂದ್ರರು ಈ ಅಷ್ಟಕವನ್ನು ರಚಿಸಿರುವರು. ಈ ಕೃತಿಯಲ್ಲಿ ಶ್ರೀಪಾದರಾಜರ ಅಗಮ್ಯ ಮಹಿಮೆಗಳನ್ನು ವರ್ಣಿಸಲಾಗಿದೆ.

ಸಾಳ್ವ ಭೂಪಾಲ ನರಸಿಂಹರಾಯನು ಬ್ರಹ್ಮಹತ್ಯಾದೋಷ ನಿವಾರಣೆಗಾಗಿ ಶ್ರೀವಾದಿರಾಜರಲ್ಲಿಗೆ ಬಂದು, ಅವನ ಬ್ರಹ್ಮಹತ್ಯಾ ದೋಷ ನಿವಾರಣೆಗಾಗಿ ಶ್ರೀಪಾದರಾಜರ ಅನುಗ್ರಹವಿಶೇಷದಿಂದ ಸಾಮ್ರಾಜ್ಯ ನಿಸ್ತರಣೆಯಾಗಿ ಅವನಿಗೆ ಗುರುಗಳಾಗಿ ಮಾರ್ಗದರ್ಶನ ನೀಡಿ, ಅವನ ಅಧ್ವಯನಕ್ಕೆ ಕಾರಣರಾದವರು ಶ್ರೀಪಾದರಾಜರು. ಮುಳುಬಾಗಿಲಿನ ಈ ತಪೋಮೂರ್ತಿ ಸಹಸ್ರಾರು ವಿದ್ವಾಂಸರನ್ನು, ಅವರಲ್ಲಿ ಶ್ರೀವ್ಯಾಸರಾಜರಂಥ ವಿಭೂತಿ-ಪುರುಷರನ್ನು ನಿರ್ಮಿಸಿ, ಅನೇಕ ವಿಧ ಅಪರಿಮಿತ ಮಹಿಮೆಗಳನ್ನು ತೋರ್ಪಡಿಸಿ, ಸರ್ವ ಜನಾದರಣೀಯವಾಗಿ, ವಿಶ್ವವಂದ್ಯರಾಗಿ, ಸಮಾಜದ ಸರ್ವತೋಮುಖ ಪ್ರಗತಿಯ ಉತ್ತುಂಗ ಶಿಖರಗಳನ್ನು ಏರಿ ನಿಂತು ೯೭ ವರ್ಷಗಳ ಸುದೀರ್ಘ ಸಾರ್ಥಕ ಜೀವನ ನಡೆಸಿದ ಶ್ರೀಪಾದರಾಜರ ಸೇವೆ, ಬೃಂದಾವನ ದರ್ಶನ ಎಂತಹ ಯಶೋಭಾಗ್ಯವನ್ನೂ, ಅನರ್ಘ್ಯ ಫಲವನ್ನೂ ಈ ಅಷ್ಟಕವು ಹೇಳುತ್ತದೆ.

◆ ◆

ಶ್ರೀಮದ್ವೀರನೃಸಿಂಹನಾಮನೃಪತೇರ್ಭೂದೇವ ಹತ್ಯಾವ್ಯಥಾಮ್ ।
ದೂರೀಕೃತ್ಯ ತದರ್ಪಿತೋಜ್ಜ್ವಲಮಹಾಸಿಂಹಾಸನೇ ಸಂಸ್ಥಿತಃ ॥
ಶ್ರೀಮತ್ಪೂರ್ವಕವಾಟನಾಮಕಪುರೇ ಸರ್ವೇಷ್ಟಸಿದ್ಧಿಪ್ರದಃ ।
ಶ್ರೀಶ್ರೀಪಾದಯತೀಂದ್ರಶೇಖರಮಣಿಕೇ ಭೂಯಾತ್ಸತಾಂ ಶ್ರೇಯಸೇ ॥ ೧ ॥

ಭೇರೀ ಮಂಜುಳ ಕಾಹಲೀ ಮುಖ ಮಹಾ ನಾನಾವಿಧ ಪ್ರೋಜ್ಜ್ವಲ ।
ಧ್ವಾಂತಧ್ವಾನನಿರಸ್ತವಾದಿನಿಚಯಃ ಶ್ರೀವಾದಿರಾಜೋಸ್ತು ನಃ ॥
ಸೌವರ್ಣಾಮಲದಂಡಚಾಮರಸಿತಚ್ಛತ್ರೋರುಹೈಮೋಲ್ಲಸತ್ ।
ಯಷ್ಟಿದ್ವಂದ್ವಸುಪಂಚವರ್ಣವಸನೋ ಭೂಯಾತ್ಸನಃ ಶ್ರೇಯಸೇ ॥ ೨ ॥

ಪಾದತ್ರಾಣಯುಗಂ ಕ್ಷಣಾತ್ಸುಚರಣದ್ವಂದ್ವೇನ ಸಂಯೋಜ್ಯತತ್ ।
ದುಶ್ಚಾಸ್ತ್ರಂ ಪದಕಂಜರಕ್ಷಣಯುಗೇ ಬಂದೀಕೃತಂ ಕೂಜತೀ ॥
ಧೀರಾನ್ಮೋಚಯತೇತಿ ಬಂದಿಷು ಪುರೋಗರ್ಜತ್ಸು ಸಿಂಹಾಸನಮ್ ।
ಗಚ್ಛನ್ಮೌಕ್ತಿಕ ಕಂಚುಕೋಜ್ಜ್ವಲತನುರ್ಭೂಯಾತ್ಸನಃ ಶ್ರೇಯಸೇ ॥ ೩ ॥

ನಾನಾಶಾಕ ಸುಭಕ್ಷ್ಯಪಾಯಸಘೃತಂ ಪ್ರಾಜ್ಯಾನ್ನ ಭುಕ್ತ್ವಾ ಜನೇ ।
ನಿಂದಾಂ ಕುರ್ವತಿ ಕಾನನಂ ಗತವತೇ ಯಸ್ಮೈ ದದೌ ಶ್ರೀಪತಿಃ ॥
ಮೃಷ್ಟಾನ್ನಂ ಸಘೃತಂ ಪಯೋದಧಿಯುತಂ ಸೋಪಸ್ಕರಂ ಕಾನನೇ ।
ಗೋಪೀನಾಥಪದಾಬ್ಜಸಕ್ತಸುಮನಾಃ ಭೂಯಾತ್ಸನಃ ಶ್ರೇಯಸೇ ॥ ೪ ॥

ಚೈತ್ರೇ ಮಾಸಿ ಕಠೋರಭಾಸ್ಕರಕರೈಸ್ಸಂತಪ್ತಗಾತ್ರಾಖಿಲ ।
ಸ್ವಾಂತೇವಾಸಿಭರರ್ಥಿಭಿಸ್ವತಪಸಾ ನಿರ್ಮಾಯ ರಮ್ಯಂ ಸರಃ ॥
ಸಾರಾಮೋ ಯತಿಪುಂಗವಃ ಪರಿಜನಾನಾಪ್ಯಾಯಯಾಮಾಸಯ- ।
ಚ್ಛಾಯಾತೋಯವಿಹೀನ ಕಾನನತಲೇಭ್ಭೂಯಾತ್ಸನಃ ಶ್ರೇಯಸೇ ॥ ೫ ॥

ತ್ವಂ ಚೇನ್ಮಾಂ ಜಯಸಿದ್ಧಿಚಾಮರಧುನೀಂ ಗಚ್ಛಾಮಿನೋ ಚೇತ್ತದಾ ।
ಸನ್ಯಸ್ಯೋಭವ ಪಂಡಿತೇತಿ ಸದಸಿ ಕ್ಷೋಣೀಪತೇಃ ಪತ್ರಿಕಾಮ್ ॥
ಆಲೇಖ್ಯ ಪ್ರಿಯಶಿಷ್ಯವರ್ಯ ಯತಿನಾ ಯತ್ಕಾಶ್ರಮಂ ವಾದಿನಮ್ ।
ಜಿತ್ವಾ ದಾಪಿತವಾಶ್ಚ ತಸ್ಯ ಸುಮತೀರ್ಭೂಯಾತ್ಸನಃ ಶ್ರೇಯಸೇ ॥ ೬ ॥

ವೈರಾಗ್ಯಾಮಲಭಕ್ತಿನಿರ್ಮಲ ಮಹಾಜ್ಞಾನಾದಿಭಾಗ್ಯೋಜ್ಜ್ವಲಃ ।
ಶ್ರೀಮತ್ ಶ್ರೀಪತಿರಂಗವಿಠ್ಠಲಪದಾಂಭೋಜಃ ಪ್ರಭಾವಂ ಹೃದೀ ॥
ಸ್ಮಾರಂಸ್ಮಾರಮಹರ್ನಿಶಂ ನಿಜಮಹಾನಂದಾಬ್ಧಿಮಗ್ನೋ ಗುರುಃ ।
ಲೋಕಾನಂದಕರೋರು ರಮ್ಯಮಹಿಮಾ ಭೂಯಾತ್ಸನಃ ಶ್ರೇಯಸೇ ॥ ೭ ॥

ಯದ್ವೃಂದಾವನಸೇವಯಾ ಭುವಿಜನಃ ಪ್ರಾಪ್ನೋತಿಸೌಖ್ಯಂ ಮಹತ್ ।
ಯದ್ವೃಂದಾವನ ಮೃತ್ತಿಕಾಪಿ ನಟಲೇ ಭಕ್ತ್ಯಾಧೃತಾ ಸೇವಿತಾ ॥
ಭೂತೋಚ್ಚಾಟನಕಾರಿಣೀ ಕ್ಷಯಮಹಾಪಸ್ಮಾರಗುಲ್ಮಾಧಿಕಾ- ।
ನೇಕವ್ಯಾಧಿನಿವಾರಣೈಕಕರುಣಾರ್ಭೂಯಾತ್ಸನಃ ಶ್ರೇಯಸೇ ॥ ೮ ॥

॥ ಇತಿ ಶ್ರೀವಿಜಯೀಂದ್ರಯತಿಕೃತಂ ಶ್ರೀಶ್ರೀಪಾದರಾಜಾಷ್ಟಕಂ ಸಮಾಪ್ತಮ್ ॥

ನವಪದ್ಯಸುರತ್ನಮಾಲಾ

◆ ◆

ಶ್ರೀಕಾಂತತೀರ್ಥಕರರಂಜಾತರಾದ ಶ್ರೀನಿಧಿತೀರ್ಥರು ಈ ಶ್ರೀಪಾದರಾಜನ ನವಪದ್ಯ-ಸುರತ್ನಮಾಲೆಯನ್ನು ರಚಿಸಿದ್ದಾರೆ.

ಶ್ರೀಪೂರ್ಣಪ್ರಜ್ಞರ ಕುಲವೆಂಬ ಸಾಗರಕ್ಕೆ ಚಂದ್ರನಂತಿರುವ ಶ್ರೀವ್ಯಾಸರಾಜರ ಗುರುಗಳಾದ, ಶ್ರೀರಂಗವಿಠ್ಠಲ ಪಾದಪದ್ಮಾರಾಧಕರಾದ, ಅಖಿಲಜನರ ಸಕಲ ಮನೋರಥ-ಗಳನ್ನು ಪೂರೈಸುತ್ತಿರುವ ಶ್ರೀಪಾದರಾಜನ್ನು ನಮಿಸುತ್ತ ಅವರ ಅನೇಕ ಅಗಮ್ಯ ಮಹಿಮೆಗಳನ್ನು ವರ್ಣಿಸಲಾಗಿದೆ. ಪರೀಕ್ಷೆಗಾಗಿ ಕುಹಕಿಗಳು ಅರ್ಪಿಸಿದ ನಾನಾಪರಿಯ ಹಿಂಸೆಗಳನ್ನು ಶ್ರೀಹರಿಗೆ ಅರ್ಪಿಸಿ, ಭುಂಜಿಸಿದ ಮಹಿಮೆ, ಪಾತಪ್ರಮಚನಕಾಲದಲ್ಲಿ ಶ್ರೀರಘುನಾಥತೀರ್ಥರು ವಿಮಾನಾರೂಢರಾಗಿ ದೇವಲೋಕಕ್ಕೆ ಪ್ರಯಾಣ ಬೆಳೆಸಿದಾಗ ಸ್ವರ್ಗೀಯ ಕುಸುಮವನ್ನು ಅನುಗ್ರಹಿಸಿ ಎರಡು ಬಾರಿ ದರ್ಶನವಿತ್ತ ರೋಮಾಂಚಕ ಘಟನೆ, ವಿಪ್ರಹತ್ಯಾದೋಷವನ್ನು ಶಂಖೋದಕದಿಂದ ಕಳೆಯಲು ಕೆಲವು ಅಪ್ರಬುದ್ಧರು ಶಂಕಿಸಿದಾಗ ಅವರಿಂದ ಕೊಡಲ್ಪಟ್ಟ ಗೇರೆಣ್ಣೆಯ ಕಪ್ಪುಬಟ್ಟೆಯನ್ನು ಬಿಳಿ ಮಾಡಿದ ಮಹಿಮೆ ಇವೇ ಮೊದಲಾದ ವಿಷಯಗಳನ್ನು ಈ ಸ್ತೋತ್ರವು ಪ್ರಸ್ತುತಪಡಿಸಿದೆ.

ದುರ್ವಾದಿಗಳೆಂಬ ಆನೆಗಳ ಗಂಡಸ್ಥಳವನ್ನು ಭೇದಿಸುವ ದೀಕ್ಷೆಯುಳ್ಳ ರಮಾ-ರಮಣನ ಚರಣಕಮಲಗಳೆಂಬ ಗುಹೆಯಲ್ಲಿ ವಾಸಿಸುವ, ವ್ಯಾಖ್ಯಾನ ಪ್ರವಚನವೆಂಬ ಗರ್ಜನೆಯಿಂದ ರಚಿತವಾದ ಮೃಗೇಂದ್ರನಂತೆ ಇರುವ ಶ್ರೀಪಾದರಾಜಗುರುಗಳನ್ನು ವಂದಿಸುತ್ತ ಈ ನವಪದ್ಯರತ್ನಮಾಲೆಯನ್ನು ಈ ಭೂಮಿಯಲ್ಲಿ ಶುದ್ಧ ಮನಸ್ಸಿನಿಂದ ಪ್ರತಿದಿನವೂ ಯಾರು ಧರಿಸುವರೋ ಅಂತಹವರಿಗೆ ಸಕಲೇಷ್ಟಗಳು ಸಿದ್ಧಿಸುವುವು ಎಂದು ಸ್ತುತಿಕಾರರು ಫಲವನ್ನು ಹೇಳಿದ್ದಾರೆ.

◆ ◆

ಶ್ರೀಕಾಂತತೀರ್ಥ ಗುರುರಾಜಕರಾಬ್ಜಜಾತ
ಶ್ರೀಶ್ರೀನಿಧೀರ್ಯತಿರುದಾರ ಗುಣೋಲ್ಲಸಂತೀಮ್ ।
ಶ್ರೀಪಾದರಾಜ ನವಪದ್ಯಸುರತ್ನಮಾಲಾಂ
ಭಕ್ತ್ಯಾ ಕರೋಮಿ ಗುರುರಾಜವರಪ್ರಸಾದಾತ್ ॥ ೧ ॥

ಶ್ರೀಪೂರ್ಣಬೋಧಕುಲವಾರ್ಧಿಸುಧಾಕರಾಯ
ಶ್ರೀವ್ಯಾಸರಾಜಗುರುವರ್ಯತಿಶೇವಿರಾಯ ।
ಶ್ರೀರಂಗವಿಠ್ಠಲಪದಾಂಬುಜಬಂಭರಾಯ
ಶ್ರೀಪಾದರಾಜಗುರವೇಽಸ್ತು ನಮಶ್ಶುಭಾಯ ॥ ೨ ॥

ಸಂಪೂರಿತಾಖಿಲಜನೋರು ಮನೋರಥಾಯ
ಶ್ರೀಮನ್ನೃಸಿಂಹಸರಸೀತಟಸಂಸ್ಥಿತಾಯ ।
ಶ್ರೀಮತ್ಸುವರ್ಣಸಮವರ್ಣಕರಾಬ್ಜಜಾಯ
ಶ್ರೀಪಾದರಾಜಗುರವೇ ಽಸ್ತು ನಮಶ್ಶುಭಾಯ ॥ ೩ ॥

ಶ್ರೀವ್ಯಾಸರಾಜಫಣಿಬಂಧನಿವಾರಕಾಯ
ತದ್ಭಾಷಯೈವ ಫಣಿರಾಜ ಸುತೋಷಕಾಯ ।
ಶ್ರೀಮತ್ಸುರತ್ನಖಚಿತೋಜ್ಜ್ವಲಕುಂಡಲಾಯ
ಶ್ರೀಪಾದರಾಜಗುರವೇ ಽಸ್ತು ನಮಶ್ಶುಭಾಯ ॥ ೪ ॥

ಶ್ರೀಗೋಪಿಕಾಪತಿನಿವೇದಿತ ಷಷ್ಟಿಶಾಕಾ
ಮುಖ್ಯೋರು ಭೋಜನ ವಿದೂಷಣತತ್ಪರಾಣಾಮ್ ।
ಸಂದರ್ಶಿತೋರು ನಿಜಕುಕ್ಷಿಗತಾರ್ದ್ರಶಾಕಾ
ಶ್ರೀಪಾದರಾಜಗುರವೇ ಽಸ್ತು ನಮಶ್ಶುಭಾಯ ॥ ೫ ॥

ಶ್ರೀಮದ್ಯತೀಶ ರಘುನಾಥಮುನೇರ್ವಿಮಾನಾತ್
ಪುಷ್ಪೇ ಸ್ವಮೂರ್ಧ್ನಿಪ್ರತತಿಪ್ರಶಮೀಕ್ಷಣೋಸ್ತ್ರಾ ।
ಸಂಪ್ರೇರಿತೋರು ರಘುನಾಥಮುನೀಶ್ವರಾಯ
ಶ್ರೀಪಾದರಾಜಗುರವೇ ಽಸ್ತು ನಮಶ್ಶುಭಾಯ ॥ ೬ ॥

ಶಂಖಸ್ಥಿತೇನ ಪಯಸಾ ದ್ವಿಜಘಾತಪಾಪೇ
ದೂರೀಕೃತೇ ಬಹುಜನೇಷು ವಿಶಂಕತೇಷು ।
ತೇನೈವ ಶುದ್ಧಮಲಿನಾತಿಪಟಿಚ್ಛರಾಯ
ಶ್ರೀಪಾದರಾಜಗುರವೇ ಽಸ್ತು ನಮಶ್ಶುಭಾಯ ॥ ೭ ॥

ಶ್ರೀಮನ್ನೃಸಿಂಹಸರಸೀ ಪಯಸಿ ಪ್ರಮೋದಾ-
ದ್ಯಾಯಾಮಿ ತಿಷ್ಠ ಸರಸೀ ಶುಭಕಾರಿ ತೀರೇ ।
ಸ್ವಪ್ನೇ ನಿಬೋಧ್ಯ ನಳಿನೀ ಜಯದಕ್ಷಗಾಭೂತ್
ಶ್ರೀಪಾದರಾಜಗುರವೇ ಽಸ್ತು ನಮಶ್ಶುಭಾಯ ॥ ೮ ॥

ದುರ್ವಾದಿವಾರಣವಿದಾರಣ ದೀಕ್ಷಿತಾಯ
ಶ್ರೀಮದ್ರಮೇಶಚರಣಾಬ್ಜಗ್ರಹಾಶ್ರಯಾಯ ।
ವ್ಯಾಖ್ಯಾನಿನಾದ ರುಚಿರೋರು ಮೃಗಾಧಿಪಾಯ
ಶ್ರೀಪಾದರಾಜಗುರವೇ ಽಸ್ತು ನಮಶ್ಶುಭಾಯ ॥ ೯ ॥

ಕಸ್ತೂರಿಕಾದಿ ಸಮಲಂಕೃತ ದಿವ್ಯದೇಹಂ
ದೃಷ್ಟ್ವಾ, ವಿದೂಷಯತಿ ಮೂಢಜನೇ ಕ್ಷಣೇನ ।
ತತ್ಯಾಗಧಾರಿತ ತನೂಃ ಪರಿರಕ್ಷಕಾಯ
ಶ್ರೀಪಾದರಾಜಗುರವೇ ಽಸ್ತು ನಮಶ್ಶುಭಾಯ ॥ ೧೦ ॥

ಶ್ರೀಪಾದರಾಜ ನವಪದ್ಯಸುರತ್ನಮಾಲಾಂ
ಯೇ ಧಾರಯಂತ್ಯನುದಿನಂ ಭುವಿ ಶುದ್ಧಭಾವಾಃ ।
ವೃಂದಾವನಸ್ಯ ಪುರತಸ್ಸಕಲೇಷ್ಟದಶ್ಚ
ಶ್ರೀಪಾದರಾಜಗುರುರಾಜಹೃದಬ್ಜವಾಸೀ ॥ ೧೧ ॥

॥ ಇತಿ ಶ್ರೀನಿಧಿಯತಿವರೇಣ್ಯಕೃತಾ ನವಪದ್ಯಸುರತ್ನಮಾಲಾ ॥

✡ ✡ ✡

ಶ್ರೀಶ್ರೀಪಾದರಾಜಾಷ್ಟಕಮ್

◆ ◆

ಶ್ರೀಕಾಂತತೀರ್ಥಕರಸಂಜಾತರಾದ ಶ್ರೀಶ್ರೀನಿಧಿತೀರ್ಥರು ಶ್ರೀಪಾದರಾಜರ ಮೇಲೆ ಮಾಡಿದ ಅಷ್ಟಕವಿದು. ಈ ಅಷ್ಟಕದಲ್ಲಿ ಶ್ರೀಪಾದರಾಜರ ಸಮಗ್ರ ಚರಿತ್ರೆಯನ್ನು ಸ್ತೋತ್ರಕಾರರು ರಚಿಸಿರುವರು.

ಶ್ರೀಪಾದರಾಜರ ಅಗಮ್ಯ ಮಹಿಮೆಯನ್ನು, ಅವರು ದ್ವೈತವಾಙ್ಮಯಕ್ಕೆ ನೀಡಿದ ಕೊಡುಗೆಯನ್ನು ವರ್ಣಿಸಿ, ಅಂತಹ ಶ್ರೀಪಾದರಾಜರು ನಿರಂತರ ಶ್ರೇಯಸ್ಸನ್ನು ಕರುಣಿಸುವಂತೆ ಪ್ರಾರ್ಥಿಸಲಾಗಿದೆ.

◆ ◆

ಶ್ರೀಮತ್ಯಾ ಜಾಂಬವತ್ಯಾ ಯದುಪತಿನಗರೇ ಪೂಜಿತಃ ಫಲ್ಗುಣೇನ
ಪ್ರಾಪ್ತಸ್ತೇನಾರ್ಚಿತಾಂಘ್ರಿಸ್ಸಕಲ ಸುಖಕರೇ ಪಾಂಡುರಂಗೇ ಽಂತರಂಗೇ ।
ಭೂಮೌ ಕ್ಷೇತ್ರೇ ಽಥ ಗುಪ್ತಸ್ಸಕಲಬುಧಗುರೋರ್ಯಸ್ಯ ಲಬ್ಧೋ ಽವತಾನ್ಮಾಂ
ಸ್ವಪ್ನೇ ಶ್ರೀಮಾನ್ ರಮೇಶಃ ಪ್ರಭವರತನಯಾ ಸತ್ಯಭಾಮಾಸಮೇತಃ ॥ ೧ ॥

ಶ್ರೀಮತ್ ಶ್ರೀಪಾದರಾಜಪ್ರಮುಖಯತಿವರಾನಾದರಾಧೀತಶಾಸ್ತ್ರಾ-
ನಾಹೂಯಾತಿ ಪ್ರಮೋದಾ ಪ್ರವದತ ಭವತಾಂ ತಾವದೇವಾದ್ಯ ಶಿಷ್ಯಃ ।
ಯಾವತ್ಸಾಮರ್ಥ್ಯಮಸ್ತೀತ್ಯುದಿತಮತಿ ಗುರೌ ಪ್ರಾಗುಪನ್ಯಸ್ತವಾನ್ಯಃ
ಶ್ರೇಮಾನಾದ್ಯಂತಯುಕ್ತಾಂಬುಧಿಸದಸಿ ಸುಧಾಂ ಸೋ ಽವತಾನ್ಮಾಂ ಯತೀಂದ್ರಃ ॥ ೨ ॥

ಸಾಯಂಕಾಲೇ ಕದಾಚಿತ್ ಗುಣಗಣಭರಿತೇ ಸ್ವರ್ಣವರ್ಣೇ ಯತೀಂದ್ರೇ
ದೂರೇ ಗ್ರಾಮಃ ಪುರಸ್ತಾತ್ತಿಯತಿ ಕಥಯ ಮೇ ಬಾಲಕೇತಿ ಬ್ರುವಾಣೇ ।
ಸೂರ್ಯಂ ಮಾಂ ಸ್ಪೃಶಾಂ ಸ್ವಂ ಸಕಲಬುಧಮಣೇ ಪಶ್ಯ ಕಿಂ ತ್ವಾಂ ಬ್ರವೇಹಂ
ಯೋಽವಾದೀತ್ಸ್ವರ್ಣವರ್ಣಂ ಗುರುಮಿತಿ ಸಮಸಾ ಸೋಽವತಾನ್ಮಾಂ ಯತೀಂದ್ರಃ ॥ ೩ ॥

ಜಿತ್ವಾನೀಶಂ ನೃಪೇಣ ಪ್ರಬಲ ಗಜಪತಿಂ ಕಂಕಣಾದ್ವಂದ್ವಮೇಕಮ್
ಯಸ್ಮೈ ದತ್ತಂ ಮನೋಜ್ಞಂ ತದನು ನರಪತೇ ಭೋಗಿನಾರ್ಯೋ ನಿಶಾಯಾಮ್ ।
ಯದ್ರೂಪಃ ಶ್ರೀರಮೇಶಃ ಪರಿಜನಸಹಿತೇ ಜಾಗರೂಕೇ ದ್ವಿತೀಯಮ್
ದತ್ತಂ ಭೂಪಾಳಮೌಳೌ ಪುನರಪಿ ದದತಾ ಸೋಽವತಾನ್ಮಾಂ ಯತೀಂದ್ರಃ ॥ ೪ ॥

ಪಾತುಃ ಶ್ರೀಪಾದರಾಜ ಸಖಿವರ ರಘುನಾಥಾರ್ಯಯುಕ್ತಃ ಕದಾಚಿತ್
ಗಂಗಾಸ್ನಾನಾಯ ಗಚ್ಛನ್ ಪತಿನೃಪಸದನಂ ಪ್ರಾಪ್ಯ ಭೈಕ್ಷಂ ಯಯಾಚೇ ।
ಪಾದಪ್ರಕ್ಷಾಳನಾರ್ಥಂ ಸ್ಥಿತವತಿ ಯತಿಪೇ ಭರ್ತೃನಾಪಾಸ್ಯ ಕೋಪಾತ್
ಗೇಹೇ ಧಗ್ಧೇತಿ ನಮ್ರಂ ಪದಯುಗಳಗತಂ ಯೋ ರರಕ್ಷಾವನೀಶಮ್ ॥ ೫ ॥

ಯಚ್ಛಿಷ್ಯೋ ವ್ಯಾಸರಾಜಃ ಪ್ರತಿಭಟವಿಜನತಾ ಸರ್ವಗರ್ವಾಪಹರ್ತಾ
ಕರ್ತಾ ಗ್ರಂಥತ್ರಯಸ್ಯ ಪ್ರತಿಭಟವಿಜಯ ಪ್ರೋಚ್ಚಶಾಸ್ತ್ರೋತ್ತಮಸ್ಯ ।
ಪ್ರಖ್ಯಾತಾ ಯತ್ಪ್ರಶಿಷ್ಯಾ ಜಗತಿ ಚ ವಿಜಯೀಂದ್ರಾಖ್ಯ ಯೋಗೀಂದ್ರಚಂದ್ರಾ
ಶ್ರೀಮತ್ ಶ್ರೀವಾದಿರಾಜ ಪ್ರಮುಖ ಯತಿವರಾ ಸೋಽವತಾನ್ಮಾಂ ಯತೀಂದ್ರಃ ॥ ೬ ॥

ಯದ್ವಾಗ್ವಜ್ರಾಭಿದೋಚ್ಚ ಪ್ರಬಲತಮ ಮಹಾಗ್ರಂಥವಜ್ರೇಣ ಹೃಷ್ಮ
ದುರ್ವಾದಿಕ್ಷ್ಮಾಧರಾಣಾಂ ಯತಿವರಸುರಪಭ್ಕೀದಯಾಮಾಸ ಪಕ್ಷಾನ್ ।
ಯಸ್ಯ ಶ್ರೀವಾದಿರಾಜಪ್ರಮುಖಯತಿವರೈರ್ವರ್ಣಿತಂ ನೈವ ಶಕ್ಯಮ್
ಮಾಹಾತ್ಮ್ಯಂ ತಾಪಸೇಂದ್ರಃ ಸ ಭವತು ನಿತರಾಂ ಭೂಯಸೇ ಶ್ರೇಯಸೇ ಮೇ ॥ ೭ ॥

ನೀಲಾಪಾರ್ಥಾರ್ಚಿತಾಂಘ್ರಿ ಕಲುಷಚಯಹರೇ ಭೀಮರಥ್ಯಾಸುತೀರೇ
ರಂಗಕ್ಷೇತ್ರೇಽಥ ಗುಪ್ತಃ ಸಕಲಸುರಪತಿರ್ವೇಣುಗೋಪಾಲಕೃಷ್ಣಃ ।
ಸ್ವಪ್ನೇ ಲಬ್ಧೋಽಯಮಸ್ಮಾ ದ್ವಿಜವರ ಗುರವೇ ವ್ಯಾಸರಾಜಾಯ ಯೇನಾ-
ದಾಯೀ ಶ್ರೀಪಾದರಾಜಃ ಸ ಭವತು ನಿತರಾಂ ಭೂಯಸೇ ಶ್ರೇಯಸೇ ಮೇ ॥ ೮ ॥

॥ ಇತಿ ಶ್ರೀನಿಧಿಯತಿವರೇಣ್ಯಕೃತ ಶ್ರೀಪಾದರಾಜಾಷ್ಟಕಮ್ ॥

✲ ✲ ✲

ಶ್ರೀವ್ಯಾಸತೀರ್ಥಸುಪ್ರಭಾತಮ್

◆ ◆

ಶ್ರೀರಘೂತ್ತಮಾಚಾರ್ಯರೆಂಬುವರು ಈ ಸುಪ್ರಭಾತ ಸ್ತೋತ್ರವನ್ನು ರಚಿಸಿರುವರು.

ಈ ಸ್ತೋತ್ರದಲ್ಲಿ ಹರಿ-ವಾಯು-ಗುರು-ಮಧ್ವ-ಜಯತೀರ್ಥರನ್ನು ಸ್ಮರಿಸಿ, ಶ್ರೀಗೋಪಾಲಕೃಷ್ಣಪಾದಪಂಕಜಮತ್ತಭೃಂಗನಾದ, ಶ್ರೀಮದ್ವಶಾಸ್ತ್ರಸಾಗರಕ್ಕೆ ಚಂದ್ರಮನಾದ ಬ್ರಹ್ಮಣ್ಯತೀರ್ಥ ಕರಕಮಲಸಂಜಾತರಾದ ವ್ಯಾಸರಾಜರನ್ನು ಸ್ತುತಿಕಾರರು ಸ್ಮರಿಸಿದ್ದಾರೆ.

ಶ್ರೀಮಧ್ವರೇ ಮೊದಲಾದ ಯತಿಮಣಿಗಳ ಹಾರ ಮಧ್ಯದಲ್ಲಿರುವ ಅನರ್ಘ್ಯರತ್ನದಂತೆ ಶೋಭಿಸುವ ಭಕ್ತಿ-ವಿರಕ್ತಿಗಳ ಧಾಮ ಶ್ರೀವ್ಯಾಸರಾಜರು. ಶ್ರೀಪಾದರಾಜರಿಂದ ಕೊಡಲ್ಪಟ್ಟ ಶ್ರೀಗೋಪಾಲಕೃಷ್ಣನ ಸಂಪುಟವನ್ನು ತೆರೆದು ಪೂಜಿಸುತ್ತ ಆ ಭಗವಂತನು ನರ್ತಿಸುವಂತೆ ಮಾಡಿದ ಮಹಾಮಹಿಮರು ಶ್ರೀವ್ಯಾಸರಾಜರು.

ಶ್ರೀವ್ಯಾಸರಾಜರ ವಾಣಿಯು ಭವದ ತಾಪವನ್ನು ಕಳೆಯುತ್ತ ಜಗತ್ತಿಗೆ ಸಂಜೀವಿನಿಯಾಗಿದೆ ಎಂದು ವರ್ಣಿಸುತ್ತ ಅವರ ಗ್ರಂಥಗಳ ವೈಶಿಷ್ಟ್ಯವನ್ನು ಇಲ್ಲಿ ವರ್ಣಿಸಲಾಗಿದೆ.

ಶ್ರೀವ್ಯಾಸರಾಜರು ಮುಕ್ತಿ ಎಂಬ ಮಹಾಫಲದಿಂದ ಶೋಭಿಸುವ ಕಲ್ಪವೃಕ್ಷ, ಅದ್ವೈತವಾದವೆಂಬ ಕತ್ತಲೆಯನ್ನೋಡಿಸುವ ಪ್ರಚಂಡ ಸೂರ್ಯ, ದ್ವೈತಕಲಶಾರ್ಣವ ಪೂರ್ಣಚಂದ್ರ ಎಂದು ವರ್ಣಿಸುತ್ತ, ಈ ಸ್ತೋತ್ರವನ್ನು ಪಠಿಸುವ ಸರ್ವರಿಗೂ ಸರ್ವಾರ್ಥಗಳೂ ಸಿದ್ಧಿಸುವುವೆಂದು ಫಲವನ್ನು ಹೇಳಿ, ಶ್ರೀರಘೂತ್ತಮಾಚಾರ್ಯರು ಪದ್ಮಮಯವಾದ ಈ ಮಾಲೆಯನ್ನು ಶ್ರೀವ್ಯಾಸರಾಜರಿಗೆ ಸಂತೋಷದಿಂದ ಅರ್ಪಿಸುತ್ತಿದ್ದಾರೆ.

◆ ◆

ನೀಲಾದಿ ದಿವ್ಯ ವರಪೂಜಿತ ಕೃಷ್ಣಮೂರ್ತೇ
ಶ್ರೀವ್ಯಾಸತೀರ್ಥ ಗುರುಪೂಜಿತ ದಿವ್ಯಮೂರ್ತೇ ।
ಶ್ರೀಮದ್ವರಾಜ ಜಯತೀರ್ಥ ಯತೀಂದ್ರ ಮೂರ್ತೇ
ಧರ್ಮಾಧಿರಕ್ಷಕ ಗುರೋಃ ತವ ಸುಪ್ರಭಾತಮ್ ॥ ೧ ॥

ಗೋಪಾಲಕೃಷ್ಣ ಪದಪಂಕಜಮತ್ತಭೃಂಗ
ಆನಂದತೀರ್ಥ ಮುನಿವರ್ಯ ಸುಧಾಬ್ಧಿಚಂದ್ರ ।
ಬ್ರಹ್ಮಣ್ಯತೀರ್ಥ ಕರಪದ್ಮ ಸುಜಾತ ಯೋಗಿನ್
ಶ್ರೀವ್ಯಾಸತೀರ್ಥ ಭಗವಂಸ್ತವ ಸುಪ್ರಭಾತಮ್ ॥ ೨ ॥

ಮಧ್ವಾರ್ಯಪಂಕ್ತಿ ಮಣಿಹಾರಮಹಾರ್ಘಮಧ್ಯ
ರತ್ನಪ್ರಕೃಷ್ಟ ಗುಣಭಕ್ತಿ ವಿರಕ್ತಿಧಾಮನ್ ।
ಬ್ರಾಹ್ಮೋ ಮುಹೂರ್ತ ಉದಿತೋಽಖಿಲ ಭಕ್ತಿ ಕಾಲ
ಧರ್ಮಾಧಿಶಿಕ್ಷಕ ಗುರೋಸ್ತವ ಸುಪ್ರಭಾತಮ್ ॥ ೩ ॥

ಶ್ರೀಪಾದತೀರ್ಥೈಶ್ಚ ಸಮರ್ಪಿತಂ ಪರಂ
ಗೋಪಾಲಮೂರ್ತಿಂ ಸಮಪೂಜ್ಯಯನ್ ಮುದಾ ।
ನನರ್ತ ಯೋ ವೇಣುವಿಶಾರದೋ ಮಹಾನ್
ಶ್ರೀವ್ಯಾಸತೀರ್ಥಭಗವಂಸ್ತವ ಸುಪ್ರಭಾತಮ್ ॥ ೪ ॥

ಶ್ರೀಕೃಷ್ಣ ದೇವೋ ಬಹು ಸದ್ಭಗೌಘಃ
ಪೂರ್ಣಂ ಚ ರಾಜ್ಯಂ ಹಿ ಸಮರ್ಪಯನ್ ಮುದಾ ।
ಶ್ರೀಮತ್ಕುದಾರಹೃದಯೇ ಗುರುಸಾರ್ವಭೌಮೇ
ಶ್ರೀವ್ಯಾಸತೀರ್ಥ ಸುಮುನೇ ತವ ಸುಪ್ರಭಾತಮ್ ॥ ೫ ॥

ಶ್ರೀಶ್ರೀನಿವಾಸಂ ಚಿರಪೂಜಿತಂ ತಂ
ಪಟ್ಟಾಭಿರಾಮಂ ಚ ಸ ರುಕ್ಮಿಣೇಶಮ್ ।
ನತ್ವಾ ಪದಂ ತು ಕರುಣಾ ತವ ಪಾದಮೂಲೇ
ದಾಸೇಷು ಹೇ ಕಲಿವಿಲೋಪಮ ಸುಪ್ರಭಾತಮ್ ॥ ೬ ॥

ತತ್ಪುಕ್ತಿರದ್ಮ ಯತಿರಾಜ ವಚೋಽಮೃತಾಬ್ಧಿ
ಸಾರಪ್ರದಾನ ಚತುರಾ ಭವತಾಪಹಂತ್ರೀ ।
ಸಂಜೀವನಾಯ ಜಗತಾಂ ಭವತಿ ಪ್ರಕಾಮಂ
ಶ್ರೀವ್ಯಾಸತೀರ್ಥಸುಮುನೇ ತವ ಸುಪ್ರಭಾತಮ್ ॥ ೭ ॥

ಸ್ನಾತ್ವಾ ಯಥಾವಿಧಿ ಬುಧಾಃ ಲಲಿತೋರ್ಧ್ವಪುಂಡ್ರಾ
ಸಾಂಧ್ಯಂ ವಿಧಾಯ ಕರಣತ್ರಯ ಶುದ್ಧಿ ಮಾನ್ಯಾ ।
ಮಾಧ್ವಾಃ ತ್ವದರ್ಚನ ಪರಿಭ್ರಮಣಾದಿ ಭವ್ಯ-
ನಿರ್ವಾಹಕಾಃ ಉಪನತಾಸ್ತವ ಸುಪ್ರಭಾತಮ್ ॥ ೮ ॥

ಯೋ ಭಾತಿ ಮುಕ್ತಿಫಲಶೋಭಿತ ಕಲ್ಪಶಾಖೀ
ಅದ್ವೈತವಾದತಿಮಿರೋಲ್ಬಣ ಚಂಡಭಾನೋ ।
ದ್ವೈತಾಖ್ಯ ಧರ್ಮಕಲಶಾರ್ಣವ ಪೂರ್ಣಚಂದ್ರ
ಶ್ರೀವ್ಯಾಸತೀರ್ಥ ಸುಮುನೇಸ್ತವ ಸುಪ್ರಭಾತಮ್ ॥ ೯ ॥

ತರ್ಕತಾಂಡವ ಪರಿಬೃಂಹಿತ ಭವ್ಯಸೂಕ್ತಿ
ಗಂಭೀರಮಕ್ಷುಭಿತ ಸರ್ವಪರಾವಲೇಪ ।
ಶ್ರೀವ್ಯಾಸರಾಜ ಮಹನೀಯ ಹಿ ರಾಘವೇಂದ್ರ
ನಿತ್ಯಾಭಿವಂದ್ಯ ಚರಣಾಂಬುಜ ಸುಪ್ರಭಾತಮ್ ॥ ೧೦ ॥

ಲಕ್ಷ್ಮೀಪತೇಃ ಪರಶ್ಯತ ವಚೋಭಿರುಪಾಯಭಾವಂ
ಸದ್ವೈಭವಂ ಚ ಪರಮೋನ್ನತಿ ತತ್ತ್ವಮೇವಮ್ ।
ನಿರ್ಧಾಯ ಯೇನ ಜಗದುದ್ಧರಣಂ ನಿಗೂಢಂ
ಶ್ರೀಚಂದ್ರಿಕಾಕೃತಿಮಣೇಸ್ತವ ಸುಪ್ರಭಾತಮ್ ॥ ೧೧ ॥

ವಿತ್ರಾಸಿನೀ ಕುಮತಗರ್ವಪಿಶಾಚಿಕಾನಾಂ
ಸಂರಕ್ಷಿಣೀ ನಿಗಮವಿಶ್ರುತಸತ್ಪಥಸ್ಯ ।
ಸಂಸ್ಥಾಪಿನೀ ಯತಿಪತಿ ಪ್ರವರಾಶಯಸ್ಯ
ಶ್ರೀವ್ಯಾಸರಾಜ ಸುಗುರೋಸ್ತವ ಸುಪ್ರಭಾತಮ್ ॥ ೧೨ ॥

ಶ್ರೀವೇಂಕಟಾದ್ರಿಪತಿಮಂದಿರದಿವ್ಯಪೂಜಾಂ
*ಧನ್ಯೋ ಗುರುಃ ಪ್ರಾಪ್ಯ ಪುನಾತಿಲೋಕಾನ್ ।
ಸತ್ಸಂಪ್ರದಾಯ ಪರಿರಕ್ಷಣ ದಕ್ಷ ದೀಕ್ಷ
ನಿರ್ವಾಹಕಾಃ ಉಪನತಾಸ್ತವ ಸುಪ್ರಭಾತಮ್ ॥ ೧೩ ॥

ವೃಂದಾವನೇ ನವಯುತೇ ಜಗತೀತಲೇಽಸ್ಮಿನ್
ಭಕ್ತೇಷು ಸನ್ನಿಹಿತಯಾ ಬಹುಮಾನಮೂರ್ತ್ಯಾ ।
ಸರ್ವಾರ್ಥದಂ ಕಲಯಿತುಂ ಪ್ರಥಮಾನ ಕೀರ್ತೇ
ಶ್ರೀವ್ಯಾಸತೀರ್ಥ ಭಗವಂಸ್ತವ ಸುಪ್ರಭಾತಮ್ ॥ ೧೪ ॥

ಶ್ರೀವ್ಯಾಸತೀರ್ಥಸ್ಯ ತು ಸುಪ್ರಭಾತಮ್
ಯೇ ಮಾನವಾಃ ಪಠಿತುಂ ಯತಂತೇ ।
ಪ್ರಜ್ಞಾಂ ಚ ಸರ್ವಸಮಯೇ ಸಕಲಾರ್ಥಸಿದ್ಧಿಂ
ಶ್ರೀವ್ಯಾಸತೀರ್ಥ ಕೃಪಯಾ ನಿತರಾಂ ಲಭಂತೇ ॥ ೧೫ ॥

ರಘೂತ್ತಮೇನ ಕಲಿತಾ ಮಾಲಾ ಪದ್ಮಮಯೀ ಮುದಾ ।
ಅರ್ಪ್ಯತೇ ವ್ಯಾಸತೀರ್ಥಾಯ ಸುಪ್ರಭಾತೇ ದಿನೇ ದಿನೇ ॥ ೧೬ ॥

॥ ಇತಿ ಶ್ರೀರಘೂತ್ತಮಾಚಾರ್ಯಕೃತ ಶ್ರೀವ್ಯಾಸತೀರ್ಥಸುಪ್ರಭಾತಮ್ ॥

✡ ✡ ✡

* ಸಂಪ್ರಾಪ್ಯ ಧನ್ಯಯತಿ ಗುರುಃ ಪುನಾತಿ ಲೋಕಾನ್ -ಎಂದು ಪಾಠವಿರಬಹುದು.

ಶ್ರೀವ್ಯಾಸರಾಜಸ್ತೋತ್ರಮ್

◆ ◆

ಸರ್ವತಂತ್ರಸ್ವತಂತ್ರ ಶ್ರೀವಿಜಯೀಂದ್ರತೀರ್ಥರು ತಮ್ಮ ಗುರುಗಳನ್ನು ಸ್ತುತಿಸಿದ ಸ್ತೋತ್ರವಿದು. ಲಕ್ಷ್ಮೀಶ ಪಾದಪದ್ಮಾರಾಧಕ, ಪೂರ್ಣಪ್ರಜ್ಞಮತಾನುಗ, ಅದ್ವೈತವಾದ ಮೂಲಭಂಜಕರಾದ, ವಿಷಯಗಳಲ್ಲಿ ಸಂಗರಹಿತರಾದ, ಅದ್ವೈತವಾವಾಗ್ನಿಗೆ ಕಾಳ-ಮೇಘವಾದ, ರಮಾರಮಣನ ಸ್ನೇಹದಿಂದ ಪಾಪಗಳನ್ನು ಸೀಳಹಾಕಿದ, ವಾಗ್ದೈವಿರಿ-ಯಿಂದ ಸಂಶಯಗಳನ್ನು ದೂರಮಾಡುವ ಮಾಯಾಮತವೆಂಬ ಹಿಮವನ್ನು ಕರಗಿಸುವ ಗ್ರೀಷ್ಮನಂತಿರುವ, ಮಧ್ವಸಿದ್ಧಾಂತ ದುಗ್ಧಾಬ್ಧಿಯನ್ನು ಉಕ್ಕಿಸುವ ಚಂದ್ರನಂತಿರುವ ವ್ಯಾಸರಾಜ-ಯತೀಂದ್ರರು ಇಷ್ಟಾರ್ಥಪ್ರದರಾಗಲಿ ಎಂದು ಪ್ರಾರ್ಥಿಸಿದ್ದಾರೆ. ನಾಮಗ್ರಹಣ ಮಾತ್ರ-ದಿಂದಲೇ ಪಾಪರಾಶಿ ನಾಶಮಾಡುವ ಶ್ರೀವ್ಯಾಸರಾಜರ ಮೃತ್ತಿಕಾದರ್ಶನ ಮಾತ್ರ-ದಿಂದಲೇ ಎಲ್ಲ ಅನಿಷ್ಟಗಳು ದೂರವಾಗುವುವೆಂದು ಹೇಳಲಾಗಿದೆ. ಶ್ರೀವ್ಯಾಸರಾಜರ ಗುಣಗಾನ ಮಾಡುವ ಈ ಸ್ತೋತ್ರಪಠಣದಿಂದ, ಶ್ರೀವ್ಯಾಸರಾಜ ಅಷ್ಟಾಕ್ಷರ ಮಂತ್ರವನ್ನು ಭಕ್ತಿಯಿಂದ ಪಠಿಸುವುದರಿಂದಲೂ ಸಕಲ ದುರಿತಗಳು ದೂರವಾಗಿ ಗುರುಭಕ್ತಿ ತನ್ಮೂಲಕ ಅವ್ಯಭಿಚಾರಿಣಿಯಾದ ಹರಿಭಕ್ತಿಯು, ಅದರಿಂದ ಸರ್ವಾರ್ಥಸಿದ್ಧಿಯಾಗುವುದೆಂದು ಫಲ-ವನ್ನು ಇಲ್ಲಿ ರೂಪಿಸಲಾಗಿದೆ. ಚಂದ್ರಮ ಚಂದ್ರಿಕೆ, ಅಮೃತಶಿಲೆ ಹಾಗೂ ನಕ್ಷತ್ರಗಳಿಂದ ಶೋಭಿಸುವಂತೆ, ಶ್ರೀವ್ಯಾಸರಾಜರು ಚಂದ್ರಿಕಾ, ನ್ಯಾಯಾಮೃತ, ತರ್ಕತಾಂಡವಗಳಿಂದ ಕೂಡಿ ಚಂದ್ರನಂತೆ ಶೋಭಿಸುತ್ತಿರುವರೆಂದು ಹೃದಯಂಗಮ ವರ್ಣನೆಯೊಂದಿಗೆ ಈ ಸ್ತೋತ್ರಕೊನೆಗೊಳ್ಳುತ್ತದೆ.

◆ ◆

ವಂದೇ ಮುಕುಂದಮರವಿಂದಭವಾದಿವಂದ್ಯಂ
ಇಂದಿಂದಿರಾ ವ್ರತತಿಮೇಚಕಮಾಕಟಾಕ್ಷೈಃ ।
ಬಂದೀಕೃತಾನನಮಮಂದಮತಿಂ ವಿದಧ್ಯಾತ್
ಆನಂದತೀರ್ಥಹೃದಯಾಂಬುಜಮತ್ತಭೃಂಗಃ ॥ ೧ ॥

ಶ್ರೀವ್ಯಾಸಯೋಗೀ ಹರಿಪಾದರಾಗೀ
ಭಕ್ತಾತಿಪೂಗೀ ಹಿತದಕ್ಷಸಙ್ಗೀ ।
ತ್ಯಾಗೀ ವಿರಾಗೀ ವಿಷಯೇಷು ಭೋಗೀ
ಮುಕ್ತೌ ಸದಾಗೀತಸುರೇಂದ್ರಸಂಗೀ ॥ ೨ ॥

ಲಕ್ಷ್ಮೀಶಪಾದಾಂಬುಜಮತ್ತಭೃಂಗಃ
ಸದಾ ದಶಪ್ರಜ್ಞನಯಪ್ರಸಂಗಃ ।
ಅದ್ವೈತವಾದೇ ಕೃತಮೂಲಭಂಗಃ
ಮಹಾ(ಸದಾ)ವ್ರತೀಶೋ ವಿಷಯೇಷ್ವಸಂಗಃ ॥ ೩ ॥

ಸದಾಸದಾಯತ್ತಮಹಾನುಭಾವಃ
ಭಕ್ತಾಘತೀವ್ರೋಚ್ಚಯತೀವ್ರದಾವಃ ।
ದೌರ್ಜನ್ಯವಿಧ್ವಂಸನದಕ್ಷರಾವಃ
ಶಿಷ್ಯೇಷು ಯೋ ಯಚ್ಛತಿ ದಿವ್ಯಗಾವಃ ॥ ೪ ॥

ಅದ್ವೈತದಾವಾನಲಕಾಲಮೇಘೋ
ರಮಾರಮಸ್ನೇಹವಿದಾರಿತಾಘಃ ।
ವಾಗ್ದೈವಿರೀನಿರ್ಜಿತಸಂಶಯೌಘೋ
ಮಾಯಾಮತವ್ರಾತಹಿಮೇ ನಿದಾಘಃ ॥ ೫ ॥

ಮಧ್ವಸಿದ್ಧಾಂತದುಗ್ಧಾಬ್ಧಿವೃದ್ಧಿಪೂರ್ಣಕಲಾಧರಃ ।
ವ್ಯಾಸರಾಜಯತೀಂದ್ರೋ ಮೇ ಭೂಯಾದೀಪ್ಸಿತಸಿದ್ಧಯೇ ॥ ೬ ॥

ಯನ್ನಾಮಗ್ರಹಣಾದೇವ ಪಾಪರಾಶಿಃ ಪಲಾಯತೇ (ಪ್ರಣಶ್ಯತಿ) ।
ಸೋಽಯಂ ಶ್ರೀವ್ಯಾಸಯೋಗೀಂದ್ರೋ ನಿಹಂತು ದುರಿತಾನಿ ನಃ ॥ ೭ ॥

ಯನ್ಮೃತ್ತಿಕಾದರ್ಶಮಾತ್ರಭೀತಃ ಕ್ವಚಿತ್ ಪಿಶಾಚಸ್ತದನುವ್ರತೇಭ್ಯಃ ।
ದತ್ವಾ ಧನಂ ವಾಂಛಿತಮಾಪ ತಸ್ಮಾತ್ ತೈರ್ಮೋಚಿತಾಯಾಮಚಿರೇಣ ಮುಕ್ತಿಮ್ ॥ ೮ ॥

ಯತ್ಕೌಶಿಕಾನಾಸಿಕಾಮುಕ್ತಜಲಾತ್ ಕಾಂಶ್ಚಕಿತಾನ್ ನರಾನ್ ।
ವ್ಯಾಘ್ರೋ ಮಹಾನಪಿ ಸ್ಪಷ್ಟುಂ ನಾಶಕತ್ ತಮಿಹಾಶ್ರಯೇ ॥ ೯ ॥

ದ್ವಾತ್ರಿಂಶತ್ಸಪ್ತಶತಕರ್ಮೂರ್ತಿರ್ಹನೂಮತಃ ಪ್ರಭೋಃ ।
ಪ್ರತಿಷ್ಠಾತಾ ಸ್ಮೃತಿವ್ಯಾಪ್ತಂ ಭುವೇ ವ್ಯಾಸಯೋಗಿನಮ್ ॥ ೧೦ ॥

ಸೀಮಾನಂ ತತ್ರ ತತ್ರೈತ್ಯ ಕ್ಷೇತ್ರೇಷು ಚ ಮಹಾಮತಿಃ ।
ವ್ಯಮಸ್ಥಾತ್ಯಾತ್ರ ಮರ್ಯಾದಾಂ ಲಬ್ಧವಾಂಸ್ತಮಿಹಾಶ್ರಯೇ ॥ ೧೧ ॥

ಮಧ್ವದೇಶಿಕಸಿದ್ಧಾಂತಪ್ರವರ್ತಕಶಿರೋಮಣಿಃ ।
ಸೋಽಯಂ ಶ್ರೀವ್ಯಾಸಯೋಗೀಂದ್ರೋ ಭೂಯಾದೀಪ್ಸಿತಸಿದ್ಧಯೇ ॥ ೧೨ ॥

ಭೂತಪ್ರೇತಪಿಶಾಚಾದ್ಯಾ ಯಸ್ಯ ಸ್ಮರಣಮಾತ್ರತಃ ।
ಪಲಾಯಂತೇ ಶ್ರೀನರಸಿಂಹಸ್ಥಾನಂ ತಮಹಮಾಶ್ರಯೇ ॥ ೧೩ ॥

ವಾತಗ್ರಹಾ(ಜ್ವರಾ)ದಿರೋಗಾಶ್ಚ ಭಕ್ತ್ಯಾ ಯಮುಪಸೇವತಃ ।
ದೃಢವ್ರತಸ್ಯ ನಶ್ಯಂತಿ ಪಿಶಾಚಾಶ್ಚ ತಮಾಶ್ರಯೇ ॥ ೧೪ ॥

ತಾರಪೂರ್ವಂ ಬಿಂದುಯುಕ್ತಂ ಪ್ರಥಮಾಕ್ಷರಪೂರ್ವಕಮ್ ।
ಚತುರ್ಥ್ಯಂತಂ ಚ ತನ್ನಾಮ ನಮಃ ಶಬ್ದಾದ್ವಿಭೂಷಿತಮ್ ॥ ೧೫ ॥

ಪಾಠಯಂತಂ ಮಾಧ್ವನಯಂ ಮೇಘಗಂಭೀರಯಾ ಗಿರಾ ।
ಧ್ಯಾಯನ್ನಾವರ್ತಯೇದ್ಯಸ್ತು ಭಕ್ತ್ಯಾಮೇಧಾಂ ಸ ವಿಂದತಿ(ತೇ) ॥ ೧೬ ॥

ರತ್ನಸಿಂಹಾಸನಾರೂಢಂ ಚಾಮರೈರಭಿವೀಜಿತಮ್ ।
ಧ್ಯಾಯನ್ನಾವರ್ತಯೇದ್ಯಸ್ತು ಮಹತೀಂ ಶ್ರಿಯಮಾಪ್ನುಯಾತ್ ॥ ೧೭ ॥

ಪ್ರಹ್ಲಾದಸ್ಯಾವತಾರೋಽಸಾವಹೀಶಾನುಪ್ರವೇಶಾನ್ ।
ತೇನ ತತ್ಸೇವಿನಾಂ ನೃಣಾಂ ಸರ್ವಮೇತದ್ಭವೇದ್ಧ್ರುವಮ್ ॥ ೧೮ ॥

ನಮೋ ವ್ಯಾಸಮುನೀಂದ್ರಾಯ ಭಕ್ತಾಭೀಷ್ಟಪ್ರದಾಯಿನೇ ।
ನಮತಾಂ ಕಲ್ಪತರವೇ ಭಜತಾಂ ಕಾಮಧೇನವೇ ॥ ೧೯ ॥

ವ್ಯಾಸರಾಜಗುರೋ ಮಹ್ಯಂ ತ್ವತ್ಪದಾಂಬುಜಸೇವನಾತ್ ।
ದುರಿತಾನಿ ವಿನಶ್ಯಂತು ಯಚ್ಛ ಶೀಘ್ರಂ ಮನೋರಥಾನ್ ॥ ೨೦ ॥

ಯೋ ವ್ಯಾಸತ್ರಯಸಂಜ್ಞಕಾನ್ ದೃಢತರಾನ್ ಮಧ್ವಾರ್ಯಶಾಸ್ತ್ರಾರ್ಥಕಾನ್
ರಕ್ಷದ್ವಜ್ರಶಿಲಾಕೃತೀನ್ ಬಹುಮತಾನ್ ಕೃತ್ವಾ ಪರೈರ್ದುಸ್ತರಾನ್ ।
ಪ್ರಾಯಶ್ಚಕ್ರ್ನಿಜಪಾದಯುಗ್ಮ ಸರಸಿಜಾಸಕ್ತನೃಣಾಂ ಮುದಾ
ಸೋಽಯಂ ವ್ಯಾಸಮುನೀಶ್ವರೋ ಮಮ ಭವೇತ್ ತಾಪತ್ರಯಕ್ಷಾಂತಯೇ ॥ ೨೧ ॥

ಮಧ್ವಭಕ್ತೋ ವ್ಯಾಸಶಿಷ್ಯಪೂರ್ಣಪ್ರಜ್ಞಮತಾನುಗಃ ।
ವ್ಯಾಸರಾಜಮುನಿಶ್ರೇಷ್ಠಃ ಪಾತು ನಃ ಕೃಪಯಾ ಗುರುಃ ॥ ೨೨ ॥

ವ್ಯಾಸರಾಜೋ ವ್ಯಾಸರಾಜ ಇತಿ ಭಕ್ತ್ಯಾ ಸದಾ ಜಪನ್ ।
ಮುಚ್ಯತೇ ಸರ್ವದುಃಖೇಭ್ಯಸ್ತದಂತರ್ಯಾಮಿಣೋ ಬಲಾತ್ ॥ ೨೩ ॥

ಸ್ತವನ್ನನೇನ ಮಂತ್ರೇಣ ವ್ಯಾಸರಾಜಾಯ ಧೀಮತೇ ।
ಅಭಿಷೇಕಾರ್ಚನಾದೀನ್ ಯಃ ಕುರುತೇ ಸ ಹಿ ಮುಕ್ತಿಭಾಕ್ ॥ ೨೪ ॥

ಗುರುಭಕ್ತ್ಯಾ ಭವೇದ್ವಿಷ್ಣುಭಕ್ತಿರವ್ಯಭಿಚಾರಿಣೀ ।
ತಯಾ ಸರ್ವಂ ಲಭೇದ್ಧೀಮಾಂಸ್ತಸ್ಮಾದೇತತ್ ಸದಾ ಪಠೇತ್ ॥ ೨೫ ॥

ನ್ಯಾಯಚಂದ್ರಿಕಯಾ ಯುಕ್ತಂ ನ್ಯಾಯಾಮೃತಕಲಾನಿಧಿಮ್ ।
ತರ್ಕೋದ್ಯತಾಂಡವಕೃತಿಂ ವ್ಯಾಸತೀರ್ಥವಿಧುಂ ಭಜೇ ॥ ೨೬ ॥

॥ ಇತಿ ಶ್ರೀವಿಜಯೀಂದ್ರತೀರ್ಥವಿರಚಿತಂ ಶ್ರೀವ್ಯಾಸರಾಜಸ್ತೋತ್ರಮ್ ॥

✡ ✡ ✡

ಶ್ರೀವ್ಯಾಸರಾಜಸ್ತೋತ್ರಮ್ ಅಥವಾ ಶ್ರೀವ್ಯಾಸರಾಜಗುರುಸಾರ್ವಭೌಮಚರಿತಮ್

◆ ◆

ಶ್ರೀವಿದ್ಯಾರತ್ನಾಕರತೀರ್ಥರು (೧೯.೦೩.೧೯೧೫) ಶ್ರೀವ್ಯಾಸರಾಜರ ಪರಂಪರೆಯಲ್ಲಿ ಶ್ರೀವಿದ್ಯಾಸಮುದ್ರತೀರ್ಥರಿಂದ ಪರಮಹಂಸಾಶ್ರಮವನ್ನು ಪಡೆದವರು. ಇವರು ಬರೆದ ಸುಪ್ರಸಿದ್ಧವಾದ ಶ್ರೀವ್ಯಾಸರಾಜಸ್ತೋತ್ರವಿದು. ಲಕ್ಷ್ಮಿಯನ್ನು ವಕ್ಷಃಸ್ಥಲದಲ್ಲಿ ಧರಿಸಿದ ನರಹರಿಯನ್ನು ನಮಿಸಿ, ಶ್ರೀಮದ್ಗುರೋ ಮೊದಲಾದ ಗುರುಪುಂಗವರನ್ನು ಸೇರಿಸಿ, ಶ್ರೀವ್ಯಾಸರಾಜರ ಮಹಿಮೆಯನ್ನು ಸ್ಮರಿಸುವವರಿಗೆ ವಿಷ್ಣುವಿನ ಪ್ರಸಾದವನ್ನು ದೊರಕಿಸಿಕೊಡಲು ಈ ಚರಿತೆಯನ್ನು ಹೇಳುವನೆಂದು ವಿನಮ್ರವಾಗಿ ಕೃತಿಕಾರರು ನುಡಿದಿದ್ದಾರೆ.

ಶ್ರೀವ್ಯಾಸರಾಜರ ಮಾತಾಪಿತೃಗಳು, ಅವತಾರ, ಬಾಲ್ಯ, ಐದನೆಯ ವರ್ಷದಲ್ಲಿ ಉಪನಯನ, ಶ್ರೀಬ್ರಹ್ಮಣ್ಯತೀರ್ಥರ ಆದೇಶದಂತೆ ಅವರಿಂದಲೇ ತುರೀಯಾಶ್ರಮ ಸ್ವೀಕಾರ, ವಿದ್ಯಾಪ್ರಾಪ್ತಿಗಾಗಿ ಶ್ರೀಪಾದರಾಜರ ಬಳಿಗೆ ಉಪಸತ್ತಿ, ದ್ವಾದಶ ವರ್ಷ ಅಧ್ಯಯನ, ಯದೂದ್ವಹನ ಪಾದಗಳನ್ನರ್ಚಿಸುವ ಅಧಿಕಾರ, ಪರಮತಖಂಡನೆ, ತರ್ಕತಾಂಡವ, ನ್ಯಾಯಾಮೃತ ಮತ್ತು ಚಂದ್ರಿಕಾ ಮೊದಲಾದ ಗ್ರಂಥಗಳ ರಚನೆ. ೭೩೨ ಅಂಜನೇಯನ ಪ್ರತಿಮಾಸ್ಥಾಪನ ಮೊದಲಾದವುಗಳನ್ನು ಈ ಸ್ತೋತ್ರದಲ್ಲಿ ವರ್ಣಿಸಲಾಗಿದೆ.

ಅನಂತರ ಶ್ರೀವ್ಯಾಸರಾಜರ ಮಹಿಮೆಗಳನ್ನು ವರ್ಣಿಸಿ, ಕೊನೆಯಲ್ಲಿ ಈ ವ್ಯಾಸಯತೀಶ ಚಿತ್ರಚರಿತ್ರೆಯನ್ನು ಯಾವನು ಶುದ್ಧಮನಸ್ಸಿನಿಂದ ಪಠಿಸುವನೋ ಅವನಿಗೆ ಭಗವಂತನು ಪ್ರೀತನಾಗುವನೆಂದು ಈ ಸ್ತುತಿಗೆ ಫಲವನ್ನು ಅಂತ್ಯದಲ್ಲಿ ನಿರೂಪಿಸಲಾಗಿದೆ.

◆ ◆

ಲಕ್ಷ್ಮೀಂ ವಕ್ಷಸಿ ಬಿಭ್ರತಂ ನರಹರಿಂ ದೇವಂ ಪ್ರಣಮ್ಯಾಮಿತ
ಪ್ರಜ್ಞಾದೀನ್ ಗುರುಪುಂಗವಾನಪಿ ತಥಾ ಶ್ರೀವ್ಯಾಸಯೋಗೀಶಿತುಃ ।
ಆಸಂಭೂತಿಕೃತಾನಿ ಸಂಸ್ಮೃತಮತೋಽಭೀಷ್ಟಪ್ರದಾನೀಶಿತುಃ
ವಿಷ್ಣೋಃ ಪ್ರೀತಿಕೃತೇ ವದಾಮಿ ಸುಜನಾಸ್ತುಷ್ಯಂತು ಬಾಲೋಕ್ತಿಭಿಃ ॥ ೧ ॥

ರಾಮಾಚಾರ್ಯಸುಧೀಮಣೇರ್ದಯಿತಯೋ ಗರ್ಭೇದೃತಃ ಶ್ರೀಮತೋ
ಬ್ರಹ್ಮಣಸ್ಯ ಯತೀಶಿತುಃ ಕರುಣಯಾ ಸಂವತ್ಸರೇಷ್ವಾದಿಮೇ ।
ವೈಶಾಖಾದಿಮಪಕ್ಷಕೇ ದಿನಮಣೇರ್ವಾರೇ ದಿನೇ ಸಪ್ತಮೇ
ಪ್ರಹ್ಲಾದೋಽವತತಾರ ಭೂಮಿವಲಯೇ ನಾಗಾಧಿಪಸ್ಯಾಂಶಭೃತ್ ॥ ೨ ॥

ಅಬ್ದೇ ಪಂಚಮತಾಯುತೇ ವಟುರಭೂತ್ತುರ್ಯಾಶ್ರಮಂ ಶ್ರೀಮುಖೇ
ಜಗ್ರಾಹಾಥ ಯತೀಶಿತುರ್ವಚನತೋ ಬ್ರಹ್ಮಣ್ಯನಾಮ್ನೋ ಗುರೋಃ ।
ವಿದ್ಯಾಪ್ರಾಪ್ತಿಕೃತೇ ಯತೀಶಮಗಮಚ್ಛ್ರೀಪಾದರಾಜಾಭಿಧಮ್
ಅಬ್ದಾನ್ ದ್ವಾದಶ ತತ್ರ ವಾಸಮಕರೋತ್ ಶೃಣ್ವನ್ ಮಹೇಕ್ಷಾಗಮಮ್ ॥ ೩ ॥

ಅಬ್ದೇ ಸರ್ವಜಿದಾಹ್ವಯೇ ಯತಿವರೋ ವೈಶಾಖಮಾಸಾಸಿತ
ದ್ವಾದಶ್ಯಾಮಗಮದ್ಯದೂದ್ವಹಪದಾಬ್ಜಾರ್ಚಾಧಿಕಾರಂ ಮುನೇಃ ।
ಬ್ರಹ್ಮಣ್ಯಾಭಿಧಯೋಯುತಾದಥ ತತಾನಾಯಂ ಪರೈರ್ದುಷ್ಕರಾನ್
ಗ್ರಂಥಾನ್ ಸಾಮೃತತರ್ಕತಾಂಡವಮುಖಾನಷ್ಟೌ ಹರೇಃ ಪ್ರೀತಯೇ ॥ ೪ ॥

ಮೂರ್ತಿಸ್ಸಪ್ತಶತಂ ಪ್ಲವಂಗಮಪತೇರ್ದ್ವಾತ್ರಿಂಶದಪ್ಯಂಜನಾ-
ಸೂನೋರ್ನಿರ್ಮಮ ಈಶತೋಷಣಕೃತೇ ರೌದ್ರಾಹ್ವಯಾಬ್ದೇ ಶಕೇ ।
ಶಾಲೀವಾಹನನಾಮ್ನಿ ಯುಗ್ಮಯುಗಳಂ ಚತ್ವಾರಿಚೈಕಂ ಲಿಖನ್
ಯಾಂ ಸಂಖ್ಯಾ ಮನಸಾ ದಧಾತಿ ತದಿಯಂ ಸಂಖ್ಯಾಯುತಃ ಪೂರ್ಯತೇ ॥ ೫ ॥

ಅಬ್ದೇ ತಾದೃಶಿ ಯಾವನಾಧಿಪತಿತೋ ಲೇಭೇ ಮಹಾವೈಭವಂ
ಭೇರ್ಯುಷ್ಟ್ರಾದ್ಯನನ್ಯಲಭ್ಯಮುರುಣಾ ತುಷ್ಟಾನ್ಮಹಿಮ್ನಾತ್ಮನಃ ।
ಅಬ್ದೇ ವಿಕ್ರಮ ನಾಮಕೇಽಂತಿಮದಿನೇ ಮಾಘಸ್ಯ ಕೃಷ್ಣಾಭಿದಂ
ಶ್ರೀಮಂತಂ ಗಜಗಹ್ವರಾವನಿಭೃತಂ ಸೋಪಾತ್ಕುಹೂತ್ರಾಪದಃ ॥ ೬ ॥

ತತ್ಸಿಂಹಾಸನಮಾರುಹನ್ ಪ್ರಚುರಭೂದಾನಾದಿ ಸಂಸಾಧಯನ್
ತದ್ರಾಜ್ಯಂ ಪುನರಾರ್ಪಯತ್ ಕ್ಷಿತಿಭೃತೇ ಕೃಷ್ಣಾಭಿಧಾನಾಯ ಸಃ ।
ತತ್ಸಂವತ್ಸರಗತಾಂತ್ಯ ಮಾಸಿಧವಳೇ ಪಕ್ಷೇ ಹರೇರ್ವಾಸರೇ-
ಪ್ಯಂತೇ ವ್ಯಾಸಸಮುದ್ರನಾಮಕಮದಾದ್ಗ್ರಾಮಂ ಸಚಾಸ್ಮೈ ನೃಪಃ ॥ ೭ ॥

ನಿರ್ಮಾಯಾತ್ರ ತಟಾಕಮೇಷ ಯತಿರಾಟ್ ಪ್ರತ್ಯೂಹಮಂಭಃ ಸೃತೌ
ಶೂದ್ರಂ ಕಂಚನ ಕಾಲವಾಹನ ಬೃಹಚ್ಛ್ರೀಂಗಾಗ್ರತೋಽಭೀಭೀದತ್ ।
